# Current affairs of July 2020 from KPSC Vaani



# Current affairs of July 2020 from KPSC Vaani

## 01 07 2020 ಕೊರೋನಾ ವಿರುದ್ಧ ಭಾರತದ ಮೊದಲ ಲಸಿಕೆ 'ಕೊವಾಕ್ಸಿನ್' ಮಾನವ ಪ್ರಯೋಗಕ್ಕೆ ಡಿಸಿಜಿಐ ಅನುಮತಿ




ಹೈದರಾಬಾದ್ : ಇಡೀ ವಿಶ್ವವೇ ಕೊರೋನಾ ವೈರಸ್ ನಿಂದ ತತ್ತರಿಸಿರುವ ಹಿನ್ನಲೆ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯು ಕೋರೋಣ ವಿರುದ್ಧದ ಹೋರಾಟಕ್ಕೆ ಮೊದಲ ಲಸಿಕೆ 'ಕೊವಾಕ್ಸಿನ್ ' ಸಿದ್ಧಪಡಿಸಿದೆ. ಈ ಲಸಿಕೆಯನ್ನು ಮಾನವ ಪ್ರಯೋಗಕ್ಕೆ ಒಳಪಡಿಸಲು ಹೈದರಾಬಾದ್ ಮೂಲದ ಲಸಿಕೆ ತಯಾರಿಕ ಕಂಪನಿ ಭಾರತ್ ಬಯೋಟೆಕ್ ಗೆ ಡ್ರುಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (DCGI)ಅನುಮತಿ ನೀಡಿದೆ. ಈ ಮೂಲಕ ಮಾನವ ಪ್ರಯೋಗಕ್ಕೆ ಅನುಮತಿ ಪಡೆದ ದೇಶದ ಮೊದಲ ದೇಶಿಯ ಕೋರೋಣ ಔಷಧಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

## 01 07 2020 ದೆಹಲಿಯಲ್ಲಿ ಪ್ಲಾಸ್ಮಾ ಬ್ಯಾಂಕ್ ಆರಂಭ:ಕೇಜ್ರಿವಾಲ್



ಹೊಸದಿಲ್ಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ಲಾಸ್ಮಾ ಬ್ಯಾಂಕ್ ಆರಂಭಿಸುವದಾಗಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ. ಶೀಘ್ರದಲ್ಲಿಯೇ ಸರಕಾರಿ ಸ್ವಾಮ್ಯದ ಇನ್‌ಸ್ಟಿಟ್ಯೂಟ್ ಆಫ್ ಲಿವರ್ ಆಯಂಡ್ ಬಿಲಿಯರಿ ಸೈನ್ಸಸ್‌ನಲ್ಲಿ ಪ್ಲಾಸ್ಮಾ ಬ್ಯಾಂಕ್ ಆರಂಭಗೊಳ್ಳಲಿದ್ದು, ಕೋರೋಣ ಸೋಂಕು ಪೀಡಿತನಿಗೆ ಪ್ಲಾಸ್ಮಾ ಅಗತ್ಯವಿದ್ದರೆ ಸರಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ಈ ಸಂಸ್ಥೆಯನ್ನು ಸಂಪರ್ಕಿಸಬಹುದು ಅವರು ತಿಳಿಸಿದ್ದಾರೆ. ಪ್ಲಾಸ್ಮಾ ದಾನಕ್ಕೆ  ಮನವಿ : ಪ್ಲಾಸ್ಮಾ ಬ್ಯಾಂಕ್ ಯಶಸ್ವಿಯಾಗಬೇಕಾದರೆ ಕೋವಿಡ್ 19 ಸೋಂಕಿನಿಂದ ಈಗಾಗಲೇ ಗುಣಮುಖರಾದಸ್ವಯಂಪ್ರೇರಿತರಾಗಿಪ್ಲಾಸ್ಮಾದಾನಕ್ಕೆಮುಂದೆಬರಬೇಕುಎಂದುಕೇಜ್ರಿವಾಲ್ಅವರು ಮನವಿ ಮಾಡಿದ್ದಾರೆ.

* ಕೋವಿಡ್ 19 ಚಿಕಿತ್ಸೆಗೆ ಪ್ಲಾಸ್ಮಾ ಬ್ಯಾಂಕ್ ಸ್ಥಾಪನೆ ದೇಶದಲ್ಲಿ ಇದೇ ಮೊದಲು.

# Current affairs of July 2020 from KPSC Vaani

### 01 07 2020 ಸುಮಾರು1,48,938ಕೋಟಿರೂ.ಆಹಾರಧಾನ್ಯಗಳುಹಾಗೂ ಬೇಳೆಕಾಳುಗಳನ್ನು ಏಪ್ರಿಲ್ ನಿಂದನವೆಂಬರ್ ವರೆಗೆ ವಿತರಣೆ




2020 ನೇ ವರ್ಷದ ಏಪ್ರಿಲ್‌ನಿಂದ ನವೆಂಬರ್ ವರೆಗೆ 8 ತಿಂಗಳ ಅವಧಿಯಲ್ಲಿ ಪ್ರಧಾನ್ ಮಂತ್ರಿ ಗರಿಬ್ ಕಲ್ಯಾಣ್ ಯೋಜನೆ ಅಡಿಯಲ್ಲಿ ಅಂದಾಜು 1,48,938ಕೋಟಿ ರೂ.ಗಳ ಆಹಾರ ಧಾನ್ಯಗಳು (ಅಕ್ಕಿ ಮತ್ತು ಗೋಧಿ) ಮತ್ತು ದ್ವಿದಳ ಧಾನ್ಯಗಳನ್ನು ವಿತರಿಸಲಾಗುವುದು ಎಂದು ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಅಂದಾಜು ಮಾಡಿದೆ. ಹಿಂದಿನ ಮೂರು ತಿಂಗಳ ಏಪ್ರಿಲ್ ನಿಂದ ಜೂನ್ ವರೆಗೆ ಟಾರ್ಗೆಟೆಡ್ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ (ಟಿಪಿಡಿಎಸ್) ಆಧರಿಸಿ ಈ ಅಂದಾಜು ಮೊತ್ತವನ್ನು ಲೆಕ್ಕಹಾಕಲಾಗಿದೆ.
* ಯೋಜನೆಯಡಿಯಲ್ಲಿ, ಫಲಾನುಭವಿ ಕುಟುಂಬದ ಪ್ರತಿ ಸದಸ್ಯರಿಗೆ ತಿಂಗಳಿಗೆ 5 ಕೆಜಿ ಅಕ್ಕಿ / ಗೋಧಿಯನ್ನು ಉಚಿತವಾಗಿ ನೀಡಲಾಗುತ್ತದೆ, ಅಲ್ಲದೆ ಪ್ರತಿ ಫಲಾನುಭವಿ ಕುಟುಂಬಕ್ಕೆ ತಿಂಗಳಿಗೆ 1 ಕೆಜಿ ದ್ವಿದಳ ಧಾನ್ಯಗಳನ್ನು ನೀಡಲಾಗುತ್ತದೆ.

### 01 07 2020 ಕೇಂದ್ರೀಕೃತ ವ್ಯವಸ್ಥೆಯಡಿಯಲ್ಲಿ ಸ್ಟ್ಯಾಂಪ್ ಡ್ಯೂಟಿ ಸಂಗ್ರಹ ಜಾರಿ



ಹಣಕಾಸು ಕಾಯ್ದೆ 2019 ರ ಮೂಲಕ, 1899 ರ ಭಾರತೀಯ ಅಂಚೆಚೀಟಿ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ತಿದ್ದುಪಡಿಗಳ ಅನುಸಾರ ಇದೆ ಜುಲೈ 1, 2020 ರಿಂದ ಏಕೀಕೃತ ದರದೊಂದಿಗೆ ಸ್ಟ್ಯಾಂಪ್ ಡ್ಯೂಟಿ ಸಂಗ್ರಹ ಜಾರಿಗೆ ಬರಲಿದೆ. ಮಾರುಕಟ್ಟೆಯನ್ನು ವಿಸ್ತರಿಸಲು ಮತ್ತು ಸುಲಭವಾದ ವ್ಯವಹಾರವನ್ನು ಹೆಚ್ಚಿಸಲು ಈ ತಿದ್ದುಪಡಿಗಳನ್ನು ಮಾಡಲಾಗಿದೆ.
* ಈ ತಿದ್ದುಪಡಿಯನುಸಾರ ಎಲ್ಲಾ ಹಣಕಾಸು ಭದ್ರತಾ ವಹಿವಾಟುಗಳಿಗೆ ಎಲ್ಲಾ ರಾಜ್ಯಗಳಲ್ಲಿ ಏಕರೂಪದ ಅಂಚೆಚೀಟಿ ವಿಧಿಸಲಾಗುವುದು.

# Current affairs of July 2020 from KPSC Vaani

## 01 07 2020 ಜುಲೈ 1 : ರಾಷ್ಟ್ರೀಯ ವೈದ್ಯರ ದಿನ



ತಮ್ಮ ಸಮರ್ಪಿತ ಸೇವೆಗಾಗಿ ವೈದ್ಯರಿಗೆ ಕೃತಜ್ಞತೆ ಸಲ್ಲಿಸಲು, ಪ್ರತಿ ವರ್ಷ ಜುಲೈ 1 ರಂದು ಭಾರತದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಭಾರತದ ಹೆಸರಾಂತ ವೈದ್ಯರಾದ ಡಾ.ಬಿಧಾನ್‌ಚಂದ್ರರಾಯ್ ಅವರಜನ್ಮ ಮತ್ತು ಮರಣದ ದಿನವಾದ ಜುಲೈ01ನ್ನು ಭಾರತದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆಯಾಗಿ ಆಚರಿಸಲು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಆಯ್ಕೆ ಮಾಡಲಾಯಿತು, ಹಾಗೂ ಮೊದಲ ರಾಷ್ಟ್ರೀಯ ವೈದ್ಯರ ದಿನವನ್ನು 1991 ರಲ್ಲಿ ಆಚರಿಸಲಾಯಿತು.2020ರ ರಾಷ್ಟ್ರೀಯ ವೈದ್ಯರ ದಿನದ ಥೀಮ್(ಘೋಷವಾಕ್ಯ) : COVID19 ರ ಮರಣವನ್ನು ಕಡಿಮೆ ಮಾಡಿ (Lessen the Mortality of COVID 19)

## 02 07 2020 ICC ಎಲೈಟ್ ಪ್ಯಾನೆಲ್‌ಗೆ ಭಾರತದ ಯುವ ಅಂಪೈರ್ ನಿತಿನ್ ಮೆನನ್ ಆಯ್ಕೆ




ನವದೆಹಲಿ : ಭಾರತದ ಯುವ ಅಂಪೈರ್ ನಿತಿನ್ ಮೆನನ್ ಅವರು 2020 21ರ ಸೀಸನ್‌ಗಾಗಿ ಇಂಟರ್ ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ ಎಲೈಟ್ ಪ್ಯಾನೆಲ್‌ನಲ್ಲಿ ಆಯ್ಕೆಯಾಗಿದ್ದಾರೆ. ಈ ಮೂಲಕ ಇಂಟರ್ ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ ಎಲೈಟ್ ಪ್ಯಾನೆಲ್‌ನಲ್ಲಿ ಆಯ್ಕೆಯಾದ 3 ನೇ ಅಂಪೈರ್ ಆಗಿರುತ್ತಾರೆ.
* ಇವರು ಇಂಗ್ಲೆಂಡ್‌ನ ಅಂಪೈರ್ ನಿಗೆಲ್ ಲಾಂಗ್ ಅವರ ಬದಲಿಗೆ ಆಯ್ಕೆಗೊಂಡಿದ್ದಾರೆ.
* 36 ರ ಹರೆಯದ ನಿತಿನ್ ಮೆನನ್ ಈವರೆಗೆ 3 ಟೆಸ್ಟ್ ಪಂದ್ಯಗಳು, 24 ಏಕದಿನ ಪಂದ್ಯಗಳು ಮತ್ತು 16 T20 ಪಂದ್ಯಗಳಲ್ಲಿ ಅಂಪೈರ್ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.
* ನಿತಿನ್ ಮೆನನ್ ಅವರಿಗೂ ಮೊದಲು ಐಸಿಸಿ ಎಲೈಟ್ ಪ್ಯಾನೆಲ್‌ಗೆ ಭಾರತದಿಂದ ಮಾಜಿ ನಾಯಕ ಶ್ರೀನಿವಾಸ್ ವೆಂಕಟ್ರಾಘವನ್ ಮತ್ತು ಸುಂದರಂ ರವಿ ಆಯ್ಕೆಯಾಗಿದ್ದರು.

# Current affairs of July 2020 from KPSC Vaani

**02 07 2020 ಸಣ್ಣ ಉದ್ದಿಮೆಗಳಿಗೆ ನೆರವು ನೀಡುವದಾಗಿ ವಿಶ್ವ ಬ್ಯಾಂಕ್ ಘೋಷಣೆ**




ನವದೆಹಲಿ: ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಭಾರತದ ಸುಮಾರು 15 ಕೋಟಿ ಸಣ್ಣ ಉದ್ದಿಮೆಗಳಿಗೆ ₹ 5,625 ಕೋಟಿ ರೂಪಾಯಿಯಷ್ಟು ನೆರವು ನೀಡುವುದಾಗಿ ವಿಶ್ವ ಬ್ಯಾಂಕ್ ಘೋಷಿಸಿದೆ. ವಿಶ್ವ ಬ್ಯಾಂಕ್ ಈಗಾಗಲೇ ಸಾಮಾಜಿಕ ಮತ್ತು ಆರೋಗ್ಯ ವಲಯಕ್ಕೆ ₹ 15 ಸಾವಿರ ಕೋಟಿ ಮೊತ್ತದ ಆರ್ಥಿಕ ನೆರವು ಘೋಷಿಸಿದೆ, ಈ ಮೂಲಕ ವಿಶ್ವಬ್ಯಾಂಕಿನ ಒಟ್ಟಾರೆ ನೆರವಿನ ಮೊತ್ತವು ₹20,625 ಕೋಟಿಗೆ ತಲುಪಿದೆ.

* ಬ್ಯಾಂಕ್ ಅಥವಾ ಎಸ್‌ಐಡಿಬಿಐ ಮೂಲಕ ಮಾರುಕಟ್ಟೆಗೆ ನಗದು ಪೂರೈಕೆ ಮಾಡಲು ಆರ್‌ಬಿಐ ಸೂಕ್ತ ಕ್ರಮ ಕೈಗೊಂಡಿರುವದಾಗಿ ವಿಶ್ವ ಬ್ಯಾಂಕ್‌ನ ಭಾರತದ ನಿರ್ದೇಶಕ ಜುನೈದ್ ಅಹ್ಮದ್ ಮಾಹಿತಿ ನೀಡಿದ್ದಾರೆ.

**02 07 2020 ಐಸಿಸಿಮುಖ್ಯಸ್ಥಹುದ್ದೆತ್ಯಜಿಸಿದಭಾರತೀಯಶಶಾಂಕ್**



ದುಬೈ : ಭಾರತೀಯ ಶಶಾಂಕ್ ಮನೋಹರ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ICC) ಮುಖ್ಯಸ್ಥರ ಹುದ್ದೆಯಿಂದ ಕೆಳಗಿಳಿದ್ದಾರೆ. ಪ್ರಸ್ತುತ ಈ ಹುದ್ದೆಯನ್ನು ಉಪ ಮುಖ್ಯಸ್ಥರಾಗಿರುವ ಇಮ್ರಾನ್ ಖ್ವಾಜಾ ಹಂಗಾಮಿಯಾಗಿ ಮುಖ್ಯಸ್ಥರಾಗಲಿದ್ದಾರೆ.

* ನಾಗಪುರದ ಶಶಾಂಕ್ ಮನೋಹರ ಅವರು ಐಸಿಸಿಗೆ ನೇಮಕವಾದ ಮೊದಲ ಸ್ವತಂತ್ರ ಮುಖ್ಯಸ್ಥರಾಗಿದ್ದರು. ಎರಡು ವರ್ಷಗಳ ಎರಡು ಅವಧಿಯನ್ನು ಮುಕ್ತಾಯಗೊಳಿಸಿ ಈ ಸ್ಥಾನ ಬಿಟ್ಟುಕೊಟ್ಟಿದ್ದಾರೆ.

# Current affairs of July 2020 from KPSC Vaani

## 02 07 2020 ವಿಶ್ವಸಂಸ್ಥೆ ಭಾರತದ ಖಾಯಂ ಪ್ರತಿನಿಧಿಯಾಗಿ IFS ಅಧಿಕಾರಿ ಇಂದ್ರಮಣಿ ಪಾಂಡೆ ನೇಮಕ




ನವದೆಹಲಿ : ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿಯಾಗಿ ಕೇಂದ್ರ ಸರ್ಕಾರವು ಹಿರಿಯ ಐಎಫ್ಎಸ್ ಅಧಿಕಾರಿ ಇಂದ್ರಮಣಿ ಪಾಂಡೆ ಅವರನ್ನು ನೇಮಸಿ ಆದೇಶ ಹೊರಡಿಸಿದೆ.

* 1990ರ ಸಾಲಿನ ಐಎಫ್ಎಸ್ ಅಧಿಕಾರಿಯಾಗಿರುವ ಇಂದ್ರಮಣಿ ಪಾಂಡೆಯವರು ಈ ಮೊದಲು 2015ರಲ್ಲಿ ಓಮನ್‌ನಲ್ಲಿ ಭಾರತೀಯ ರಾಯಭಾರಿಯಾಗಿ ಸೇವೆಸಲ್ಲಿಸಿದ್ದಾರೆ. ಅಲ್ಲದೆ, ಪ್ಯಾರಿಸ್‌ನಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಅಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ.

* ವಿಶ್ವ ಸಂಸ್ಥೆ ಕೇಂದ್ರ ಕಚೇರಿ : ಜಿನೇವಾ

## 02 07 2020 ವೈದ್ಯರದಿನ : ಪಶ್ಚಿಮ ಬಂಗಾಳದಲ್ಲಿ ರಾಜ್ಯದ ರಜೆ ದಿನವನ್ನಾಗಿ ಘೋಷಣೆ



ಪಶ್ಚಿಮ ಬಂಗಾಳ : ವೈದ್ಯರ ದಿನವನ್ನು ರಾಜ್ಯದ ರಜೆ ದಿನವನ್ನಾಗಿ ಘೋಷಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆದೇಶಿಸಿದ್ದಾರೆ. ಪ್ರತಿ ವರ್ಷ ಜುಲೈ ತಿಂಗಳ ಒಂದನೇ ತಾರೀಕಿನಂದು ಆಚರಿಸಲಾಗುತ್ತಿದ್ದು, ರಾಜ್ಯದಲ್ಲಿ ಕೋವಿಡ್ ವಿರುದ್ಧ ಎಲ್ಲಾ ವೈದ್ಯರು, ವೈದ್ಯಕೀಯ ವೃತ್ತಿಪರರು, ಅರೆವೈದ್ಯಕೀಯ ಸಿಬ್ಬಂದಿಗಳು ಹೋರಾಡುತ್ತಿದ್ದು, ತಮ್ಮ ಸುರಕ್ಷತೆ ಮತ್ತು ಆರೋಗ್ಯಕ್ಕಿಂತ ಹೆಚ್ಚಾಗಿ ಜನರ ಆರೋಗ್ಯ ಪ್ರಾಣ ರಕ್ಷಣೆ ಮಾಡುವಲ್ಲಿ ತೊಡಗಿಸಿಕೊಂಡಿರುವ ಇವರಿಗೆ ಗೌರವ ಸೂಚಿಸುವ ನಿಟ್ಟಿನಲ್ಲಿ ವೈದ್ಯರ ದಿನವನ್ನು ರಾಜ್ಯ ರಜೆ ದಿನವನ್ನಾಗಿಸುವುದು ಈ ಎಲ್ಲ ಯೋಧರಿಗೆ ಗೌರವ ತೋರಿಸದಂತಾಗುತ್ತದೆ ಎಂದು ಮಮತಾ ಬ್ಯಾನರ್ಜಿಯವರು ತಿಳಿಸಿದ್ದಾರೆ.

# Current affairs of July 2020 from KPSC Vaani

### 03 07 2020 ಭಾರತಿ ಏರ್‌ಟೆಲ್‌ನಲ್ಲಿ 235 ಮಿಲಿಯನ್ ಡಾಲರ್ ಹೂಡಿಕೆ ಮಾಡಿದ ಅಮೇರಿಕಾ ಮೂಲದ ಸಂಸ್ಥೆ




ನವದೆಹಲಿ : ಅಮೆರಿಕಾ ಮೂಲದ ಸಂಸ್ಥೆಯಾದ ಕಾರ್ಲೈಲ್ ಗ್ರೂಪ್ ತನ್ನ ಡೇಟಾ ಸೆಂಟರ್ ವ್ಯವಹಾರವಾದ ನೆಕ್ಸ್ಟ್ರಾ ಡಾಟಾ ಲಿಮಿಟೆಡ್ ಮೂಲಕ ಏರ್‌ಟೆಲ್‌ನಲ್ಲಿ 235 ಮಿಲಿಯನ್ ಡಾಲರ್ ಮೊತ್ತದ ಹೂಡಿಕೆ ಮಾಡಲಿದ್ದು, ಈ ಮೂಲಕ ಏರ್ಟೆಲ್ ಸಂಸ್ಥೆಯ ಶೇಕಡಾ 25ರಷ್ಟು ಪಾಲನ್ನು ತನ್ನದಾಗಿಸಿಕೊಳ್ಳಲಿದೆ ಎಂದು ಭಾರ್ತಿ ಏರ್‌ಟೆಲ್ ತಿಳಿಸಿದೆ.

### 03 07 2020 ರಷ್ಯಾದಿಂದ 33 ಫೈಟರ್ ವಿಮಾನ ಖರೀದಿಗೆ ಕೇಂದ್ರ ಸರ್ಕಾರದಿಂದ ಗ್ರೀನ್ ಸಿಗ್ನಲ್




ಭಾರತ ಚೀನಾ ಗಡಿಯಲ್ಲಿ ಪ್ರಸ್ತುತ ತಲೆದೋರಿರುವ ವಿವಾದದ ಈ ಸಂದರ್ಭದಲ್ಲಿ ಕೇಂದ್ರ ರಕ್ಷಣಾ ಸಚಿವಾಲಯವು ಮತ್ತಷ್ಟು ಶಸ್ತ್ರಾಸ್ತ್ರ ಖರೀದಿ ಮೂಲಕ ಭಾರತೀಯ ಸೇನೆಯ ಬಲವನ್ನು ಹೆಚ್ಚಿಸಲು ಮುಂದಾಗಿದೆ.
*ರಷ್ಯಾದಿಂದ33ಹೊಸಫೈಟರ್‌ಜೆಟ್‌ವಿಮಾನಗಳು,12Su 30MKIsand21 MiG 29ಜೊತೆಗೆ ಪ್ರಸ್ತುತಸೇನೆಬಳಿಇರುವMiG 29ವಿಮಾನಗಳಉನ್ನತೀಕರಣಕ್ಕೆಸಮ್ಮತಿ ಸೂಚಿಸಲಾಗಿದೆ.
*ಈಒಪ್ಪಂದದ ಒಟ್ಟುಮೌಲ್ಯ18,148ಕೋಟಿರೂಪಾಯಿಗಳಾಗಿದ್ದು,ಭಾರತ ಸೇನೆಈಒಪ್ಪಂದದಿಂದಾಗಿ ಬರುವದಿನಗಳಲ್ಲಿ ಮತ್ತಷ್ಟು ಬಲಿಷ್ಟವಾಗಲಿದೆ.

# Current affairs of July 2020 from KPSC Vaani

## 03 07 2020 RelianceJioದಲ್ಲಿ ಹೂಡಿಕೆಮಡಿದ ಇಂಟೆಲ್ ಸಂಸ್ಥೆ: ಏರಿಕೆ ಕಂಡ ರಿಲಾಯನ್ಸ್ ಷೇರು ಮೌಲ್ಯ

ಮುಂಬೈ : ಮುಕೇಶ್ ಅಂಬಾನಿ ಒಡೆತನದ ರಿಲಾಯನ್ಸ್ ಇಂಡಸ್ಟ್ರೀಸ್ ಅಡಿಯಲ್ಲಿ ಬರುವ ಜಿಯೋ ಸಂಸ್ಥೆಯಲ್ಲಿ ಈಗಾಗಲೇ ಹಲವು ಸಂಸ್ಥೆಗಳು ಹೂಡಿಕೆ ಮಾಡಿದ್ದು, ಈ ಸಾಲಿಗೆ ಈಗ ಅಮೆರಿಕ ಮೂಲದ ಟೆಕ್ನಾಲಜಿ ಕಂಪನಿ ಇಂಟೆಲ್ ಕೂಡ ಸೇರಿಕೊಂಡಿದೆ. ಈ ಮೂಲಕ ಜಿಯೋದಲ್ಲಿ ಕೇವಲ 11 ವಾರಗಳಲ್ಲಿ 12ನೇ ಹೂಡಿಕೆ ಇದಾಗಿದೆ. ಇಂಟೆಲ್ ಜಿಯೋದ 0.39 ಪಾಲನ್ನು 1894 ಕೋಟಿ ರೂಪಾಯಿಗೆ ಖರೀದಿಸಿದೆ. ಈ ಹಿನ್ನಲೆ ರಿಲಾಯನ್ಸ್ ಷೇರಿನ ಮೌಲ್ಯ ಹೆಚ್ಚಿದೆ.
* ಇಂಟೆಲ್‌ನ ಹೂಡಿಕೆಯನ್ನು ಒಳಗೊಂಡಂತೆ ಜಿಯೋ ಈವರೆಗೆ 1,17,588.45 ಕೋಟಿ ರೂಪಾಯಿ ಕಲೆ ಹಾಕಿದಂತಾಗಿದೆ.
* ಮೊದಲ ಬಾರಿಗೆ ಸಾಮಾಜಿಕ ಜಾಲತಾಣದ ದಿಗ್ಗಜ ಫೇಸ್‌ಬುಕ್, ಜಿಯೋದ ಶೇ. 9.9ಷೇರನ್ನು ಖರೀದಿ ಮಾಡಿದ ನಂತರ ಹಲವು ಸಂಸ್ಥೆಗಳು ಜಿಯೋದಲ್ಲಿ ಹೂಡಿಕೆ ಮಾಡಿದವು.

## 03 07 2020 2036ರವರೆಗೆ ಅಧಿಕಾರದಲ್ಲಿ ಮುಂದುವರಿಯಲಿರುವ ಪುಟಿನ್..!



ಮಾಸ್ಕೋ (ರಶಿಯಾ) : ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ 2036ರವರೆಗೆ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡುವ ಸಂವಿಧಾನ ತಿದ್ದುಪಡಿ ಅನುಮೋದನೆಗೆ ರಷ್ಯಾ ದೇಶವ್ಯಾಪಿ ನಡೆದ ಮತದಾನದಲ್ಲಿ ಭಾರೀ ಸಂಖ್ಯೆಯಲ್ಲಿ ರಷ್ಯನ್ನರು ಬೆಂಬಲಿಸಿರುವದಾಗಿ ಆಂಶಿಕ ಫಲಿತಾಂಶಗಳು ತಿಳಿಸಿವೆ.
* ಒಟ್ಟು ಏಳು ದಿನ ನಡೆದ ಮತದಾನ ಪ್ರಕ್ರಿಯೆ ಕೊನೆಯಲ್ಲಿ 60 ಶೇಕಡ ಮತ ಎಣಿಕೆ ಪೂರ್ಣಗೊಂಡಿದ್ದು, ಇವುಗಳ ಪೈಕಿ 76.9 ಶೇಕಡ ಮತದಾರರು ಪುಟಿನ್ ಸುಧಾರಣೆಗಳಿಗೆ ಬೆಂಬಲ ಸೂಚಿಸಿದ್ದಾರೆ ಎಂದು ಕೇಂದ್ರೀಯ ಚುನಾವಣಾ ಆಯೋಗ ತಿಳಿಸಿದೆ.

# Current affairs of July 2020 from KPSC Vaani

### 03 07 2020 ಕೊವಿಡ್19:ಆಗಸ್ಟ್15ಕ್ಕೆ ಸ್ವದೇಶಿ ಲಸಿಕೆ ಕೊವ್ಯಾಕ್ಸಿನ್ ಬಿಡುಗಡೆ




ಹೈದರಾಬಾದ್ : ಕೊರೊನಾವೈರಸ್ ವಿರುದ್ಧ ಲಸಿಕೆ/ಔಷಧ ಕಂಡು ಹಿಡಿಯಲು ಭಾರತವು ಸೇರಿ ವಿಶ್ವದ ಹಲವು ವಿಜ್ಞಾನಿಗಳು ಮತ್ತು ಸಂಶೋಧಕರು ಶ್ರಮಿಸುತ್ತಿರುವ ಹಿನ್ನಲೆಯಲ್ಲೇ, ಸ್ವದೇಶಿ ಲಸಿಕೆ "ಕೊವ್ಯಾಕ್ಸಿನ್" ಗೆ 'ಡ್ರಗ್ ಕಂಟ್ರೋಲರ್ ಜನರಲ್ ಅಫ್ ಇಂಡಿಯಾ'(ಡಿಸಿಜಿಐ)ದ ಅನುಮತಿ ಸಿಕ್ಕಿದ್ದು, ಕ್ಲಿನಿಕಲ್ ಟ್ರಯಲ್ ಪ್ರಕ್ರಿಯೆ ಜಾರಿಯಲ್ಲಿದೆ. ಈ ಲಸಿಕೆಯನ್ನು ಬರುವ ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ದಿನದಂದು ಮಾರುಕಟ್ಟೆಗೆ ತರಲು ಯೋಜಿಸಲಾಗಿದೆ.
* ಹೈದರಾಬಾದ್ ಮೂಲದ ಲಸಿಕೆ ತಯಾರಕ ಕಂಪನಿ ಭಾರತ್ ಬಯೋಟೆಕ್ ಸಂಸ್ಥೆಯು ಈ ಕೊವ್ಯಾಕ್ಸಿನ್ ಲಸಿಕೆಯನ್ನು ಸಿದ್ದಪಡಿಸಿದ್ದು, ಕ್ಲಿನಿಕಲ್ ಟ್ರಯಲ್ ಗೆ ಬಳಸಬಹುದು ಎಂದು ಡ್ರಗ್ ಕಂಟ್ರೋಲರ್ ಜನರಲ್ ಅಫ್ ಇಂಡಿಯಾ(ಡಿಸಿಜಿಐ) ಈಗಾಗಲೇ ಅನುಮತಿ ನೀಡಿದೆ.

### 05 07 2020 ಭಾರತೀಯ ರೈಲ್ವೆಯ ಅತಿ ಉದ್ದದ 'ಶೇಷ್‌ನಾಗ್' ರೈಲ್ವೆ ಸಂಚಾರ



ನವದೆಹಲಿ:ಭಾರತೀಯರೈಲ್ವೆಯುಮತ್ತೊಂದುಮಹತ್ತರಸಾಧನೆಮಾಡಿದ್ದು,ನಾಲ್ಕುಖಾಲಿBOXN ರೇಕ್‌ಗಳನ್ನು ಒಟ್ಟುಗೂಡಿಸಿ ಸುಮಾರು 2.8 ಕಿಲೋಮೀಟರ್ ಉದ್ದದ ರೈಲನ್ನು ನಡೆಸುವ ಈ ಮೂಲಕ ಈ ಸಾಧನೆ ಮಾಡಿದೆ. ಭಾರತೀಯ ರೈಲ್ವೆ ನಾಲ್ಕು ಸೆಟ್‌ಗಳ ವಿದ್ಯುತ್ ಲೋಕೋಮೋಟಿವ್ ಗಳ ಬಲದಿಂದ ಈ ರೈಲು ಸಂಚರಿಸಿದೆ. ಈ ಅತಿ ಉದ್ದದ ಈ ರೈಲಿಗೆ 'ಶೇಶ್‌ನಾಗ್' ಎಂದು ನಾಮಕರಣ ಮಾಡಲಾಗಿದೆ. ಪ್ರಸ್ತುತಭಾರತೀಯರೈಲ್ವೆಯಅತಿ ಉದ್ದದರೈಲು'ಶೇಷನಾಗ'ಆಗಿದೆ.
*ಆಗ್ನೇಯಮಧ್ಯ ರೈಲ್ವೆಯು ಈ ಅನನ್ಯ ಸಾಧನೆಯನ್ನು ರೈಲ್ವೆ ಸಚಿವ ಪಿಯೂಷ್ ಗೋಯಲ್ ಶ್ಲಾಘಿಸಿದ್ದು, ದಾಖಲೆಯ 2.8 ಕಿ.ಮೀ ಉದ್ದದ ಸರಕು ಸಾಗಣೆ ರೈಲನ್ನು ಭಾರತೀಯ ರೈಲ್ವೆ ಯಶಸ್ವಿಯಾಗಿ ನಿರ್ವಹಿಸಿದೆ. 4 ಸಂಯೋಜಿತ ರೈಲ್ವೆ ಸೇರಿ 251 ವ್ಯಾಗನ್‌ಗಳು ಒಟ್ಟು 2.8 ಕಿ.ಮೀ ನಾಗ್ಪುರ ಮತ್ತು ಕೊರ್ಬಾ ನಡುವೆ ಸಂಚರಿಸುತ್ತಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

# Current affairs of July 2020 from KPSC Vaani

### 05 07 2020 ನಾಗಾಲ್ಯಾಂಡ್ ಸರ್ಕಾರದಿಂದ ನಾಯಿ ಮಾಂಸ ಮಾರಾಟ ನಿಷೇಧಕ್ಕೆ ನಿರ್ಧಾರ



ನಾಗಾಲ್ಯಾಂಡ್ ಸರ್ಕಾರ ನಾಯಿ ಮಾಂಸದ ಮಾರಾಟವನ್ನು ನಿಷೇಧ ಮಾಡಲು ನಿರ್ಧರಿಸಿದ್ದು, ಜೊತೆಗೆ ನಾಯಿ ಮಾಂಸದ ವಾಣಿಜ್ಯ ಆಮದು, ನಾಯಿ ವ್ಯಾಪಾರ ಹಾಗೂ ಮಾರುಕಟ್ಟೆಯನ್ನು ಸಹ ನಿಷೇಧಿಸಲು ತೀರ್ಮಾನ ಕೈಗೊಂಡಿದೆ. ಈ ಕುರಿತು ನಾಗಾಲ್ಯಾಂಡ್ ಸರ್ಕಾರದ ಮುಖ್ಯ ಕಾರ್ಯದರ್ಶಿ ತೆಮ್ಜೆನ್ ಟಾಯ್ ಮಾಹಿತಿ ನೀಡಿದ್ದಾರೆ. ಫೆಡರೇಷನ್ ಆಫ್ ಇಂಡಿಯನ್ ಪ್ರೊಟೆಕ್ಷನ್ ಆರ್ಗನೈಸೇಷನ್  ಸಲ್ಲಿಸಿಸ ಮನವಿಯನುಸಾರ ನಾಗಾಲ್ಯಾಂಡ್ ಸರ್ಕಾರ ನಾಯಿ ಮಾಂಸ ಮಾರಾಟ ನಿಷೇಧ ಕ್ರಮ ಕೈಗೊಂಡಿದೆ.

### 05 07 2020 ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗೆ ತೃತೀಯ ಲಿಂಗಿಗಳು ನೇಮಕಕ್ಕೆ ಅಸ್ತು



ನವದೆಹಲಿ: ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯಲ್ಲಿ (CAPF) ತೃತೀಯ ಲಿಂಗಿಗಳನ್ನು ನೇಮಿಸಿಕೊಳ್ಳುವ ಐತಿಹಾಸಿಕ ಕ್ರಮಕ್ಕೆ ಕೇಂದ್ರ ಗೃಹ ಸಚಿವಾಲಯ ಇತ್ತೀಚಿಗೆ ಚಾಲನೆ ನೀಡಿತು. ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಕೂಡ ಇದಕ್ಕೆ ಅವಕಾಶ ನೀಡಲು ಚಿಂತನೆ ನಡೆಸಿದೆ. ಕೇಂದ್ರ ಸರ್ಕಾರದ ಈ ನಿರ್ಣಯದಿಂದಾಗಿ ತೃತೀಯ ಲಿಂಗಿಗಳೂ ಇನ್ನು ಮುಂದೆ ಕೇಂದ್ರೀಯ ಅರೆಸೇನಾ ಪಡೆಗಳಲ್ಲಿ ಮುಂಚೂಣಿ ನಾಯಕತ್ವ ವಹಿಸುವುದಕ್ಕೆ ಅವಕಾಶ ಲಭಿಸಲಿದೆ. ಮೊದಲ ಪ್ರಕರಣ : 2017ರಲ್ಲಿ ತಮಿಳುನಾಡಿನಲ್ಲಿ ಕೆ. ಪ್ರತೀಕಾ ಯಾಶಿನಿ ಎಂಬುವವರು ಪೊಲೀಸ್ ಇಲಾಖೆಗೆ ಸೇರಿದ್ದು ಇದು ದೇಶದ ಮೊದಲ ತೃತೀಯ ಲಿಂಗಿಯೋರ್ವರು ಪೊಲೀಸ್ ಪಡೆಗಳಿಗೆ ಸೇರ್ಪಡೆಗೊಂಡ ಪ್ರಕರಣವಾಗಿದೆ.

# Current affairs of July 2020 from KPSC Vaani

## 05 07 2020 ರಿಲಯನ್ಸ್‌ನಿಂದ ಜಿಯೋ ಮೀಟ್ ಆಯಪ್ ರಿಲೀಸ್




ಮುಂಬಯಿ: ಪ್ರಸ್ತುತ ಏಷ್ಯಾದ ನಂ.1 ಶ್ರೀಮಂತ ಆಗಿರುವ ಮುಕೇಶ್ ಅಂಬಾನಿ ಮಾಲಿಕತ್ವದ ಜಿಯೋ ಸಂಸ್ಥೆಯು ಗೂಗಲ್‌ನ ಗೂಗಲ್ ಮೀಟ್, ಅಮೆರಿಕ ಮೂಲದ ಝೂಮ್, ಮೈಕ್ರೋಸಾಫ್ಟ್ ನ ಸ್ಕೈಪ್‌ಗೆ ಪೈಪೋಟಿ ನೀಡಲು ಜಿಯೋಮೀಟ್ ದೃಶ್ಯ ಸಂವಾದ ನೂತನ ಅಪ್ಲಿಕೇಶನ್ ನ್ನು ಬಿಡುಗಡೆಗೊಳಿಸಿದೆ.
* ಈ ಆಯಪ್ ಮೂಲಕ ಏಕಕಾಲದಲ್ಲಿ 100 ಜನರೊಂದಿಗೆ ಉಚಿತವಾಗಿ ದೃಶ್ಯ ಸಭೆ ನಡೆಸಬಹುದು. ಕೋವಿಡ್ 19 ಸೋಂಕಿನ ಹಿನ್ನಲೆಯಲ್ಲಿ ವರ್ಕ್ ಫ್ರಮ್ ಹೋಂ ಕೆಲಸ ಮಾಡುವವರ ಸಂಖ್ಯೆ ಹತ್ತಾರುಪಟ್ಟು ಹೆಚ್ಚಿರುವ ಈ ಸಮಯದಲ್ಲಿ ಈ ಆಯಪ್ ಮಾರುಕಟ್ಟೆಗೆ ಬಂದಿದೆ.

## 05 07 2020 ಫ್ರಾನ್ಸ್‌ನ ನೂತನ ಪ್ರಧಾನಿಯಾಗಿ ಜೀನ್ ಕ್ಯಾಸ್ಟೆಕ್ಸ್ ನೇಮಕ



ಪ್ಯಾರೀಸ್ : ಫ್ರಾನ್ಸ್‌ನ ಅಧ್ಯಕ್ಷ ಮ್ಯಾಕ್ರೊನ್ ಅವರು ಜೀನ್ ಕ್ಯಾಸ್ಟೆಕ್ಸ್ ಅವರನ್ನು ಫ್ರಾನ್ಸ್ ನ ನೂತನ ಪ್ರಧಾನಿಯನ್ನಾಗಿ ಆಯ್ಕೆ ಮಾಡಿದ್ದಾರೆ. ಕೊರೊನಾವೈರಸ್ ಬಿಕ್ಕಟ್ಟಿನಿಂದ ಆರ್ಥಿಕ ಚೇತರಿಕೆ ಉತ್ತಮಪಡಿಸಲು, ಲಾಕ್ ಡೌನ್ ತಜ್ಞ ಜೀನ್ ಕ್ಯಾಸ್ಟೆಕ್ಸ್ ಅವರನ್ನು ಅಧ್ಯಕ್ಷ ಪಟ್ಟಕ್ಕೆ ಆಯ್ಕೆ ಮಾಡಿದ್ದಾರೆ.
* ಏಪ್ರಿಲ್ ಮ್ಯಾಕ್ರೊನ್ ಎಡ್ವರ್ಡ್ ಫಿಲಿಫ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಕ್ಯಾಸ್ಟೆಕ್ಸ್ ಅವರ ಆಯ್ಕೆಯಾಗಿದ್ದಾರೆ.

# Current affairs of July 2020 from KPSC Vaani

## 05 07 2020 ಚೀನಾ ಬ್ಯಾಡ್ಮಿಂಟನ್ ದಿಗ್ಗಜ ಲಿನ್ ಡ್ಯಾನ್ ವಿದಾಯ



ಶಾಂಘೈ : ಬ್ಯಾಡ್ಮಿಂಟನ್ ನ ಶ್ರೇಷ್ಠ ಆಟಗಾರರಾದ 'ಸೂಪರ್ ಡ್ಯಾನ್' ಎಂದೇ ಖ್ಯಾತರಾದ ಚೀನಾದ ಲಿನ್ ಡ್ಯಾನ್ ಅವರು ಇತ್ತೀಚಿಗೆ ತಮ್ಮ ಕ್ರೀಡಾ ಬದುಕಿಗೆ ವಿದಾಯ ಘೋಷಿಸಿದರು. ಇವರು 2 ಬಾರಿ ಒಲಿಂಪಿಕ್ಸ್ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. 36 ವರ್ಷದ ಲಿನ್ ಡ್ಯಾನ್, ಮುಂದಿನ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಕನಸು ಕೈಬಿಟ್ಟು ತಮ್ಮ ವಿದಾಯ ಘೋಷಿಸಿಕೊಂಡಿದ್ದಾರೆ.

* 28 ವಯಸ್ಸಿನಲ್ಲೇ ಎಲ್ಲ ಪ್ರಮುಖ 9 ಬ್ಯಾಡ್ಮಿಂಟನ್ ಪ್ರಶಸ್ತಿಗಳನ್ನು (ಒಲಿಂಪಿಕ್ಸ್, ವಿಶ್ವ ಚಾಂಪಿಯನ್ ಷಿಪ್, ಥಾಮಸ್ ಕಪ್, ವಿಶ್ವಕಪ್, ಸುಧೀರ್‌ಮನ್ ಕಪ್, ಆಲ್ ಇಂಗ್ಲೆಂಡ್, ಏಷ್ಯನ್ ಗೇಮ್ಸ್, ಏಷ್ಯನ್ ಚಾಂಪಿಯನ್‌ಷಿಪ್, ಸೂಪರ್ ಸಿರೀಸ್ ಮಾಸ್ಟರ್ಸ್ ಫೈನಲ್ಸ್) ಜಯಿಸುವ ಮೂಲಕ 'ಸೂಪರ್ ಗ್ರಾಂಡ್ ಸ್ಲಾಂ' ಸಾಧಿಸಿದ್ದರು.
* ಸಿಂಗಲ್ಸ್ ವೃತ್ತಿಜೀವನದಲ್ಲಿ 666 ಗೆಲುವು, 128 ಸೋಲು ಕಂಡಿರುವ ಮಾಜಿ ವಿಶ್ವ ನಂ. 1 ಡ್ಯಾನ್, 66 ಪ್ರಶಸ್ತಿ ಜಯಿಸಿದ್ದಾರೆ. ಒಲಿಂಪಿಕ್ಸ್ ಸಿಂಗಲ್ಸ್‌ನಲ್ಲಿ ಸತತ 2 ಸ್ವರ್ಣ ಜಯಿಸಿದ ಏಕೈಕ ಷಟ್ಲರ್ ಇವರಾಗಿದ್ದಾರೆ.

## 06 07 2020 ಭಾರತದ ಮೊದಲ ಅಧಿಕೃತ ಸಾಮಾಜಿಕ ಮಾಧ್ಯಮ 'ಎಲಿಮೆಂಟ್ಸ್' ಆಯಪ್ ಬಿಡುಗಡೆ




ನವದೆಹಲಿ : ಭಾರತದ ಮೊದಲ ಅಧಿಕೃತ ಸಾಮಾಜಿಕ ಮಾಧ್ಯಮ ಸೂಪರ್ ಅಪ್ಲಿಕೇಶನ್ ಎಂದು ಹೇಳಿಕೊಳ್ಳುವ "ಎಲಿಮೆಂಟ್ಸ್ ಆಯಪ್" ಅನ್ನು ಭಾರತದ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಇತ್ತೀಚಿಗೆ ಬಿಡುಗಡೆ ಮಾಡಿದರು. ಈ ನೂತನ ಸಾಮಾಜಿಕ ಮಾಧ್ಯಮ ಅಯಪ್ ನ್ನು ಶ್ರೀ ರವಿ ಶಂಕರ ಗುರೂಜಿ ಯವರ ಸಾರಥ್ಯದ ಆರ್ಟ್ ಆಫ್ ಲಿವಿಂಗ್‌ನ ಸ್ವಯಂಸೇವಕರಾಗಿರುವ ಸಾವಿರಕ್ಕೂ ಹೆಚ್ಚು ಐಟಿ ವೃತ್ತಿಪರರು ಈ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸುವಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ.

* ಸೋಷಿಯಲ್ ಮೀಡಿಯಾ ಜಗತ್ತಿನಲ್ಲಿ, ಆಯಪ್ ಫೇಸ್‌ಬುಕ್, ವಾಟ್ಸಾಪ್ ಮತ್ತು ಇನ್‌ಸ್ಟಾಗ್ರಾಮ್ ನಂತಹವರೊಂದಿಗೆ ಈ ಎಲಿಮೆಂಟ್ಸ್ ಆಯಪ್ ಸ್ಪರ್ಧಿಸಲಿದೆ.
* ಒಟ್ಟು 08 ಭಾಷೆಗಳಲ್ಲಿ ಈ ಅಪ್ಲಿಕೇಶನ್ ಲಭ್ಯವಿದೆ.
* ಅಪ್ಲಿಕೇಶನ್ ಮೂಲಕ ಬಳಕೆದಾರರು "ಸ್ನೇಹಿತರೊಂದಿಗೆ ಸಂಪರ್ಕ ಸಾಧಿಸಬಹುದು, ಸಂಭಾಷಿಸಬಹುದು, ಮಾಹಿತಿಯನ್ನು ಹಂಚಿಕೊಳ್ಳಬಹುದು, ಸಮಾನ ಮನಸ್ಕ ಜನರೊಂದಿಗೆ ನೆಟ್‌ವರ್ಕ್ ಮಾಡಬಹುದು, ತಡೆರಹಿತ ಧ್ವನಿ ಮತ್ತು ವೀಡಿಯೊ ಕರೆಗಳನ್ನು ಕೂಡ ಮಾಡಬಹುದು.

# Current affairs of July 2020 from KPSC Vaani

### 06 07 2020 ಕಿರಿಯ ಅಥ್ಲೀಟ್‌ಗಳಿಗೂ 'ಟಾಪ್ಸ್'ಯೋಜನೆ ವಿಸ್ತರಣೆ : ಕೇಂದ್ರಸಚಿವರಿಜಿಜು




ನವದೆಹಲಿ : 2028 ರಲ್ಲಿ ನಡೆಯುವ ಒಲಿಂಪಿಕ್ಸ್‌ಗೆ ಪೂರ್ವ ತಯಾರಿಗಾಗಿ ಚಾಂಪಿಯನ್ ಕ್ರೀಡಾಪಟುಗಳನ್ನು ರೂಪಿಸುವ ಉದ್ದೇಶದೊಂದಿಗೆ ಜೂನಿಯರ್ ಅಥ್ಲೀಟ್‌ಗಳಿಗೂ ಕೇಂದ್ರ ಸರ್ಕಾರದ ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯನ್ನು (ಟಾಪ್ಸ್) ಶೀಘ್ರ ಆರಂಭಿಸಲಾಗುವುದೆಂದು ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಮಾಹಿತಿ ನೀಡಿದ್ದಾರೆ. ಇತ್ತೀಚಿಗೆ ನಡೆದ 'ಫಿಟ್ ಹೈ ತೋ ಹಿಟ್ ಹೈ ಫಿಟ್ ಇಂಡಿಯಾ' ಎಂಬ ವೆಬಿನಾರ್‌ನಲ್ಲಿ ಕ್ರೀಡಾ ಸಚಿವ ರಿಜಿಜು ಅವರು ಈ ವಿಷಯ ಪ್ರಕಟಿಸಿದರು.

### 06 07 2020 ಇತಿಹಾಸದಲ್ಲೇ ಮೊದಲ ಬಾರಿಗೆ ನೇರ ಪ್ರಸಾರಗೊಳ್ಳುತ್ತಿದೆ ಅಮರನಾಥ ಆರತಿ



ಜಮ್ಮು ಕಾಶ್ಮೀರದಹಿಮಾಲಯದತಪ್ಪಲಿನಲ್ಲಿ ಇರುವಅಮರನಾಥಗುಹಾದೇಗುಲದಆರತಿಯನ್ನು ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ನೇರ ಪ್ರಸಾರ ಮಾಡಲಾಗುತ್ತಿದೆ. ಅಮರನಾಥ ದೇವಾಲಯ ಮಂಡಳಿಯುಅಮರನಾಥಆರತಿಮತ್ತುದರ್ಶನದನೇರಪ್ರಸಾರಕ್ಕಾಗಿವಿಶೇಷವ್ಯವಸ್ಥೆ ಮಾಡಿತ್ತು ಹಾಗೂ ದೂರದರ್ಶನ ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್: ಜಿ.ಸಿ.ಮರ್ಮು

# Current affairs of July 2020 from KPSC Vaani

## 06 07 2020 ರಾಜ್ಯದಲ್ಲಿ ನೆರೆ ನಿರ್ವಹಣೆಗಾಗಿ "ಗ್ರಾಮವಾರು ಕ್ರಿಯಾ ಯೋಜನೆ" ಸಿದ್ಧಪಡಿಸಲಾಗುತ್ತಿದೆ



ಕಳೆದ ವರ್ಷದ ಕರ್ನಾಟಕದಲ್ಲಿ ಪ್ರವಾಹದಿಂದ ಸಾವಿರಾರು ಹಳ್ಳಿಗಳಲ್ಲಿ ತೀವ್ರ ನಷ್ಟ ಅನುಭವಿಸಿದ ಹಿನ್ನಲೆ, ಈಗ "ದೇಶದಲ್ಲಿಯೇ ಮೊದಲ" ಬಾರಿಗೆ "ಗ್ರಾಮವಾರು ಕ್ರಿಯಾ ಯೋಜನೆ"ಯನ್ನು ಸಿದ್ಧಪಡಿಸಲಾಗುತ್ತಿದೆ. ಈ ನೂತನ ಕಾರ್ಯಕ್ರಮದಡಿಯಲ್ಲಿ ಸ್ಥಳೀಯರನ್ನು ಒಳಗೊಂಡಂತೆ ಗ್ರಾಮ ಪಂಚಾಯಿತಿ ವಿಪತ್ತು ನಿರ್ವಹಣೆ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದ್ದು,

* ಪ್ರವಾಹ ಉಂಟಾದರೆ ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲವನ್ನು ಬಳಸಿ ಹೇಗೆ ತಡೆಗಟ್ಟಬೇಕು?
* ಎಲ್ಲೆಲ್ಲಿ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಬೇಕು?
* ಕೊಚ್ಚಿ ಹೋಗುವ ಪ್ರದೇಶಗಳಲ್ಲಿ ಸಾಧ್ಯವಾದರೆ ಶಾಶ್ವತ , ತುರ್ತು ತಡೆಗೋಡೆಗಳ ನಿರ್ಮಾಣ ಸೇರಿದಂತೆ ಹಲವು ಮುಂಜಾಗ್ರತಾ ಕ್ರಮಗಳನ್ನು ಗ್ರಾಮವಾರು ಮಾಡಲಾಗುತ್ತದೆ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ "ಮನೋಜ್ ರಾಜನ್" ಮಾಹಿತಿ ನೀಡಿದ್ದಾರೆ.

## 06 07 2020 CSA ಯ ವಾರ್ಷಿಕ ಪ್ರಶಸ್ತಿ ಪ್ರದಾನ




ದಿನಾಂಕ 04 ಜುಲೈ 2020 ರಂದು ನಡೆದ CSA ಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಲವು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗಿದ್ದು, ಅವುಗಳಲ್ಲಿ ಪ್ರಮುಖ ಪ್ರಶಸ್ತಿಗಳು ಈ ಕೆಳಗಿನಂತಿವೆ.

* ದಕ್ಷಿಣ ಆಫ್ರಿಕಾದ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ "ಕ್ವಿಂಟನ್ ಡಿ ಕಾಕ್" ಭಾಜನರಾಗಿದ್ದಾರೆ ಇದು ಎರಡನೇ ಬಾರಿ ಆಯ್ಕೆಯಾಗಿದ್ದಾರೆ.
* ವನಿತೆ ವಿಭಾಗದ ವರ್ಷದ ಆಟಗಾರ್ತಿ ಪ್ರಶಸ್ತಿ: "ಲಾರ ವೋಲ್ವಾರ್ಟ್"
*ವರ್ಷದ ಫೇಸ್ ಬೌಲರ್: "ಲುಂಗಿ ಎನ್ ಗಿಂಡಿ"
*ವರ್ಷದ ಅಭಿಮಾನಿಗಳ ನೆಚ್ಚಿನ ಆಟಗಾರ: "ಡೇವಿಡ್ ಮಿಲ್ಲರ್"

# Current affairs of July 2020 from KPSC Vaani

## 07 07 2020 ಕೊರೊನಾವೈರಸ್‌ಮೂಲಪತ್ತೆಗೆWHOತಂಡದಿಂದಚೀನಾಭೇಟಿ




ವಾಷಿಂಗ್ಟನ್ : ಕೊರೊನಾ ವೈರಸ್ ಹುಟ್ಟಿನ ಬಗ್ಗೆ ಮಾಹಿತಿ ಪಡೆಯಲು ವಿಶ್ವ ಆರೋಗ್ಯ ಸಂಸ್ಥೆಯ ತಂಡವೊಂದು ಚೀನಾರಾಷ್ಟ್ರಕ್ಕೆಬರುವದಿನಗಳಲ್ಲಿಭೇಟಿನೀಡಲಿದೆ.ಚೀನಾವುಕೊರೊನಾವೈರಸ್ ಕುರಿತು ಯಾವುದೇ ಮಾಹಿತಿಯನ್ನು ಹೊರ ಜಗತ್ತಿಗೆ ತೋರಿಸಿಕೊಟ್ಟಿಲ್ಲ ಎಂದು ಈಗಾಗಲೇ ಹಲವು ರಾಷ್ಟ್ರಗಳು ಆರೋಪಿಸಿರುವ ಹಿನ್ನಲೆಯಲ್ಲಿ, ಸೋಂಕು ಹೇಗೆ ಹುಟ್ಟಿಕೊಂಡಿತು ಎಂಬುದರ ಬಗ್ಗೆ ತಾವೇ ಖುದ್ದಾಗಿ ಹೋಗಿ ಪರಿಶೀಲನೆ ನಡೆಸಲು WHO ಮುಂದಾಗಿದೆ. ವಿಶ್ವ ಅರೋಗ್ಯ ಸಂಸ್ಥೆಯಿಂದ ಭೇಟಿ ನೀಡಲಿರುವ ತಂಡವು ಕೊರೊನಾ ವೈರಸ್ ಹುಟ್ಟಿಕೊಂಡ ಬಗೆ ಹೇಗೆ, ಅದರ ಹುಟ್ಟು, ಅದು ಮನುಷ್ಯನಿಗೆ ಹರಡಿದ್ದು ಹೇಗೆ ಎಂಬುದರ ಕುರಿತು ಅಧ್ಯಯನ ನಡೆಸಲಿದೆ.


* ಕೊರೊನಾ ವೈರಸ್ ಸೋಂಕುಈಗಾಗಲೇವಿಶ್ವದಾದ್ಯಂತ5ಲಕ್ಷಕ್ಕೂಹೆಚ್ಚುಮಂದಿಯನ್ನು ಬಲಿತೆಗೆದುಕೊಂಡಿದೆ.

## 07 07 2020 ರಾಜಸ್ಥಾನದಲ್ಲಿ ವಿಶ್ವದ ಮೂರನೇ ಅತಿದೊಡ್ಡ ಕ್ರೀಡಾಂಗಣ ನಿರ್ಮಾಣ



ಜೈಪುರ : ವಿಶ್ವದ ಮೂರನೇ ಅತಿ ದೊಡ್ಡ ಹಾಗೂ ಭಾರತದ ಎರಡನೇ ಅತಿದೊಡ್ಡ ಕ್ರೀಡಾಂಗಣ ರಾಜಸ್ಥಾನ ರಾಜ್ಯದ ಜೈಪುರದಲ್ಲಿದೆ. ರಾಜಸ್ಥಾನ ಕ್ರಿಕೆಟ್ ಅಸೋಸಿಯೇಷನ್ (ಆರ್‌ಸಿಎ) ನಿರ್ಮಿಸಿರುವ ಈ ಕ್ರೀಡಾಂಗಣವು ಜೈಪುರದಲ್ಲಿದ್ದು, ಒಟ್ಟು 75 ಸಾವಿರ ಪ್ರೇಕ್ಷಕರ ಸಾಮರ್ಥ್ಯವನ್ನು ಹೊಂದಿದೆ. ಇದು ಗುಜರಾತ್‌ನ ಮೊಟೆರಾ ಕ್ರಿಕೆಟ್ ಕ್ರೀಡಾಂಗಣ ಮತ್ತು ಆಸ್ಟ್ರೇಲಿಯಾದ ಮೆಲ್ಬೋರ್ನ್ ಕ್ರಿಕೆಟ್ ಕ್ರೀಡಾಂಗಣದ ನಂತರದ ಸ್ಥಾನ ಅಂದರೆ ವಿಶ್ವದ ಮೂರನೇ ಅತಿ ದೊಡ್ಡ ಕ್ರೀಡಾಂಗಣ ಇದಾಗಿದೆ. ಈ ಕ್ರೀಡಾಂಗಣವನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗುತ್ತಿದ್ದು, ಮೊದಲನೇ ಹಂತದಲ್ಲಿ 45 ಸಾವಿರ ವೀಕ್ಷಕರ ಸಾಮರ್ಥ್ಯ, ಹಾಗೂ ಎರಡನೇ ಹಂತದಲ್ಲಿ ಅದರ ಸಾಮರ್ಥ್ಯವನ್ನು 75 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ತಿಳಿದು ಬಂದಿದೆ.

## Current affairs of July 2020 from KPSC Vaani



# Current affairs of July 2020 from KPSC Vaani

### 07 07 2020 ದೆಹಲಿಯಲ್ಲಿ ವಿಶ್ವದ ಅತಿದೊಡ್ಡ ಕೋವಿಡ್ ಆಸ್ಪತ್ರೆ ಉದ್ಘಾಟನೆ




ನವದೆಹಲಿ : ವಿಶ್ವದ ಅತಿದೊಡ್ಡ ಕೋವಿಡ್ 19 ಆಸ್ಪತ್ರೆಯನ್ನು ದೆಹಲಿ ಮತ್ತು ಹರಿಯಾಣ ಗಡಿಗೆ ಸಮೀಪವಿರುವ ಚಟ್ಟರ್ ಪುರ್ ಎಂಬ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಈ ಆಸ್ಪತೆಯಲ್ಲಿ ಒಟ್ಟು 10 ಸಾವಿರ ಬೆಡ್ ಗಳ ಸಾಮರ್ಥ್ಯವಿದ್ದು, ಈ ನೂತನ ಅರೋಗ್ಯ ಕೇಂದ್ರವನ್ನು ದೆಹಲಿ ಲೆಫ್ಟಿನೆಂಟ್ ಗವರ್ನರ್ ಆಗಿರುವ ಅನಿಲ್ ಬೈಜಾಲ್ ಉದ್ಘಾಟಿಸಿದರು.
* ಕೇಂದ್ರ ಗೃಹ ಸಚಿವಾಲಯದ ಸಹಾಯದೊಂದಿಗೆ ನಿರ್ಮಿಸಲಾದ ಈ ಆಸ್ಪತ್ರೆಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ಕೋವಿಡ್ ಆಸ್ಪತ್ರೆ ಎಂದು ಹೆಸರಿಸಲಾಗಿದೆ.
* ಈ ಆಸ್ಪತ್ರೆ ವಿಶ್ವದಲ್ಲೇ ಅತಿದೊಡ್ಡ ಕೋವಿಡ್ 19 ಕೇಂದ್ರವಾಗಿದೆ. 200 ಕೋಠಡಿಗಳು ತಲಾ 50 ಹಾಸಿಗೆಗಳನ್ನು ಹೊಂದಿವೆ. ಹಾಗೂ ಒಟ್ಟು 75 ಕ್ಕೂ ಅಧಿಕ ಆಯಂಬುಲೆನ್ಸ್ ಗಳ ಸೌಲಭ್ಯ ಈ ಆಸ್ಪತ್ರೆಯಲ್ಲಿದೆ.

### 07 07 2020 ಸ್ವದೇಶಿನಿರ್ಮಿತ11,300ವೆಂಟಿಲೇಟರ್‌ಗಳರವಾನೆ: ಡಾ. ಹರ್ಷವರ್ಧನ್



ನವದೆಹಲಿ: ದೇಶದಲ್ಲಿ ಈವರೆಗೂ ಒಟ್ಟು 11,300 ಸ್ವದೇಶಿ ನಿರ್ಮಿತ ವೆಂಟಿಲೇಟರ್ ಗಳನ್ನು ದೇಶಾದ್ಯಂತ ರವಾನೆ ಮಾಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ ಹರ್ಷ ವರ್ಧನ್ ಇತ್ತೀಚಿಗೆ ಮಾಹಿತಿ ನೀಡಿದರು.
*ದೇಶದಲ್ಲಿ ಈ ವರೆಗೂ 11,300ಸ್ವದೇಶಿ ನಿರ್ಮಿತ ವೆಂಟಿಲೇಟರ್ ಗಳನ್ನು ರವಾನೆ ಮಾಡಲಾಗಿದೆ. ಇವುಗಳ ಪೈಕಿ 6,154 ವೆಂಟಿಲೇಟರ್ ಗಳು ಈಗಾಗಲೇ ಆಸ್ಪತ್ರೆಗಳಿಗೆ ರವಾನೆಯಾಗಿವೆ.
* ದೇಶಾದ್ಯಂತ 1.02 ಲಕ್ಷ ಆಕ್ಸಿಜನ್ ಸಿಲಿಂಡರ್ ಗಳನ್ನು ಸಪ್ಲೈ ಮಾಡಲಾಗಿದ್ದು, ಈ ಪೈಕಿ 72,293 ಸಿಲಿಂಡರ್ ಗಳನ್ನು ಆಸ್ಪತ್ರೆಗಳಿಗೆ ಹಸ್ತಾಂತರಿಸಲಾಗಿದೆ.
* ಕೊರೋನಾ ಚಿಕಿತ್ಸೆಯಲ್ಲಿ ಬಳಸಲಾಗುತ್ತಿರುವ ಹೈಡ್ರಾಕ್ಸಿ ಕ್ಲೋರೋಕ್ವಿನ್ ಮಾತ್ರೆಗಳ ಉತ್ಪಾದನೆ ಪ್ರಮಾಣ ಹೆಚ್ಚಿಸಲಾಗಿದ್ದು, ದೇಶಾದ್ಯಂತ 6.12 ಕೋಟಿ ಮಾತ್ರೆಗಳನ್ನು ರವಾನೆ ಮಾಡಲಾಗಿದೆ ಎಂದು ಆರೋಗ್ಯ ಸಚಿವರು ಮಾಹಿತಿ ನೀಡಿದ್ದಾರೆ.

# Current affairs of July 2020 from KPSC Vaani

### 07 07 2020 ಅಮಿತ್ ಪಂಘಾಲ್ ವಿಶ್ವದ ನಂ.1 ಬಾಕ್ಸರ್



ನವದೆಹಲಿ : ಏಷ್ಯನ್ ಗೇಮ್ಸ್ ಚಾಂಪಿಯನ್ ಮತ್ತು ವಿಶ್ವ ಚಾಂಪಿಯನ್ ಷಿಪ್ ನಲ್ಲಿ ಬೆಳ್ಳಿ ಪದಕ ವಿಜೇತರಾಗಿರುವ ಅಮಿತ್ ಪಂಘಾಲ್ ಅವರು ಅಮೆಚೂರ್ ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಎಐಬಿಎ) ಇತ್ತೀಚಿಗೆ ಪ್ರಕಟಿಸಿದ ವಿಶ್ವ ರ್ಯಾಂಕಿನಲ್ಲಿ 52 ಕೆ. ಜಿ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಈ ಮೂಲಕ ಭಾರತೀಯ ಬಾಕ್ಸಿಂಗ್ ವಲಯ ಹೆಮ್ಮೆ ಪಡುವಂತಾಗಿದೆ.

### 07 07 2020 ಹರಿಯಾಣ ರಾಜ್ಯದಲ್ಲಿ ಖಾಸಗಿ ಉದ್ಯೋಗದಲ್ಲಿ ಸ್ಥಳೀಯರಿಗೆ ಶೇ 75ರಷ್ಟು ಮೀಸಲಾತಿ



ಚಂಡೀಗಢ್ : ಖಾಸಗಿ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಶೇ 75 ರಷ್ಟು ಮೀಸಲಾತಿ ನೀಡುವ ಸುಗ್ರೀವಾಜ್ಞೆಯನ್ನು ಹರ್ಯಾಣ ಸರ್ಕಾರ ಸಿದ್ಧಪಡಿಸಿದ್ದು, ಈ ಸುಗ್ರೀವಾಜ್ಞೆಯಾ ಕರಡು ಈಗಾಗಲೇ ರಚನೆಗೊಂಡಿದ್ದು, ಇನ್ನಷ್ಟೇ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಬೇಕಿದೆ, ಹಾಗು ಇದಕ್ಕೆ ರಾಜ್ಯಪಾಲರ ಅಂಕಿತ ಮಾತ್ರ ಬಾಕಿ ಉಳಿದಿದೆ. ಹರ್ಯಾಣದ ಮುಖ್ಯಮಂತ್ರಿ : ಮನೋಹರ್ ಲಾಕ್ ಖಟ್ಟರ್ ಹರ್ಯಾಣದ ಉಪ ಮುಖ್ಯಮಂತ್ರಿ : ದುಷ್ಯಂತ್ ಚೌಟಾಲ

# Current affairs of July 2020 from KPSC Vaani

## 08 07 2020 ರಾಜ್ಯ ಸರ್ಕಾರದಿಂದ ವರ್ಚುವಲ್ ಉದ್ಯೋಗ ಮೇಳ ಆಯೋಜನೆ : ದೇಶದಲ್ಲೇ ಮೊದಲ ಪ್ರಯೋಗ




ಬೆಂಗಳೂರು: ಕರೊನಾ ಲಾಕ್‌ಡೌನ್‌ನಿಂದಾಗಿ ಅನೇಕರು ಉದ್ಯೋಗ ಕಳೆದುಕೊಂಡಿದ್ದು, ಇಂತವರಿಗೆ ಉದ್ಯೋಗ ಕಲ್ಪಿಸಿಕೊಡಲು ಮತ್ತು ಅನೇಕ ಉದ್ಯೋಗದಾತರು ಅರ್ಹ ಅಭ್ಯರ್ಥಿಗಳ ಶೋಧದಲ್ಲಿದ್ದಾರೆ. ಈ ಸಮಸ್ಯೆಗೆ ಏಕಕಾಲಕ್ಕೆ ಪರಿಹಾರ ರೂಪದಲ್ಲಿ ಅಂತರ್ಜಾಲ ತಾಣದ ವೇದಿಕೆ ಮೂಲಕ ಪರಿಹಾರ ನೀಡಲು ರಾಜ್ಯ ಸರ್ಕಾರವು ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ವರ್ಚುವಲ್ ಉದ್ಯೋಗ ಮೇಳವನ್ನು ಇದೆ ಜುಲೈ 10 ರಂದು ಆಯೋಜಿಸಿದೆ. ಈ ನೂತನ ಪ್ರಯೋಗವು ಭಾರತದಲ್ಲೇ ಮೊದಲ ಪ್ರಯತ್ನವಾಗಿದೆ.

## 08 07 2020 ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕತೆಯಲ್ಲಿ 34ನೇ ಸ್ಥಾನ ಪಡೆದ ಭಾರತ



ನವದೆಹಲಿ: ಇತ್ತೀಚಿಗೆ ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕ ಸೂಚ್ಯಂಕ ಬಿಡುಗಡೆಗೊಂಡಿದ್ದು, ಈ ಪಟ್ಟಿಯಲ್ಲಿ ಭಾರತವು 34 ನೇ ಶ್ರೇಯಾಂಕ ಪಡೆದಿದೆ, ಅಲ್ಲದೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಒಂದು ಹಂತ ಮೇಲೆ ಏರಿದೆ.

* ರಿಯಲ್ ಎಸ್ಟೇಟ್ ವಲಯದ ಸುಧಾರಣೆಗಾಗಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಹಲವು ಯೋಜನೆಗಳಾದ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ 2016 (ರೇರಾ) ಮತ್ತು ಜಿಎಸ್‌ಟಿ, ಬೇನಾಮಿ ವಹಿವಾಟು ನಿರ್ಬಂಧ (ತಿದ್ದುಪಡಿ) ಕಾಯ್ದೆ, ದಿವಾಳಿ ಸಂಹಿತೆ (ಐಬಿಸಿ) ಹಾಗೂ ಭೂ ದಾಖಲೆಗಳ ಡಿಜಿಟಲೀಕರಣ ಸೇರಿ ಹಲವು ಕ್ರಮಗಳನ್ನು ಕೈಗೊಂಡಿದ್ದರಿಂದ ರಿಯಲ್ ಎಸ್ಟೇಟ್ ವಲಯದಲ್ಲಿ ಹೆಚ್ಚಿನ ಪಾರದರ್ಶಕತೆ ಕಂಡು ಬಂದಿದೆ. ರಿಯಲ್ ಎಸ್ಟೇಟ್ ಪಾರದರ್ಶಕತೆಯಲ್ಲಿ ಇತರೆ ದೇಶಗಳ ಸ್ಥಾನಮಾನ ಇಂಗ್ಲೆಂಡ್ 1ಅಮೆರಿಕ 2 ಆಸ್ಟ್ರೇಲಿಯಾ 3 ಚೀನಾ 32 ಭಾರತ 34 ಶ್ರೀಲಂಕಾ 65

# Current affairs of July 2020 from KPSC Vaani

## 08 07 2020 ಕೊಡಗು ಜಿಲ್ಲೆಯಲ್ಲಿ ಪೊನ್ನಂಪೇಟೆ ಹೊಸ ತಾಲೂಕು : ಅಧಿಕೃತ ಆದೇಶ



ಮಡಿಕೇರಿ : ಕೊಡಗು ಜಿಲ್ಲೆಯಲ್ಲಿ ಹೊಸ ತಾಲೂಕು ರಚನೆಯಾಗಲಿದ್ದು, ಕರ್ನಾಟಕ ಸರ್ಕಾರ ಪೊನ್ನಂಪೇಟೆ ತಾಲೂಕು ರಚನೆ ಮಾಡಲು ಅಧಿಕೃತ ಆದೇಶ ಹೊರಡಿಸಿದೆ. ಈ ಮೊದಲು ತಾಲೂಕು ರಚನೆಗೆ ಕರ್ನಾಟಕ ಸರ್ಕಾರ ಕರಡು ಆದೇಶ ಪ್ರಕಟ ಮಾಡಿತ್ತು. ಆದರೆ ಯಾವುದೇ ಆಕ್ಷೇಪಣೆ ಬಾರದ ಹಿನ್ನಲೆ ಪ್ರಸ್ತುತ ಅಧಿಕೃತ ಆದೇಶ ಹೊರಡಿಸಲಾಗಿದೆ. ವಿರಾಜಪೇಟೆ ತಾಲೂಕಿನ ಪೊನ್ನಂಪೇಟೆ ಸರ್ಕಲ್ ಅನ್ನು ಹೊಸ ತಾಲೂಕು ಆಗಿ ರಚನೆ ಮಾಡಲು ಒಪ್ಪಿಗೆ ನೀಡಲಾಗಿದೆ. ಹಾಗೂ ಹೊಸ ತಾಲೂಕಿನ ವ್ಯಾಪ್ತಿಗೆ ಬರುವ ಹೋಬಳಿ, ಗ್ರಾಮಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

## 08 07 2020 ಮಂಗಳಗ್ರಹದ ಮೇಲೆ ನೀರಿನ ಕುರುಹು: ESA ಮಾಹಿತಿ



ಮಂಗಳ ಗ್ರಹದ ಮೇಲೆ ನೀರಿನ ಕುರುಹು ಪತ್ತೆಯಾಗಿದೆ ಎಂದು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಮಾಹಿತಿ ನೀಡಿದೆ. ಮಂಗಳ ಗ್ರಹದ ಮೇಲೆ ಬೃಹತ್ ಮಂಜುಗಡ್ಡೆಯ ಕುಳಿ ಪತ್ತೆಯಾಗಿದ್ದು, ಇದು ಅಂದಾಜು 82 ಕಿ.ಮೀ.ಅಗಲವಾಗಿದ್ದು, ಈ ಕುಳಿಯಲ್ಲಿ 1.8ಕಿ.ಮೀ.ಆಳವಾದ ಮಂಜುಗಡ್ಡೆ ಇದೆ ಎಂದು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಮಾಹಿತಿ ನೀಡಿದೆ.

* ಪತ್ತೆಯಾದ ಈ ಕುಳಿಯನ್ನು ಕೊರೊಲೇವ್ ಕುಳಿ ಎಂದು ಗುರುತಿಸಲಾದ್ದು, ಈ ಕುಳಿಯ ದೃಶ್ಯಗಳನ್ನು ತನ್ನ ಮಾರ್ಸ್ ಎಕ್ಸ್‌ಪ್ರೆಸ್ ರವಾನಿಸಿರುವುದಾಗಿ ಇಎಸ್ಎ ತಿಳಿಸಿದೆ.
* ಮಂಗಳಗ್ರಹದ ಅಧ್ಯಯನಕ್ಕಾಗಿ ಈಗಾಗಲೇ ಅಮೆರಿಕ, ಯುರೋಪ್ ಒಕ್ಕೂಟ ಮತ್ತು ಭಾರತ ಸೇರಿ ಅನೇಕ ದೇಶಗಳು ಪ್ರಯತ್ನ ಮುಂದುವರೆಸಿರುವ ಈ ಸಮಯದಲ್ಲಿ ಇಎಸ್ಎ ಸಿಹಿಸುದ್ದಿ ನೀಡಿದೆ.

# Current affairs of July 2020 from KPSC Vaani

### 09 07 2020 ಹಿಂದೂಮಹಾಸಾಗರದಾದ್ಯಂತ ಭಾರತದ ಸಹಾಯ ಹಸ್ತ ವಿಸ್ತರಿಸಲು INS ಕೇಸರಿಯಿಂದ ‘ಮಿಷನ್ ಸಾಗರ್’ ಅಡಿಯಲ್ಲಿ 49 ದಿನಗಳಲ್ಲಿ 14,000 ಕಿ.ಮೀ ಸಂಚಾರ




ಭಾರತೀಯ ನೌಕಾಪಡೆಯು ಹಿಂದೂ ಮಹಾಸಾಗರದಾದ್ಯಂತ ಭಾರತದ ಸಹಾಯ ಹಸ್ತ ವಿಸ್ತರಿಸಲು ‘ಮಿಷನ್ ಸಾಗರ್’ ಯೋಜನೆಯನ್ನು 10 ಮೇ 2020 ರಂದು ಪ್ರಾರಂಭಿಸಲಾಯಿತು. ಮಿಷನ್ ಸಾಗರ್ ಯೋಜನೆಯಡಿಯಲ್ಲಿ ಸುಮಾರು 49 ದಿನಗಳ ನಂತರ, "ಐಎನ್ಎಸ್ ಕೇಸರಿ" ನೌಕೆಯು ಯಶಸ್ವಿಯಾಗಿ 28 ಜೂನ್ 2020 ರಂದು ಭಾರತಕ್ಕೆ ಮರಳಿತು, ಹಾಗು ಈ 49 ದಿನಗಳಲ್ಲಿ ಇದು ಬರೋಬ್ಬರಿ 14000 ಕಿ.ಮೀ ಗಿಂತಲೂ ಅಧಿಕ ದೂರ ಕ್ರಮಿಸಿತ್ತು. ಮಿಷನ್ ಸಾಗರ್ : COVID 19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ನಮ್ಮ ರಾಷ್ಟ್ರದ ಕಡಲ ನೆರೆಹೊರೆಯವರಿಗೆ ನೆರವು ನೀಡಲು "ಮಿಷನ್ ಸಾಗರ್" ಪ್ರಾರಂಭಿಸಲಾಯಿತು, ಹಾಗೂ ಈ ಮಿಷನ್ ಗಾಗಿ ಭಾರತೀಯ ನೌಕಾ ಹಡಗು "ಐಎನ್ಎಸ್ ಕೇಸರಿ"ಯನ್ನು ನಿಯೋಜಿಸಲಾಗಿತ್ತು. ನೌಕೆಯು COVID 19 ಸಂಬಂಧಿತ ಅಗತ್ಯ ಔಷಧಿಗಳು (ಹೈಡ್ರಾಕ್ಸಿಕ್ಲೋರೋಕ್ವಿನ್ ಮಾತ್ರೆಗಳು ಮತ್ತು ಆಯುರ್ವೇದ ಔಷಧಿಗಳನ್ನು ಒಳಗೊಂಡಂತೆ), ವೈದ್ಯಕೀಯ ಸಹಾಯ ತಂಡಗಳು ಮತ್ತು ಸುಮಾರು 600 ಟನ್ ಆಹಾರ ಪದಾರ್ಥಗಳೊಂದಿಗೆ, ಐಎನ್ಎಸ್ ಕೇಸರಿ ಮಿಷನ್ ಗಾಗಿ ಸಂಚಾರ ಆರಂಭಿಸಿತ್ತು.

### 09 07 2020 PMAY U ಅಡಿಯಲ್ಲಿ ನಗರ ವಲಸಿಗರಿಗೆ/ಬಡವರಿಗೆ ಕೈಗೆಟುಕುವ ಬಾಡಿಗೆ ವಸತಿ ಸಂಕೀರ್ಣ(ARHC) ಅಭಿವೃದ್ಧಿಪಡಿಸಲು ಕ್ಯಾಬಿನೆಟ್ ಅನುಮೋದನೆ




ಆತ್ಮ ನಿರ್ಭರ ಭಾರತ್ ಯೋಜನೆಯ ಭಾಗವಾಗಿ 2020 ರ ಜುಲೈ 8 ರಂದು ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ "ಕೈಗೆಟುಕುವ ಬಾಡಿಗೆ ವಸತಿ ಸಂಕೀರ್ಣಗಳನ್ನು (Affordable Rental Housing Complexes(ARHC)) ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಯಿತು. ಪ್ರಧಾನ್ ಮಂತ್ರಿ ಆವಾಸ್ ಯೋಜನೆ ಅರ್ಬನ್ (ನಗರ) (PMAY U) ಅಡಿಯಲ್ಲಿ ಉಪ ಯೋಜನೆಯಾಗಿ ಕೈಗೆಟುಕುವ ಬಾಡಿಗೆ ವಸತಿ ಸಂಕೀರ್ಣಗಳನ್ನು(ARHC) ನಗರ ವಲಸಿಗರು / ಬಡವರಿಗಾಗಿ ಅಭಿವೃದ್ಧಿಪಡಿಸಲಾಗುವುದು. ಈ ಬಾಡಿಗೆ ವಸತಿ ಸಂಕೀರ್ಣಗಳನ್ನು ದೇಶದ ನಗರ ಕೇಂದ್ರಗಳಲ್ಲಿ ನಿರ್ಮಿಸಲಾಗುತ್ತಿದ್ದು, ಅಲ್ಲಿ ಈ ವಲಸೆ ಕಾರ್ಮಿಕರು ಕೈಗೆಟುಕುವ ಬಾಡಿಗೆಗೆ ಮನೆಗಳನ್ನು ಪಡೆಯಲು ಇದರಿಂದ ಸಾಧ್ಯವಾಗುತ್ತದೆ.

# Current affairs of July 2020 from KPSC Vaani

## 09 07 2020 3,992 ಭಾರತೀಯ ನಾಗರಿಕರನ್ನು ತಾಯ್ನಾಡಿಗೆ ಕರೆತರುವ ಮೂಲಕಭಾರತೀಯನೌಕಾಪಡೆಯಿಂದ‘ಆಪರೇಷನ್‌ಸಮುದ್ರಸೇತು’ಪೂರ್ಣ




ವಿದೇಶದಿಂದ ಭಾರತೀಯ ನಾಗರಿಕರನ್ನು ವಾಪಸ್ ಕರೆಸಿಕೊಳ್ಳುವ ಪ್ರಯತ್ನದಲ್ಲಿ, ಭಾರತ ಸರ್ಕಾರವು "ವಂದೇ ಭಾರತ" ಸೇರಿ ಹಲವು ಆಪರೇಷನ್ ಗಳನ್ನೂ ಕೈಗೊಂಡಿತ್ತು, ಅವುಗಳ ಪೈಕಿ ಭಾರತೀಯ ನೌಕಾಪಡೆಯ "ಸಮುದ್ರ ಸೇತು" ಕೂಡ ಒಂದು. 2020 ರ ಮೇ 5 ರಂದು ಭಾರತೀಯ ನೌಕಾಪಡೆಯು "ಆಪರೇಷನ್ ಸಮುದ್ರ ಸೇತು" ಆರಂಬಿಸಿತು ಹಾಗೂ ಒಟ್ಟು 55 ದಿನಗಳ ಕಾಲ ನಡೆದ ಈ ಕಾರ್ಯಾಚರಣೆಯಲ್ಲಿ 3,992 ಭಾರತೀಯ ನಾಗರಿಕರನ್ನು ಮರಳಿ ಭಾರತೀಯ ನೌಕಾಪಡೆಯು ತಾಯ್ನಾಡಿಗೆ ಕರೆತಂದಿತು. ಈ ಮೊದಲು 2015 ರಲ್ಲಿ ಭಾರತೀಯ ನೌಕಾಪಡೆಯು "ಆಪರೇಷನ್ ರಾಹತ್" ಹೆಸರಿನ ಕಾರ್ಯಾಚರಣೆಯಲ್ಲಿ 5600 ಜನರನ್ನು (960 ವಿದೇಶಿ ಪ್ರಜೆಗಳು, ಉಳಿದ ಭಾರತೀಯ ನಾಗರಿಕರು) ಯೆಮನ್‌ನಿಂದ ಕರೆತಂದಿತ್ತು.

## 09 07 2020 ‘ಕೃಷಿಮೂಲಸೌಕರ್ಯನಿಧಿ’ಕೇಂದ್ರಸಚಿವಸಂಪುಟ ಅನುಮೋದನೆ



ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊಸ ಪ್ಯಾನ್ ಇಂಡಿಯಾ ಕೇಂದ್ರ ವಲಯ ಯೋಜನೆಗೆ ಅನುಮೋದನೆ ನೀಡಲಾಯಿತು. ಈ ಹೊಸ ಕೇಂದ್ರ ವಲಯ ಯೋಜನೆಯನ್ನು ‘ಕೃಷಿ ಮೂಲಸೌಕರ್ಯ ನಿಧಿ’ (Agriculture Infrastructure Fund) ಎಂದು ಕರೆಯಲಾಗುತ್ತದೆ. 20 ಲಕ್ಷ ಕೋಟಿ ರೂ.ಗಳ ಆತ್ಮನಿರ್ಭಾರ ಭಾರತ್ ಯೋಜನೆಯ ಭಾಗವಾಗಿ ‘ಕೃಷಿ ಮೂಲಸೌಕರ್ಯ ನಿಧಿ’ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವರು ಘೋಷಿಸಿದರು. ಈ ಯೋಜನೆಯಡಿ ಕೃಷಿ ವಲಯಕ್ಕೆ ರೈತ ಉತ್ಪಾದಕ ಸಂಸ್ಥೆಗಳು(FPO),ಸ್ಟಾರ್ಟ್‌ಅಪ್,ಪ್ರಾಥಮಿಕಕೃಷಿಸಾಲಸಂಘಗಳು,ಕೃಷಿ ಉದ್ಯಮಿಗಳಿಗೆದೇಶದ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಮೂಲಕ 1 ಲಕ್ಷ ಕೋಟಿ ರೂ.ಗಳವರೆಗೆ ಹಣಕಾಸಿನ ನೆರವು ನೀಡಲಾಗುವುದು. ಕೃಷಿ ಮೂಲಸೌಕರ್ಯ ನಿಧಿ :

* ಈ ಯೋಜನೆಯ ಅವಧಿ 10 ವರ್ಷಗಳವರೆಗೆ ಅಂದರೆ 2020 21ರ ಆರ್ಥಿಕ ವರ್ಷದಿಂದ 2029 30 ರವರೆಗೆ.
* ಈ ಯೋಜನೆಯಡಿ 1 ಲಕ್ಷ ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಲಾಗುವುದು ಮತ್ತು ಅದರಲ್ಲಿ 2020 21ರ ಆರ್ಥಿಕ ವರ್ಷದಲ್ಲಿ 10,000ಕೋಟಿರೂ.ಆದರೆಮುಂದಿನಮೂರುಹಣಕಾಸುವರ್ಷದಲ್ಲಿ 30,000ಕೋಟಿರೂ.ಗಳನ್ನು ಮಂಜೂರು ಮಾಡಲಾಗುವುದು.

# Current affairs of July 2020 from KPSC Vaani

**09 07 2020 ಶೇಕಡಾ 100 ರಷ್ಟು ಗ್ಯಾಸ್ ವಿತರಣೆಯಲ್ಲಿ ಹಿಮಾಚಲ ಪ್ರದೇಶ ಸಾಧನೆ**




ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಉಜ್ವಲ ಯೋಜನೆ ಮೂಲಕ 1.36 ಲಕ್ಷ ಕುಟುಂಬಗಳು ಸೇರಿ ರಾಜ್ಯಾದಂತ ಎಲ್ಲಾ ಮನೆಗೂ ಹಿಮಾಚಲ ಪ್ರದೇಶ ಸರ್ಕಾರ ಅಡುಗೆ ಅನಿಲ ವ್ಯವಸ್ಥೆ ಕಲ್ಪಿಸಿದ್ದು, ಈ ಮೂಲಕ ಶೇ.100 ಫಲಾನುಭವಿಗಳಿಗೆ ಉಚಿತ ಗ್ಯಾಸ್ ವ್ಯವಸ್ಥೆ ಕಲ್ಪಿಸಿದ "ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ" ಹಿಮಾಚಲ ಪ್ರದೇಶದ ಮುಖ್ಯಮಂತ್ರಿ : "ಜೈರಾಮ್ ಟಾಕುರ್" ಪ್ರಧಾನ್ ಮಂತ್ರಿ ಉಜ್ವಾಲಾ ಯೋಜನೆ / Pradhan Mantri Ujjwala ಯೋಜನಾ : ಪ್ರಾರಂಭ 1ಮೇ 2016ಪ್ರಸ್ತುತ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರು : ಧರ್ಮೇಂದ್ರ ಪ್ರಧಾನ್

**10 07 2020 ವಿಶ್ವ ಆರೋಗ್ಯ ಸಂಸ್ಥೆಯಿಂದ ಅಧಿಕೃತವಾಗಿ ಹಿಂದೆ ಸರಿದ ಅಮೆರಿಕ**



ವಾಷಿಂಗ್ಟನ್ : ಕೊರೊನಾ ವೈರಸ್ ವಿಚಾರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಚೀನಾದ ಪರ ಬೆಂಬಲ ನೀಡುತ್ತಿದೆ ಎಂದು ಆರೋಪಿಸಿದ್ದ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ, ಅಧಿಕೃತವಾಗಿ ವಿಶ್ವ ಅರೋಗ್ಯ ಸಂಸ್ಥೆಯಿಂದ ಹೊರನಡೆದಿದ್ದಾರೆ. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರಿಗೆ ಅಮೆರಿಕವು ಈ ಕುರಿತು ಮಾಹಿತಿ ರವಾನೆ ಮಾಡಿದ್ದು, ಬರುವ ಜುಲೈ 8, 2021 ರಿಂದ ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಯಿಂದ ಅಧಿಕೃತವಾಗಿ ಹೊರಗುಳಿಯಲಿದೆ ಎಂದು ತಿಳಿಸಿದ್ದಾರೆ. ಚೀನಾ ದೇಶವು ಉದ್ದೇಶಪೂರ್ವಕವಾಗಿ ಜಗತ್ತಿಗೆ ಕೊರೊನಾ ವೈರಸ್ ಸೋಂಕನ್ನು ಹರಡಿಸಿದ್ದು, ಈ ಕುರಿತು ಸೂಕ್ತ ತನಿಖೆ ಅಗತ್ಯ ಎಂದು ಡೊನಾಲ್ಡ್ ಟ್ರಂಪ್ ಆರೋಪಿಸಿದ್ದರು. ಆದರೆ, ಈ ಆರೋಪಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ ಹಿನ್ನಲೆ, ಆಕ್ರೋಶಗೊಂಡ ಡೊನಾಲ್ಡ್ ಟ್ರಂಪ್, ವಿಶ್ವ ಆರೋಗ್ಯ ಸಂಸ್ಥೆ ಚೀನಾ ಪರವಾಗಿದ್ದು, WHO ಗೆ ನೀಡುವ ಅನುದಾನವನ್ನು ನಾವು ನಿಲ್ಲಿಸುತ್ತೇವೆ ಎಂದು ಮೇ ತಿಂಗಳಲ್ಲಿ ಟ್ರಂಪ್ ಘೋಷಣೆ ಮಾಡಿದ್ದರು.
* ವಿಶ್ವ ಆರೋಗ್ಯ ಸಂಸ್ಥೆಗೆ ಚೀನಾ ಪ್ರತಿ ವರ್ಷ 300 ಕೋಟಿ ಅನುದಾನ ನೀಡುತ್ತಿದೆ. ಹಾಗೂ ಅಮೆರಿಕ 3 ಸಾವಿರ ಕೋಟಿ ಅನುದಾನ ನೀಡುತ್ತಿದೆ ಎಂಬ ಮಾಹಿತಿ ಇದೆ.

# Current affairs of July 2020 from KPSC Vaani

## 10 07 2020 MCA ಕೋರ್ಸ್ ನ್ನು ಎರಡು ವರ್ಷಗಳಿಗೆ ಸೀಮಿತಗೊಳಿಸಿ AICTE ಮಹತ್ವದ ಆದೇಶ




ನವದೆಹಲಿ : ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್(ಎಂಸಿಎ) ಕೋರ್ಸ್ ಭಾರತದಲ್ಲಿ ಇದುವರೆಗೆ 3 ವರ್ಷಗಳ ಸ್ನಾತಕೋತ್ತರ ಪದವಿಯಾಗಿತ್ತು, ಆದರೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಕೌನ್ಸಿಲ್ (ಎಐಸಿಟಿಇ) ಈ ಪದವಿಯನ್ನು 2 ವರ್ಷಗಳಿಗೆ ಸೀಮಿತಿಗೊಳಿಸಿ ನಿರ್ಧಾರ ಕೈಗೊಂಡಿದೆ. ಯುಜಿಸಿ 545ನೇ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧಾರವಾದಂತೆ ಡಿಸೆಂಬರ್ 19, 2019ಕ್ಕೆ ಎಐಸಿಟಿಇಗೆ ಈ ಕುರಿತಂತೆ ನಿರ್ದೇಶನ ಸಿಕ್ಕಿದೆ. ಇತೀಚೆಗೆ ನಡೆದ ಸಭೆಯಲ್ಲಿ ಅನುಮೋದನೆ ಸಿಕ್ಕಿದೆ. ಹಾಗೂ 2020 21ನೇ ಶೈಕ್ಷಣಿಕ ಸಾಲಿನಿಂದ ಈ ನಿಯಮ ಜಾರಿಗೆ ಬರಲಿದೆ

## 10 07 2020 ಇತ್ತೀಚಿಗೆ ಪ್ರಧಾನಿ ಮೋದಿಯಿಂದ `ಇಂಡಿಯಾ ಗ್ಲೋಬಲ್ ವೀಕ್ 2020' ಉದ್ದೇಶಿಸಿ ಭಾಷಣ




ಲಂಡನ್ : ಇತ್ತೀಚಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಲಂಡನ್ ನಲ್ಲಿ ಆಯೋಜನೆಗೊಂಡಿರುವ ಇಂಡಿಯಾ ಗ್ಲೋಬಲ್ ವೀಕ್ 2020 ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ವಿಡಿಯೋ ಕಾನ್ಫರೆನ್ಸ್ ಮೂಲಕ ಸಮಾರಂಭದಲ್ಲಿ ಪ್ರಧಾನಿ ಮೋದಿ ಭಾಗಿಯಾಗಿ ಮಾತನಾಡಿದ್ದು, ಭಾರತದಲ್ಲಿ ವ್ಯಾಪಾರ, ವಿದೇಶಿ ಹೂಡಿಕೆ ಮಾಡಲು ಇರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 30 ವಿವಿಧ ದೇಶಗಳ 5 ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದು, ಒಟ್ಟು ಮೂರು ದಿನದ ಈ ಕಾರ್ಯಕ್ರಮ ನಡೆಯಲಿದೆ.

# Current affairs of July 2020 from KPSC Vaani

## 10 07 2020 ಅಮೆರಿಕ ಸಿಬ್ಬಂದಿ ಮೇಲೆ ವೀಸಾ ನಿರ್ಬಂಧ ವಿಧಿಸಿದ ಚೀನಾ



ಬೀಜಿಂಗ್ : ಚೀನಾ ದೇಶವು ಅಮೇರಿಕಾ ದೇಶದ ಸಿಬ್ಬಂದಿಗಳ ಮೇಲೆ ವೀಸಾ ನಿರ್ಬಂಧ ವಿಧಿಸಿದೆ. ಅಮೆರಿಕದಿಂದ ತಪ್ಪು ನಿರ್ಧಾರಗಳಿಗೆ ಪ್ರತಿಯಾಗಿ ಆ ದೇಶದ ಸಿಬ್ಬಂದಿ ಮೇಲೆ ವೀಸಾ ನಿರ್ಬಂಧವನ್ನು ವಿಧಿಸುವ ನಿರ್ಧಾರವನ್ನು ಚೀನಾ ಕೈಗೊಂಡಿದ್ದು, ಇದಕ್ಕೆ ಮೂಲ ಕಾರಣವೂ ಟಿಬೆಟ್ ವಿಚಾರದಲ್ಲಿ ಅಮೆರಿಕಾವು ಕೆಟ್ಟದ್ದಾಗಿ ವರ್ತಿಸಿದ್ದಾಗಿದೆ ಎಂದು ಚೀನಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಜೋ ಲಿಜಿಯಾನ್ ಹೇಳಿಕೆ ನೀಡಿರುವ ಬಗ್ಗೆ ವರದಿಯಾಗಿದೆ. 2018ರ ಕಾಯ್ದೆಯೊಂದರ ಅಡಿಯಲ್ಲಿ ಚೀನಾದ ಕೆಲ ಅಧಿಕಾರಿಗಳಿಗೆ ವೀಸಾ ನಿರ್ಬಂಧಸಿದ ಅಮೆರಿಕದ ನಡೆಯ ಹಿನ್ನಡೆ ಚೀನಾವು ತನ್ನ ಈ ನಿರ್ಧಾರ ಪ್ರಕಟಿಸಿದೆ.

* ಅಮೆರಿಕವು ಕೂಡ ವಿದೇಶಗಳ ವಿದ್ಯಾರ್ಥಿಗಳಿಗೂ ಕೂಡ ವೀಸಾ ನಿರ್ಬಂಧ ವಿಧಿಸಿದ್ದು, ಆನ್‌ಲೈನ್ ತರಗತಿ ಇರುವ ವಿದ್ಯಾರ್ಥಿಗಳಿಗೆ ದೇಶ ತೊರೆಯಲು ಸೂಚನೆ ನೀಡಿದೆ.

## 10 07 2020 ಪ್ರಧಾನಿ ಮೋದಿಯಿಂದ ಏಷ್ಯಾದ ಅತಿ ದೊಡ್ಡ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ ಉದ್ಘಾಟನೆ



ರೇವಾ : ಭಾರತದ ಪ್ರಧಾನಿಯವರಾದ ನರೇಂದ್ರ ಮೋದಿಯವರು ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ನಿರ್ಮಿಸಿರುವ ಏಷ್ಯಾದ ಅತಿ ದೊಡ್ಡ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕವನ್ನು ಉದ್ಘಾಟನೆ ಮಾಡಲಿದ್ದಾರೆ.

* ಈ ಘಟಕವು ಏಷ್ಯಾದಲ್ಲೇ ಅತಿ ದೊಡ್ಡ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕವಾಗಿದೆ.
* 750 ಮೆಗಾವ್ಯಾಟ್ ಸಾಮರ್ಥ್ಯ ಹೊಂದಿದ್ದು, ಅಮೆರಿಕದ ಕ್ಯಾಲಿಫೋರ್ನಿಯಾದ ಅತಿ ದೊಡ್ಡ ಸೋಲಾರ್ ಪ್ಲಾಂಟ್‌ನ ದಾಖಲೆ ಮುರಿದು ಹಾಕಲಿದೆ.
* ಈ ಘಟಕವು ಬರೋಬ್ಬರಿ 3,700 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿದ್ದು, ಇದಕ್ಕಾಗಿ 4,500 ಕೋಟಿ ರೂ ವೆಚ್ಚ ಮಾಡಲಾಗಿದೆ.

# Current affairs of July 2020 from KPSC Vaani

### 10 07 2020 ನೇಪಾಳದಲ್ಲಿ ಡಿಡಿ ಹೊರತುಪಡಿಸಿ ಭಾರತದ ಎಲ್ಲಾ ನ್ಯೂಸ್ ಚಾನೆಲ್ ಗಳಿಗೆ ನಿಷೇಧ !




ನೇಪಾಳ ಮತ್ತು ಭಾರತ ರಾಷ್ಟ್ರದ ಮಧ್ಯ ನೂತನ ಭೂಪಟಕ್ಕೆ ಸಂಬಂಧಿಸಿದಂತೆ ವಿವಾದ ತೆರೆದೋರಿರುವ ಮಧ್ಯಯೇ ನೇಪಾಳವು ದೂರದರ್ಶನ ಹೊರತುಪಡಿಸಿ ಭಾರತದ ಎಲ್ಲಾ ಸುದ್ದಿ ಚಾನೆಲಗಳನ್ನು ನಿಷೇಧಿಸಿದೆ ಎಂದು ವರದಿಯಾಗಿದೆ. ಭಾರತದ ಸುದ್ದಿ ಚಾನಲ್ ಗಳು ನೇಪಾಳದ ಪ್ರಧಾನಿ ಕೆ.ಪಿ. ಶರ್ಮಾ ಬಗ್ಗೆ ಮಾನಹಾನಿಕರ ಸುದ್ದಿಗಳನ್ನು ಬಿತ್ತರಿಸುತ್ತವೆ ಎಂದು ಆರೋಪಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ನೇಪಾಳದ ಹಿಮಾಲಯನ್ ಟೈಮ್ಸ್ ವರದಿ ಮಾಡಿದೆ.

### 10 07 2020 ಅರವಿಂದ್ ಫ್ಯಾಷನ್ಸ್ ಲಿಮಿಟೆಡ್‌ನಲ್ಲಿ ಫ್ಲಿಪ್‌ಕಾರ್ಟ್ ಗ್ರೂಪ್ ಹೂಡಿಕೆ

ಬೆಂಗಳೂರು: ಫ್ಲಿಪ್‌ಕಾರ್ಟ್ ಸಮೂಹವು ಅರವಿಂದ್ ಫ್ಯಾಷನ್ಸ್ ಲಿಮಿಟೆಡ್‌ನಲ್ಲಿ (AFL)ಸುಮಾರು ₹260 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದು, ಈ ಹೂಡಿಕೆಯು ಫ್ಲಿಪ್‌ಕಾರ್ಟ್ ಗ್ರೂಪ್ ಮತ್ತು ಎಎಫ್‌ಎಲ್ ನಡುವಣ ಪಾಲುದಾರಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ.

# Current affairs of July 2020 from KPSC Vaani

### 10 07 2020 ದೇಶದಲ್ಲೇ ಅತಿದೊಡ್ಡ ಕೋವಿಡ್ ಕೇರ್ ಸೆಂಟರ್ ಬೆಂಗಳೂರಿನಲ್ಲಿ ಸಿದ್ಧ





ಬೆಂಗಳೂರು: ಇಡೀ ದೇಶದಲ್ಲಿಯೇ ಅತ್ಯಂತ ಬೃಹತ್ ಕೋರೋಣ ಕೇರ್ ಸೆಂಟರ್ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ನಿರ್ಮಾಣವಾಗಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ತನ್ನ ಸೇವೆ ಒದಗಿಸಲಿದೆ. ನಗರದ ಹೊರವಲಯದಲ್ಲಿರುವ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಈ ಆಸ್ಪತ್ರೆ ನಿರ್ಮಿಸಲಾಗಿದ್ದು, ಒಟ್ಟು 10,100 ಹಾಸಿಗೆಗಳ ಸಾಮರ್ಥ್ಯದ ಕೋರೋಣ ಕೇರ್ ಸೆಂಟರ್ ಇದಾಗಿದೆ.
* ಈ ಬೃಹತ್ ಕೋವಿಡ್ ಕೇರ್ ಸೆಂಟರ್‌ನಲ್ಲಿ 100 200 ಜನರಿಗೆ ಒಬ್ಬ ವೈದ್ಯರಂತೆ ಸುಮಾರು 600 ವೈದ್ಯರು, 1000 ನರ್ಸ್‌ಗಳು ಹಾಗೂ ಇನ್ನಿತರ ಆರೋಗ್ಯ ಯೋಧರು ಸೇರಿ ಸುಮಾರು 2200 ಸಿಬ್ಬಂದಿಯನ್ನು ಸೇವೆಗೆ ಸರ್ಕಾರ ನೇಮಿಸಲಿದೆ.

### 11 07 2020 ಐವರಿಕೋಸ್ಟ್ ದೇಶದ ಪ್ರಧಾನಿ ಅಮದೌ ಗೋನ್ ಕೌಲಿಬಲಿ ನಿಧನ



ಆಬಿದ್ಜಾನ್ (ಐವರಿಕೋಸ್ಟ್) : ಐವರಿಕೋಸ್ಟ್ ದೇಶದ ಪ್ರಧಾನಿ ಅಮದೌ ಗೋನ್ ಕೌಲಿಬಲಿ ಅವರು ಜುಲೈ 08 ರಂದು ಹೃದಯ ಕಾಯಿಲೆಯಿಂದ ತಮ್ಮ 61 ನೇ ವಯಸ್ಸಿನಲ್ಲಿ ಅದಿಕಾರದಲ್ಲಿರುವಾಗಲೇ ನಿಧನರಾಗಿದ್ದಾರೆ. ಈ ಕುರಿತು ಐವರಿಕೋಸ್ಟ್ ನ ಪ್ರಧಾನಿ ಕಚೇರಿ ಮಾಹಿತಿ ನೀಡಿದೆ. ಅಕ್ಟೋಬರ್ ನಲ್ಲಿ ದೇಶದಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಅವರು ಆಡಳಿತಾರೂಢ ಪಕ್ಷದ ಅಭ್ಯರ್ಥಿಯಾಗಿದ್ದರು.


# Current affairs of July 2020 from KPSC Vaani

### 11 07 2020 ಭಾರತೀಯ ವಾಯುಪಡೆ ಸಾಮರ್ಥ್ಯ ಹೆಚ್ಚಿಸಲು ಬೋಯಿಂಗ್‌ನ ಅಪಾಚೆ ಹೆಲಿಕಾಪ್ಟರ್ ಸೇರ್ಪಡೆ



ನವದೆಹಲಿ: ಪ್ರಸ್ತುತ ಚೀನಾದೊಂದಿಗಿನ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾದ ಈ ಸಮಯದಲ್ಲಿ ಅಮೆರಿಕದ ಏರೋಸ್ಪೇಸ್ ಕಂಪನಿಯು ಭಾರತಕ್ಕೆ 5 ಬೋಯಿಂಗ್ ಅಪಾಚೆ ಅಟ್ಯಾಕ್ ಹೆಲಿಕಾಪ್ಟರ್‌ಗಳನ್ನು ಸರಬರಾಜು ಮಾಡಿದೆ. ಈ ಮೂಲಕ ಭಾರತವು ಖರೀದಿಸಿದ್ದ 22 ಅಪಾಚೆ ಅಟ್ಯಾಕ್ ಹೆಲಿಕಾಪ್ಟರ್‌ನ ಕೊನೆಯ ಕಂತು ಇದಾಗಿತ್ತು. ಈ ಮೂಲಕ ಭಾರತಕ್ಕೆ ಅಮೆರಿಕದ ಏರೋಸ್ಪೇಸ್ ಕಂಪನಿಯು ಒಟ್ಟು 22 ಅಪಾಚೆ ಅಟ್ಯಾಕ್ ಹೆಲಿಕಾಪ್ಟರ್ ಮತ್ತು 15 ಚಿನೋಕ್ ಮಿಲಿಟರಿ ಹೆಲಿಕಾಪ್ಟರ್‌ಗಳನ್ನು ಪೂರೈಕೆ ಮಾಡಿದಂತಾಗಿದೆ.
* 2015 ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತೀಯ ವಾಯುಪಡೆಗಾಗಿ ಕೇಂದ್ರ ಸರ್ಕಾರವು ಒಟ್ಟು 22 ಅಪಾಚೆ ಮತ್ತು 15 ಚಿನೋಕ್ ಹೆಲಿಕಾಪ್ಟರ್‌ಗಳನ್ನು ಖರೀದಿಗಾಗಿ 100ಕೋಟಿ ಡಾಲರ್ ಒಪ್ಪಂದ ಮಾಡಿಕೊಂಡಿತ್ತು.

### 11 07 2020 ಜುಲೈ 11 = ವಿಶ್ವ ಜನಸಂಖ್ಯಾ ದಿನ




ವಿಶ್ವ ಜನಸಂಖ್ಯಾ ದಿನವನ್ನು ಪ್ರತಿವರ್ಷ ಜುಲೈ 11 ರಂದು ಆಚರಿಸಲಾಗುತ್ತದೆ, ಈ ಆಚರಣೆ ಮೂಲಕ ಜಾಗತಿಕ ಜನಸಂಖ್ಯೆಯಿಂದ ಉಂಟಾಗಬಹುದಾದ ಸಮಸ್ಯೆಗಳ ಮೇಲೆ ಬೆಳಕು ಚಲ್ಲಲು ಹಾಗು ಈ ಕುರಿತು ಜಾಗೃತಿ ಮೂಡಿಸಲಾಗುವದು.
* ಈ ಘಟನೆಯನ್ನು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಮಂಡಳಿ 1989ರಲ್ಲಿ ಆರಂಭಿಸಲಾಯಿತು.
*ಜುಲೈ 11,1987ರಂದು ವಿಶ್ವದ ಅಂದಾಜು ಜನಸಂಖ್ಯೆ ಐದು ಶತಕೋಟಿ ತಲುಪಿದ ದಿನಾಂಕವಾಗಿದೆ.
* ಕುಟುಂಬ ಯೋಜನೆಯ ಮಹತ್ವ, ಲಿಂಗ ಸಮಾನತೆ, ಬಡತನ, ತಾಯಿಯ ಆರೋಗ್ಯ ಮತ್ತು ಮಾನವ ಹಕ್ಕುಗಳಂತಹ ವಿವಿಧ ಜನಸಂಖ್ಯಾ ವಿಷಯಗಳ ಬಗ್ಗೆ ಜನರ ಜಾಗೃತಿಯನ್ನು ಹೆಚ್ಚಿಸುವ ಉದ್ದೇಶವನ್ನು ವಿಶ್ವ ಜನಸಂಖ್ಯಾ ದಿನ ಹೊಂದಿದೆ.

# Current affairs of July 2020 from KPSC Vaani

## 11 07 2020 ಪಾಕಿಸ್ತಾನದವಿಮಾನಗಳಿಗೆನಿರ್ಬಂಧಹೇರಿದಅಮೆರಿಕ




ವಾಷಿಂಗ್ಟನ್ : ಇತ್ತೀಚಿಗೆ ಪಾಕಿಸ್ತಾನದಲ್ಲಿ ವರದಿಯಾಗಿರುವ ನಕಲಿ ಪೈಲಟಗಳ ಹಗರಣವನ್ನು ಗಂಭೀರವಾಗಿ ಪರಿಗಣಿಸಿರುವ ಅಮೇರಿಕಾ ರಾಷ್ಟ್ರವು ಅಮೆರಿಕ ಪ್ರವೇಶಿಸುವ ಎಲ್ಲ ಪಾಕಿಸ್ತಾನದ ವಿಮಾನಗಳಿಗೆ ಅಮೆರಿಕ ನಿರ್ಬಂಧ ಹೇರಿದೆ.
* ಪ್ರಯಾಣಿಕರ ಹಿತದೃಷ್ಟಿಯಿಂದ ನಾವು ಈ ಕ್ರಮ ಕೈಗೊಂಡಿದ್ದೇವೆ, ಪಾಕಿಸ್ತಾನದಿಂದ ಬರುವ ವಿಮಾನಗಳಿಗೆ ನಿಷೇಧ ಹೇರಿದ್ದೇವೆ ಎಂದು ಅಮರಿಕದ ಸಚಿವಾಲಯದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.
* ಪ್ರಸ್ತುತ ಪಾಕಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೈಲಟ್ ಗಳಲ್ಲಿ ಮೂರನೇ ಒಂದು ಭಾಗದಷ್ಟು ಜನ ಸುಳ್ಳು ದಾಖಲೆ ಸೃಷ್ಟಿಸಿ ಕೆಲಸ ಪಡೆದಿರುವ ಬಗ್ಗೆ ವರದಿಯಾಗಿದ್ದರ ಹಿನ್ನಲೆಯಲ್ಲಿ ಅಮೆರಿಕ ಪ್ರವೇಶಿಸುವ ಪಾಕಿಸ್ತಾನದ ಎಲ್ಲಾ ವಿಮಾನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

## 11 07 2020 ಕೊರೊನಾ ನಿಯಂತ್ರಣ: ಮುಂಬೈನ ಧಾರಾವಿ ಸ್ಲಂ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಭಾರಿ ಮೆಚ್ಚುಗೆ



ಮುಂಬೈ :ಕಳೆದಕೆಲವುದಿನಗಳಹಿಂದೆಕೊರೋನಾಹಾಟ್‌ಸ್ಪಾಟ್ಆಗಿದ್ದಮಹಾರಾಷ್ಟ್ರದಮುಂಬೈ ನಗರದ ಧಾರಾವಿ ಸ್ಲಮ್ ನಲ್ಲಿ ಪ್ರಸ್ತುತ ಕೊರೋನಾ ಸೋಂಕು ನಿಯಂತ್ರಣಕ್ಕೆ ಬಂದಿರುವದನ್ನು ಪರಿಗಣಿಸಿರುವ ವಿಶ್ವ ಅರೋಗ್ಯ ಸಂಸ್ಥೆಯು ಧಾರಾವಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದೆ.
* ಏಷ್ಯಾದಲ್ಲಿಯೇ ಅತೀದೊಡ್ಡ ಕೊಳಗೇರಿ ಪ್ರದೇಶ ಎಂಬ ಕುಖ್ಯಾತಿ ಪಡೆದುಕೊಂಡಿದ್ದ ಮುಂಬೈನ ಈ ಸ್ಲಂ ಕೋರೋಣ ಸೋಂಕು ನಿಯಂತ್ರಣದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದ್ದು, ಇತರೆ ಎಲ್ಲ ರಾಜ್ಯ ಹಾಗೂ ಪ್ರಮುಖ ಪ್ರದೇಶಗಳಿಗೆ ಉತ್ತಮ ನಿದರ್ಶನವಾಗಿದೆ ಎಂದು ವಿಶ್ವ ಸಂಸ್ಥೆಯಾ ನಿರ್ದೇಶಕ ಡೋಸ್ ಅಧನೊಮ್ ಗೆಬ್ರೆಯೋಸಿಸ್ ತಿಳಿಸಿದ್ದಾರೆ.

# Current affairs of July 2020 from KPSC Vaani

### 12 07 2020 ಭಾರತ, ಅಮೆರಿಕ ಮತ್ತು ಜಪಾನ್ ಜತೆ ಆಸ್ಟ್ರೇಲಿಯಾದ ನೌಕಾ ಸಮರಾಭ್ಯಾಸ



ನವದೆಹಲಿ : ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳು ಜಂಟಿಯಾಗಿ "ಮಲಬಾರ್ ನೌಕಾ ಸಮರಾಭ್ಯಾಸ" ಎಂಬ ಹೆಸರಿನ ಈ ಸಮರಭ್ಯಾಸ 2020 ವರ್ಷದ ಕೊನೆಯಲ್ಲಿ ನಡೆಸಲು ಮುಂದಾಗಿವೆ. ಪ್ರತಿ ಬಾರಿ ಸಾಮಾನ್ಯವಾಗಿ ಭಾರತ, ಅಮೆರಿಕ ಮತ್ತು ಜಪಾನ್‌ನ ನೌಕಾಪಡೆಗಳು ಮಾತ್ರವೇ ಈ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳುತ್ತಿದ್ದವು. ಆದರೆ, ಈ ಬಾರಿ ಆಸ್ಟ್ರೇಲಿಯಾವನ್ನು ಸೇರಿಸಿಕೊಳ್ಳಲು ಚಿಂತನೆ ನಡೆದಿದೆ ಎಂದು ತಿಳಿದು ಬಂದಿದೆ.

* ಒಂದು ವೇಳೆ ಆಸ್ಟ್ರೇಲಿಯಾವನ್ನು ಈ ಸಮರಾಭ್ಯಾಸಕ್ಕೆ ಸೇರಿಸಿಕೊಳ್ಳಲು ಭಾರತ ನಿರ್ಧರಿಸಿದರೆ, ಇಂಡೋ ಪೆಸಿಫಿಕ್ ಮಹಾಸಾಗರದ ವ್ಯಾಪ್ತಿಯಲ್ಲಿ ಚತುಷ್ಕೋನ ಮೈತ್ರಿಕೂಟಕ್ಕೆ ಹೆಚ್ಚಿನ ಬಲ ಒದಗಲಿದೆ.
* ಈ ಮೂಲಕ ಜಾಗತಿಕವಾಗಿ ಚೀನಾ ವಿರೋಧಿ ರಾಷ್ಟ್ರಗಳು ಒಂದಾಗಬೇಕು ಎಂದು ಅಮೆರಿಕದ ಸಂಸತ್ ಸದಸ್ಯ ಜಾನ್ ಕೆನಡಿ ಹೇಳಿಕೆ ಮುನ್ನೆಲೆಗೆ ಬಂದಂತಾಗುತ್ತದೆ.

### 12 07 2020 ಕರ್ನಾಟಕರಾಜ್ಯಸರ್ಕಾರದೊಂದಿಗೆಫ್ಲಿಪ್‌ಕಾರ್ಟ್ಒಪ್ಪಂದ




ಬೆಂಗಳೂರು: ಕರ್ನಾಟಕದ ರಾಜ್ಯದ ಸ್ಥಳೀಯ ಕಲೆ, ಕುಶಲಕರ್ಮಿ ಹಾಗೂ ಕೈಮಗ್ಗ ವಲಯಗಳಿಗೆ ಉತ್ತೇಜನ ನೀಡುವ ಮೂಲಕ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರದ MSME ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯೊಂದಿಗೆ ಪ್ರತಿಷ್ಠಿತ ಇ ಕಾಮರ್ಸ್ ಸಂಸ್ಥೆಯಾದ ಫ್ಲಿಪ್‌ಕಾರ್ಟ್ ಒಪ್ಪಂದ ಮಾಡಿಕೊಂಡಿದೆ.

* 'ಫ್ಲಿಪ್‌ಕಾರ್ಟ್ ಸಮರ್ಥ್' ಎಂಬ ಕಾರ್ಯಕ್ರಮದಡಿ ರಾಜ್ಯದ ಕುಶಲಕರ್ಮಿಗಳು, ನೇಕಾರರಿಗೆ ತಮ್ಮ ವಿಶಿಷ್ಟ ಉತ್ಪನ್ನಗಳನ್ನು ಪ್ರದರ್ಶಿಸಲು ಅನುವು ಮಾಡಿಕೊಡಲಿದೆ.
* ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ 'ಕಾವೇರಿ' ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ 'ಪ್ರಿಯದರ್ಶಿನಿ' ಕೈಮಗ್ಗದ ಉತ್ಪನ್ನಗಳು ಈ ಕಾರ್ಯಕ್ರಮದ ವ್ಯಾಪ್ತಿಗೆ ಬರಲಿವೆ.

# Current affairs of July 2020 from KPSC Vaani



# Current affairs of July 2020 from KPSC Vaani

## 12 07 2020 ಇಂಗ್ಲೆಂಡ್‌ನ ಫುಟ್‌ಬಾಲ್ ದಿಗ್ಗಜ ಚಾರ್ಲ್‌ಟನ್ ನಿಧನ



ಲಂಡನ್: ತಮ್ಮ ಅಪೂರ್ವ ಆಟದ ಮೂಲಕ ಫುಟ್‌ಬಾಲ್ ಲೋಕದಲ್ಲಿ ವಿಶಿಷ್ಟ ಛಾಯೆ ಮೂಡಿಸಿದ್ದ ಇಂಗ್ಲೆಂಡ್‌ನ ಹಿರಿಯ ಆಟಗಾರ ಜಾಕ್ ಚಾರ್ಲ್‌ಟನ್ ತಮ್ಮ 85 ವಯಸ್ಸಿನಲ್ಲಿ ನಿಧನರಾದರು.
* ಇವರು 1966ರವಿಶ್ವಕಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದ ಇಂಗ್ಲೆಂಡ್ ತಂಡದಲ್ಲಿ ಆಡಿದ್ದರು.
*1965ರಿಂದ 1970ರ ಅವಧಿಯಲ್ಲಿ ಇಂಗ್ಲೆಂಡ್ ಪರ 35 ಪಂದ್ಯಗಳಲ್ಲಿ ಕಣಕ್ಕಿಳಿದಿದ್ದ ಇವರು 06 ಗೋಲುಗಳನ್ನು ದಾಖಲಿಸಿದ್ದರು.
* 1952ರಿಂದ 1973ರವರೆಗೂ ಲೀಡ್ಸ್ ಯುನೈಟೆಡ್ ಕ್ಲಬ್ ಪ್ರತಿನಿಧಿಸಿದ್ದ ಇವರು ಒಟ್ಟು 629 ಪಂದ್ಯಗಳಲ್ಲಿ 70 ಗೋಲುಗಳನ್ನು ದಾಖಲಿಸಿದ್ದಾರೆ.

## 12 07 2020 ಭಾರತವು United Kingdom ಗೆ ವಿದೇಶಿ ನೇರ ಹೂಡಿಕೆಯ ಎರಡನೇ ಅತಿದೊಡ್ಡ ಮೂಲವಾಗಿದೆ



2019 20ರ ಆರ್ಥಿಕ ವರ್ಷದಲ್ಲಿ ವಿದೇಶಿ ನೇರ ಹೂಡಿಕೆ (FDI) ಯೋಜನೆಗಳ ಸಂಖ್ಯೆಯ ಅಂಕಿಅಂಶಗಳನ್ನು United Kingdom ಸರ್ಕಾರದ ಅಂತರ ರಾಷ್ಟ್ರೀಯ ವ್ಯಾಪಾರ ಇಲಾಖೆ (DIT) 2020ರ ಜುಲೈ 10ರಂದು ಬಿಡುಗಡೆ ಮಾಡಿತು. ಅಂತರ ರಾಷ್ಟ್ರೀಯ ವ್ಯಾಪಾರ ಇಲಾಖೆ ಒದಗಿಸಿದ ಅಂಕಿಅಂಶಗಳ ಪ್ರಕಾರ, United Kingdom ಗೆ ವಿದೇಶಿ ನೇರ ಹೂಡಿಕೆಯಾ ಎರಡನೇ ಅತಿದೊಡ್ಡ ಮೂಲ ಈಗ ಭಾರತದಿಂದ ಬಂದಿದೆ.
* ಯುನೈಟೆಡ್ ಕಿಂಗ್‌ಡಂನಲ್ಲಿ ಎಫ್‌ಡಿಐಯಲ್ಲಿ ಪ್ರಥಮ ಸ್ಥಾನದಲ್ಲಿ ಯುನೈಟೆಡ್ ಸ್ಟೇಟ್ಸ್ ಮುಂದುವರೆದಿದೆ.
* 120 ಯೋಜನೆಗಳಲ್ಲಿ ಹೂಡಿಕೆ ಮಾಡಿದ ಭಾರತ ಎರಡನೇ ಸ್ಥಾನದಲ್ಲಿದೆ.

# Current affairs of July 2020 from KPSC Vaani

## 12 07 2020 ಛತ್ತೀಸಗಡ ಹೈಕೋರ್ಟ್ ನಡೆಸಿದ ಭಾರತದ ಮೊದಲ ರಾಜ್ಯ ಮಟ್ಟದ ‘ಇ ಲೋಕಅದಾಲತ್’




ಕಳೆದಜುಲೈ3,2020ರಂದುನಡೆಯಬೇಕಿದ್ದ3ನೇರಾಷ್ಟ್ರೀಯಲೋಕಅದಾಲತ್ರದ್ದಾದ ಹಿನ್ನಲೆ, ಭಾರತದಮೊದಲರಾಜ್ಯಮಟ್ಟದ’ಇ ಲೋಕಅದಾಲತ್’ಅನ್ನುಜುಲೈ11,2020ರಂದು ಯಶಸ್ವಿಯಾಗಿ ನಡೆಸಲಾಯಿತು. ಛತ್ತೀಸಗಡದ ಹೈಕೋರ್ಟ್ನ ಮುಖ್ಯ ನ್ಯಾಯಮೂರ್ತಿ ಪಿ.ಆರ್.ರಾಮಚಂದ್ರ ಮೆನನ್ ಅವರು ಬಿಲಾಸ್ಪುರ ಜಿಲ್ಲೆಯ ಹೈಕೋರ್ಟ್ನ ಕಾನ್ಫರೆನ್ಸ್ ಹಾಲ್‌ನಿಂದ ಭಾರತದಮೊದಲರಾಜ್ಯಮಟ್ಟದಇ ಲೋಕಅದಾಲತ್ಅನ್ನುಉದ್ಘಾಟಿಸಿದರು.
ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಇ ಲೋಕ್ ಅದಾಲತ್ ನಡೆಸಲಾಯಿತು.

## 12 07 2020 ಅಖಿಲ ಭಾರತ ಹುಲಿ ಗಣತಿ 2018 ರ ನಾಲ್ಕನೇ ಆವೃತ್ತಿಯು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ಗೆ ಸೇರ್ಪಡೆ




ವಿಶ್ವದ ಅತಿದೊಡ್ಡ ಕ್ಯಾಮೆರಾ ಟ್ರ್ಯಾಪಿಂಗ್ ಮೂಲಕ ವನ್ಯಜೀವಿ ಸಮೀಕ್ಷೆ ನಡೆಸಿದ ಅಖಿಲ ಭಾರತ ಹುಲಿ ಗಣತಿ 2018 ರ ನಾಲ್ಕನೇ ಆವೃತ್ತಿಯು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಗೆ ಸೇರ್ಪಡೆಗೊಂಡಿದೆ. 2006 ರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ, ಅಖಿಲ ಭಾರತ ಹುಲಿ ಗಣತಿಯನ್ನು ಭಾರತದಲ್ಲಿ ನಡೆಸಲಾಗುತ್ತಿದ್ದು, 2018 ರ ಗಣತಿಯು ನಾಲ್ಕನೇ ಆವೃತ್ತಿಯಾಗಿದೆ. ಮೊದಲ,ಎರಡನೆಯಮತ್ತು ಮೂರನೆಯಗಣತಿಕಾರ್ಯವುಕ್ರಮವಾಗಿ2006,2010ಮತ್ತು2014 ವರ್ಷಗಳಲ್ಲಿ ನಡೆಸಲಾಗಿತ್ತು.
* ಅಖಿಲ ಭಾರತ ಹುಲಿ ಅಂದಾಜಿನ ನಾಲ್ಕನೇ ಚಕ್ರದ ಫಲಿತಾಂಶವನ್ನು 2019 ರಜುಲೈ29ರಂದುಜಾಗತಿಕಹುಲಿ ದಿನಾಚರಣೆಯಂದುಭಾರತದಪ್ರಧಾನಿನರೇಂದ್ರಮೋದಿಬಿಡುಗಡೆ ಮಾಡಿದರು.
* 2018 ರಲ್ಲಿ ನಡೆದ ಈ ಹುಲಿ ಗಣತಿಯು ವಿಶ್ವದ ಅತಿದೊಡ್ಡ ಕ್ಯಾಮೆರಾ ಟ್ರ್ಯಾಪಿಂಗ್ ಮೂಲಕ ನಡೆದ ವನ್ಯಜೀವಿ ಸಮೀಕ್ಷೆಗಾಗಿ ಗಿನ್ನೆಸ್ ವಿಶ್ವ ದಾಖಲೆಯಾ ಪುಟ ಸೇರಿದೆ.

# Current affairs of July 2020 from KPSC Vaani

## 13 07 2020 ಭಾರತದ ಡಿಜಿಟಲ್ ಆರ್ಥಿಕತೆ ಉತ್ತೇಜನಕ್ಕೆ 75,000 ಕೋಟಿ ರೂ. ನಿಧಿ ಘೋಷಿಸಿದ 'ಗೂಗಲ್'




ನವದೆಹಲಿ : ಭಾರತದ ಡಿಜಿಟಲ್ ಆರ್ಥಿಕತೆಗೆ ಇನ್ನಷ್ಟು ಉತ್ತೇಜನ ನೀಡುವ ಉದ್ದೇಶದಿಂದ ಗೂಗಲ್ ಸಂಸ್ಥೆಯು 75,000ಕೋಟಿ ರೂ. ನಿಧಿಯನ್ನು ಘೋಷಿಸಿದೆ ಎಂದು ಗೂಗಲ್ ಸಿಇಒ ಸುಂದರ್ ಪಿಚೈ ತಿಳಿಸಿದ್ದಾರೆ. ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿಯ ಡಿಜಿಟಲ್ ಇಂಡಿಯಾ ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲ ಸೂಚಿಸಲು ಗೂಗಲ್ ಹೆಮ್ಮೆ ಪಡುತ್ತದೆ ಎಂದಿದ್ದಾರೆ. ಡಿಜಿಟಲ್ ಇಂಡಿಯಾ ಅಭಿವೃದ್ದಿಗಾಗಿ ಮುಂದಿನ 5 7 ವರ್ಷಗಳ ಕಾಲ ಭಾರತದಲ್ಲಿ 75 ಸಾವಿರ ಕೋಟಿ ರುಪಾಯಿಯನ್ನು ಗೂಗಲ್ ಹೂಡಿಕೆ ಮಾಡಲಿದೆ ಎಂದು ಅವರು ತಿಳಿಸಿದರು.

## 13 07 2020 ಭಾರತೀಯ ವಾಯುಪಡೆಯ ಮೊದಲ ಮಹಿಳೆಯರು



ಭಾರತೀಯ ವಾಯುಪಡೆಯ ಮೊದಲ ಮಹಿಳೆಯರು
* ಮೊದಲ ಮಹಿಳಾ ಫ್ಲೈಟ್ ಕಮಾಂಡರ್ ಶಲಿಜಾ ಧಮಿ
* ಭಾರತೀಯ ವಾಯುಪಡೆಯ ಮೊದಲ ಮಹಿಳಾ ವಿಮಾನ ಎಂಜಿನಿಯರ್ ಹಿನಾ ಜೈಸ್ವಾಲ್
* ದಿನದ (ಹಗಲು) ಕಾರ್ಯಾಚರಣೆಗಳಿಗೆ ಹೋಗಲು ಅರ್ಹತೆ ಪಡೆದ ಮೊದಲ ಮಹಿಳೆ ಭಾವನಾ ಕಾಂತ್
* ಸೋಲೋ ಎಂಬ ಫೈಟರ್ ವಿಮಾನವನ್ನು ಹಾರಿಸಿದ ಮೊದಲ ಭಾರತೀಯ ಮಹಿಳೆ ಅವನಿ ಚತುರ್ವೇದಿ
* ಭಾರತದ ಮೊದಲ ಮಹಿಳಾ ಮಿಲಿಟರಿ ರಾಜತಾಂತ್ರಿಕ ಅಂಜಲಿ ಸಿಂಗ್
* ಭಾರತೀಯ ನೌಕಾಪಡೆಯ ಮೊದಲ ಮಹಿಳಾ ಪೈಲಟ್ ಶಿವಾಂಗಿ

# Current affairs of July 2020 from KPSC Vaani

### 13 07 2020 "ವಂದೇ ಭಾರತ್ ಮಿಷನ್" ಕುರಿತ ಕಿರು ಮಾಹಿತಿ



ಜಾಗತಿಕವಾಗಿ ವ್ಯಾಪಿಸಿದ ಕರೋನವೈರಸ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಶ್ವದ ಬೇರೆಬೇರೆ ರಾಷ್ಟ್ರಗಳಲ್ಲಿ ಸಿಲುಕಿರುವ ಭಾರತೀಯರನ್ನು ಮರಳಿ ತಾಯ್ನಾಡಿಕೆ ಕರೆತರಲು ಭಾರತ ಸರ್ಕಾರ ಯೋಜಿಸಿರುವ ಬೃಹತ್ ವಾಪಸಾತಿ ಕಾರ್ಯಾಚರಣೆಯೇ "ವಂದೇ ಭಾರತ್ ಮಿಷನ್"

### 13 07 2020 ಬೇಂದ್ರೆ ಕೃಷ್ಣಪ್ಪರವರ 'ಕುವೆಂಪು ಹನುಮದ್ದರ್ಶನ' ಕೃತಿ ಲೋಕಾರ್ಪಣೆ



ಬೆಂಗಳೂರು : ಖ್ಯಾತ ಲೇಖಕ ಹಾಗೂ ವಿಮರ್ಶಕ ಬೇಂದ್ರೆ ಕೃಷ್ಣಪ್ಪ ಅವರು ರಾಷ್ಟ್ರಕವಿ ಕುವೆಂಪು ಅವರಿಂದ ರಚಿತವಾದ "ಶ್ರೀ ರಾಮಾಯಣ ದರ್ಶನಂ" ಮಹಾಗ್ರಂಥವನ್ನು ಆಧಾರವಾಗಿಟ್ಟುಕೊಂಡು ಬರೆದಿರುವ 'ಕುವೆಂಪು ಹನುಮದ್ದರ್ಶನ' ಮಹಾಕೃತಿಯನ್ನು ರಾಜ್ಯದ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆಗೊಳಿಸಿದರು. ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಕೃತಿಯು ಸಾಮಾನ್ಯರಿಗೆ ಅರ್ಥವಾಗುವದು ಸುಲಭದ ವಿಷಯವಲ್ಲ ಆದರೆ ಇದೆ ಮಹಾ ಗ್ರಂಥವನ್ನು ಅದರವಾಗಿಟ್ಟುಕೊಂಡು ರಚಿಸಿರುವ 'ಕುವೆಂಪು ಹನುಮದ್ದರ್ಶನ' ಮಹಾಕೃತಿಯು ಸರಳ ಭಾಷೆಯಲ್ಲಿ ರಚಿಸಲಾಗಿದ್ದು, ಎಲ್ಲರಿಗೂ ಅರ್ಥವಾಗುವದು.

# Current affairs of July 2020 from KPSC Vaani

## 13 07 2020 ಚಿಕ್ಕಬಳ್ಳಾಪುರದಲ್ಲಿ `ರೊಬೋಟಿಕ್ ಸ್ವಾಬ್ ಟೆಸ್ಟಿಂಗ್ ಲ್ಯಾಬ್' ಆರಂಭ : ಭಾರತದಲ್ಲೇ ಮೊದಲು



ಚಿಕ್ಕಬಳ್ಳಾಪುರ : ರಾಜ್ಯದ ಚಿಲಕ್ಕಬಳ್ಳಾಪುರದಲ್ಲಿ ಭಾರತದಲ್ಲಿಯೇ ಮೊದಲ ಬಾರಿಗೆ ಮಾನವ ಸ್ಪರ್ಶ ರಹಿತ ರೊಬೋಟಿಕ್ ಸ್ಯಾಬ್ ಟೆಸ್ಟಿಂಗ್ ಲ್ಯಾಬ್ ಆರಂಭಸಲಾಗಿದೆ. ಈ ರೊಬೋಟಿಕ್ ಸ್ಯಾಬ್ ಟೆಸ್ಟಿಂಗ್ ಲ್ಯಾಬ್ ನಿಂದ ಆರೋಗ್ಯ ಇಲಾಖೆ ಸಿಬ್ಬಂದಿಗೆ ಕೊರೊನಾ ಸೋಂಕು ತಗುಲದಂತೆ ಸ್ಯಾಬ್ ಟೆಸ್ಟ್ ನಡೆಸಬಹುದಾಗಿದೆ. ಲ್ಯಾಬ್ ನಲ್ಲಿ ಮೊದಲ 96 ಸ್ಯಾಬ್ ವರದಿಗೆ 3.5 ಗಂಟೆ ಸಮಯ ತಗುಲಿದರೆ ಬಳಿಕ ಪ್ರತಿ 1.5ಗಂಟೆಗೆ 96ಸ್ಯಾಬ್ ತಪಾಸಣೆ ನಡೆಸಬಹುದಾಗಿದೆ.

## 13 07 2020 ಭಾರತೀಯ ರೈಲ್ವೆಯಿಂದ ಮೊದಲ ಬಾರಿ ಗಡಿಯಾಚೆಗೂ ಪಾರ್ಸೆಲ್ ರೈಲು ಸೇವೆ ಆರಂಭ



ಇದೇ ಮೊದಲ ಬಾರಿಗೆ ದೇಶದ ಗಡಿಯಾಚೆಗೂ ಭಾರತೀಯ ರೈಲ್ವೆ ತನ್ನ ಪಾರ್ಸೆಲ್ ಸೇವೆಯನ್ನು ವಿಸ್ತರಿಸಿದೆ. ಮೊದಲ ಪಾರ್ಸೆಲ್ ರೈಲು ಬಾಂಗ್ಲಾದೇಶದ ಬೇನಾಪೋಲ್ ಗೆ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ರೆಡ್ಡಿಪಲೆಂನಿಂದ ಒಣಮೆಣಸಿನಕಾಯಿ ಹೊತ್ತೊಯ್ದಿತು. ಈ ವಿಶೇಷ ಪಾರ್ಸೆಲ್ ರೈಲಿಗೆ 16 ವ್ಯಾನ್ ಗಳಿದ್ದು, ಒಟ್ಟು 384 ಟನ್ ತೂಕದ ಒಣಮೆಣಸಿನಕಾಯಿ ಸಾಗಿಸಲಾಯಿತು. ಹಾಗೂ ಈ ಮೂಲಕ ಶೇಕಡಾ 30 ಪರ್ಸೆಂಟ್ ಗೂ ಹೆಚ್ಚು ಹಣ ಉಳಿತಾಯ ಮಾಡಲಾಯಿತು.

# Current affairs of July 2020 from KPSC Vaani

## 13 07 2020 ವಿಶ್ವದಲ್ಲೇ ಕೋವಿಡ್ ಮುಕ್ತ ಎಂದು ಘೋಷಿಸಿದ ಮೊದಲ ರಾಷ್ಟ್ರ ನ್ಯೂಜಿಲೆಂಡ್




ಚೀನಾದ ವುಹಾನ್‌ನಿಂದ ಆರಂಭವಾದ ಕೋವಿಡ್ 19 ಸೋಂಕು ವಿಶ್ವದ ಬಹುತೇಕ ಎಲ್ಲ ರಾಷ್ಟ್ರಗಳಿಗೂ ಹಬ್ಬಿದ್ದು, ಅಪಾರ ಸಾವು ನೋವು ಸೇರಿದಂತೆ ದೇಶಗಳ ಆರ್ಥಿಕ ಸಂಕಷ್ಟಕ್ಕೀಡು ಮಾಡಿದೆ. ಈ ನಡುವೆ ನ್ಯೂಜಿಲೆಂಡ್ ರಾಷ್ಟ್ರ ಮಾತ್ರ ತಾನು ಕೋವಿಡ್ 19 ಮುಕ್ತವಾಗಿರುವುದಾಗಿಯೂ, ಸೋಂಕು ನಿಯಂತ್ರಣಕ್ಕೆ ತಾನು ಜಾರಿಗೊಳಿಸಿದ್ದ ಎಲ್ಲ ನಿರ್ಬಂಧಗಳನ್ನು ರದ್ದುಗೊಳಿಸಿರುವುದಾಗಿ ಘೋಷಿಸಿದೆ.
* ನ್ಯೂಜಿಲೆಂಡ್ ಪ್ರಧಾನಿ ಜೆಸಿಂಡಾ ಆರ್ಡೆನ್, ದೇಶದಲ್ಲಿ ಕೋವಿಡ್ ನಿರ್ಬಂಧಗಳೆಲ್ಲವನ್ನೂ ರದ್ದುಗೊಳಿಸಿರುವುದಾಗಿ ತಿಳಿಸಿದ್ದಾರೆ. ಹಾಗೂ ಪರಿಸ್ಥಿತಿ ನಿಯಂತ್ರಿಸಲು ಸರ್ಕಾರದೊಂದಿಗೆ ಕೈಜೋಡಿಸಿ ಕೆಲಸ ಮಾಡಿ ಸಹಕರಿಸಿದ್ದಕ್ಕಾಗಿ ದೇಶದ ಪ್ರಜೆಗಳೆಲ್ಲರಿಗೂ ಧನ್ಯವಾದ ತಿಳಿಸಿದ್ದಾರೆ.

## 13 07 2020 ಸಿಂಗಾಪುರದಲ್ಲಿ ಮೂರನೇ ಬಾರಿ ಪ್ರಧಾನಿ ಲೀ ಸೀನ್ ಲೂಂಗ್ ಜಯಭೇರಿ



ಸಿಂಗಾಪುರ : ಕೊರೊನಾವೈರಸ್ ಸೋಂಕಿನ ಭೀತಿಯ ನಡೆವೆಯೂ ಸಿಂಗಾಪುರದಲ್ಲಿ ಯಶಸ್ವಿಯಾಗಿ ಚುನಾವಣೆ ಆಯೋಜಿಸಿತ್ತು, ಹಾಗೂ ಈ ಚುನಾವಣೆಯಲ್ಲಿ ಲೀ ಸೀನ್ ಲೂಂಗ್ ನೇತೃತ್ವದ ಪೀಪಲ್ಸ್ ಆಯಕ್ಷನ್ ಪಾರ್ಟಿ ಸ್ಪಷ್ಟ ಬಹುಮತದೊಂದಿಗೆ ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಿತು.
* ತಾನು ಸ್ಪರ್ಧಿಸಿದ್ದ ಒಟ್ಟು 93 ಸ್ಥಾನಗಳ ಪೈಕಿ ಪೀಪಲ್ಸ್ ಆಯಕ್ಷನ್ ಪಾರ್ಟಿಯ 83 ಸ್ಥಾನಗಳಲ್ಲಿ ಜಯಭೇರಿ ಬಾರಿಸಿದೆ. ಹಾಗೂ ಉಳಿದ 10 ಸ್ಥಾನಗಳನ್ನು ವರ್ಕರ್ಸ್ ಪಾರ್ಟಿಯು ಗೆದ್ದುಕೊಂಡಿದೆ.

# Current affairs of July 2020 from KPSC Vaani

### 14 07 2020 ರಿಲಯನ್ಸ್ ಜಿಯೋ 13ನೇ ಜಾಗತಿಕ ಒಪ್ಪಂದ: ಅಮೆರಿಕಾದ ಕ್ವಾಲ್‌ಕಾಮ್ ವೆಂಚರ್ಸ್ ಸಂಸ್ಥೆ ಪಾಲು ಖರೀದಿ




ನವದೆಹಲಿ : ಮುಕೇಶ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಂಗಸಂಸ್ಥೆಯಾದ ರಿಲಯನ್ಸ್ ಜಿಯೋದಲ್ಲಿ ಅಮೆರಿಕಾದ 5ಜಿ ದೈತ್ಯ ಸಂಸ್ಥೆ ಕ್ವಾಲ್‌ಕಾಮ್ ವೆಂಚರ್ಸ್ ಸಂಸ್ಥೆ ಹಣ ಜಿಯೋ ಪ್ಲಾಟ್‌ಫಾರ್ಮ್‌ಗಳಲ್ಲಿ 730 ಕೋಟಿ ರೂ ಮೊತ್ತದ ಶೇ. 0.15ರಷ್ಟು ಪಾಲು ಖರೀದಿಸಿದೆ. ಈ ಮೂಲಕ ಕಳೆದ 12ವಾರಗಳ ಅವಧಿಯಲ್ಲಿ ಜಿಯೋದ 13ನೇ ಜಾಗತಿಕ ಒಪ್ಪಂದ ಇದಾಗಿದೆ. ಈ 13 ಒಪ್ಪಂದಗಳಿಂದ ಜಿಯೋಗೆ 1.18 ಲಕ್ಷ ಕೋಟಿ ಬಂಡವಾಳ ಹರಿದುಬಂದಂತಾಗಿದೆ.

### 14 07 2020 NABARD39ನೇ ಸಂಸ್ಥಾಪನಾ ದಿನಾಚರಣೆ ಆಚರಣೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) 39ನೇ ಸಂಸ್ಥಾಪನಾ ದಿನವನ್ನು ಆಚರಿಸಿತು.

*1982ರಜುಲೈ12ರಂದು ಸ್ಥಾಪನೆNABARADಸಂಸ್ಥೆಯ ಸ್ಥಾಪಿಸಲಾಗಿದೆ.

* ಇದೆ ವೇಳೆ ಕರ್ನಾಟಕ ರಾಜ್ಯಕ್ಕೆ NABARD ನೀಡಿದ ಕೊಡುಗೆಯ ಬಗ್ಗೆ ವಿವರಿಸುವ '38 ವರ್ಷಗಳ ಪ್ರಯಾಣ' ಹೆಸರಿನ ಕಿರು ಪುಸ್ತಕ ಬಿಡುಗಡೆ ಮಾಡಲಾಯಿತು.

* ಈ ವರ್ಷದ ಸ್ಥಾಪನಾ ದಿನಾಚರಣೆಯನ್ನು 'ಜಲಾನಯನ ಯೋಜನೆಗಳ ಮೂಲಕ ಅಭಿವೃದ್ಧಿ' ಎಂದು ಆಚರಿಸಲಾಯಿತು.

# Current affairs of July 2020 from KPSC Vaani

### 15 07 2020 ಅಮೆರಿಕಕಪ್ಪುಮಹಿಳೆಯುದ್ಧವಿಮಾನದಪೈಲಟ್ಜೆಜಿಮೇಡ್ ಲೈನ್ಸ್ವೀಗಲ್




ಕಿಂಗ್ಸ್ ವಿಲ್ : ಲೆಫ್ಟಿನೆಂಟ್ ಜೆ.ಜಿ. ಮೇಡ್‌ಲೈನ್ ಸ್ವೀಗಲ್ ಎಂಬ ಹೆಸರಿನ ಯುವತಿ ವಾಯುಪಡೆ ಶಾಲೆಯಲ್ಲಿ ತಮ್ಮ ತರಬೇತಿ ಪೂರ್ಣಗೊಳಿಸಿದ್ದು, ಶೀಘ್ರದಲ್ಲಿ ಅಮೆರಿಕದ ನೌಕಾಪಡೆಯಲ್ಲಿ ಫ್ಲೈಟ್ ಆಫೀಸರ್ ಆಗಿ ಸೇವೆ ಆರಂಭಿಸಲಿದ್ದು, ಇದೇ ಮೊದಲ ಬಾರಿಗೆ ಕಪ್ಪು ಜನಾಂಗದ ಮಹಿಳೆಯೊಬ್ಬರು ಯುದ್ಧ ವಿಮಾನದ ಪೈಲಟ್ ಆಗಿ ನೇಮಕಗೊಂಡಿದ್ದಾರೆ.

* ಈ ಮೊದಲು 1974ರಲ್ಲಿ ರೋಸ್‌ಮೇರಿ ಮ್ಯಾರಿನರ್ ಟ್ಯಾಕ್ಟಿಕಲ್ ಫೈಟರ್ ಜೆಟ್‌ನಲ್ಲಿ ಹಾರಾಟ ನಡೆಸಿದ್ದರು. ಈ ಘಟನೆ ಆದ 45 ವರ್ಷಗಳ ಬಳಿಕ ಮತ್ತೆ ಈ ಸಾಧನೆಗೆ ಸ್ವೀಗಲ್ ನಿರ್ವಹಿಸಲಿದ್ದಾರೆ. ಈ ಮೂಲಕ ಕಪ್ಪು ಮಹಿಳೆಯ ನೇಮಕವನ್ನು ಅಮೆರಿಕದ ನೌಕಾಪಡೆಯು ಇತಿಹಾಸ ಸೃಷ್ಟಿ ಎಂದು ಬಣ್ಣಿಸಿದೆ.

* ಇತ್ತೀಚಿಗೆ ಅಮೇರಿಕಾ ಪೊಲೀಸರಿಂದ ಕಪ್ಪು ಜನಾಂಗದ ವ್ಯಕ್ತಿಯಾದ ಜಾರ್ಜ್ ಫ್ಲಾಯ್ಡ್ ಹತ್ಯೆ ನಡೆದಿತ್ತು, ಇದರಿಂದಾಗಿ ಅಮೇರಿಕಾದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಘಟನೆಯ ನೆನಪು ಮಾಸುವ ಮುನ್ನವೇ ಅಮೆರಿಕದಲ್ಲಿ ರೋಸ್ ಮೇರಿ ಮ್ಯಾರಿನರ್ ನೇಮಕವು ಆಶಾದಾಯಕ ಬೆಳವಣಿಗೆ ಎಂದೇ ವಿಶ್ಲೇಷಿಸಲಾಗುತ್ತಿದೆ.

### 15 07 2020 ಮುಕೇಶ್ಅಂಬಾನಿಈಗವಿಶ್ವದ6ನೇಶ್ರೀಮಂತವ್ಯಕ್ತಿ




ಭಾರತದ ಅತ್ಯಂತ ಸಿರಿವಂತ ಉದ್ಯಮಿ ಎನಿಸಿರುವ ರಿಲಯನ್ಸ್ ಇಂಡಸ್ಟ್ರೀಸ್‌ನ ಮಾಲೀಕ ಮುಕೇಶ್ ಅಂಬಾನಿ ಅವರು ಈಗ ವಿಶ್ವದ 6ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಅತಿ ಹೆಚ್ಚು ವೈಯಕ್ತಿಕ ಸಂಪತ್ತು ಹೊಂದುವ ವಿಷಯದಲ್ಲಿ ಕಳೆದ ವಾರವಷ್ಟೇ ವಾರನ್ ಬಫೆಟ್ ಅವರನ್ನು ಹಿಂದಿಕ್ಕಿದ್ದ ಮುಕೇಶ್ ಅಂಬಾನಿಯವರ ಸಂಪತ್ತು ಈಗ ಬ್ಲೂಮ್‌ಬರ್ಗ್ ಕೋಟ್ಯಧಿಪತಿಗಳ ಸೂಚ್ಯಂಕದ ಪ್ರಕಾರ ಅವರ ಆಸ್ತಿಯ ಮೌಲ್ಯ 72.4 ಬಿಲಿಯನ್ ಡಾಲರ್ (₹5.43 ಲಕ್ಷ ಕೋಟಿ)ಗೆ ತಲುಪಿದೆ. ಅಂಬಾನಿಯವರ ರಿಲಯನ್ಸ್ ಉದ್ಯಮ ಸಮೂಹದ ಶೇರುಗಳ ಮೌಲ್ಯದಲ್ಲಿ ಮಾರ್ಚ್ ಆನಂತರ ಎರಡು ಪಟ್ಟು ಏರಿಕೆಯಾಗಿದ್ದು, ಫೇಸ್ಬುಕ್ ಹಾಗೂ ಸಿಲ್ವರ್‌ಲೇಕ್ ಸೇರಿದಂತೆ ಹಲವಾರು ಕಂಪೆನಿಗಳು ರಿಲಯನ್ಸ್ ಡಿಜಿಟಲ್ ಉದ್ಯಮದಲ್ಲಿ 15 ಶತಕೋಟಿ ಡಾಲರ್ ಗೂ ಹೆಚ್ಚು ಹೂಡಿಕೆಯನ್ನು ಮಾಡಿರುವ ಹಿನ್ನಲೆ ಮುಕೇಶ್ ಅಂಬಾನಿ ಸಂಪತ್ತು ಏರಿಕೆ ಕಂಡಿದೆ.

# Current affairs of July 2020 from KPSC Vaani

### 15 07 2020 ರಾಜ್ಯ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ : ಉಡುಪಿ ಜಿಲ್ಲೆ ಪ್ರಥಮ, ದ.ಕ ಜಿಲ್ಲೆ ದ್ವಿತೀಯ



ಬೆಂಗಳೂರು: ಪ್ರಸಕ್ತ 2020 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಫಲಿತಾಂಶದ ವಿವರಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಬಿಡುಗಡೆಗೊಳಿಸಿ ಅಧಿಕೃತವಾಗಿ ಮಾಹಿತಿ ನೀಡಿದರು. ಕಳೆದ ಬಾರಿಗಿಂತ ಈ ವರ್ಷ ಫಲಿತಾಂಶದಲ್ಲಿ ಏರಿಕೆ ಕಂಡುಬಂದಿದ್ದು, ಈ ಬಾರಿ ಶೇ.61.80 ಫಲಿತಾಂಶ ಬಂದಿದೆ(ಕಳೆದ ವರ್ಷ ಶೇ.61.73 ರಷ್ಟು ಫಲಿತಾಂಶ). ಹಾಗು ಪ್ರತಿಸಲದಂತೆ ಈ ಬಾರಿಯೂ ಬಾಲಕೀಯರೇ ಮೇಲುಗೈ ಸಾಧಿಸಿದ್ದಾರೆ.
* ಉಡುಪಿ ಜಿಲ್ಲೆ ಈ ಬಾರಿಯೂ ಪ್ರಥಮ ಸ್ಥಾನ (90.71%) ಪಡೆದಿದೆ. ದಕ್ಷಿಣ ಕನ್ನಡ ದ್ವಿತೀಯ(90.71%)ಸ್ಥಾನ ಮತ್ತು ಕೊಡಗು ಜಿಲ್ಲೆ ಮೂರನೇ ಸ್ಥಾನ (81.53%)ಪಡೆದಿದೆ.
* ಚಿತ್ರದುರ್ಗ, ರಾಯಚೂರು ಮತ್ತು ವಿಜಯಪುರ ಕೊನೆಯ ಮೂರು ಸ್ಥಾನಗಳಲ್ಲಿದೆ.
* ಒಟ್ಟಾರೆಯಾಗಿ ವಿಜ್ಞಾನ ವಿಭಾಗದಲ್ಲಿ ಶೇ.76.2, ಕಲಾ ವಿಭಾಗದಲ್ಲಿ ಶೇ. 41.27, ವಾಣಿಜ್ಯ ವಿಭಾಗದಲ್ಲಿ ಶೇ. 65.52 ಫಲಿತಾಂಶ ಬಂದಿದೆ ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

### 15 07 2020 ಫ್ಲಿಪ್‌ಕಾರ್ಟ್ ಗ್ರೂಪ್‌ನಲ್ಲಿ ವಾಲ್‌ಮಾರ್ಟ್‌ನ ₹9 ಸಾವಿರ ಕೋಟಿ ಬಂಡವಾಳ ಹೂಡಿಕೆ




ನವದೆಹಲಿ : ಇ ಕಾಮರ್ಸ್‌ನ ದೇಶಿ ದೈತ್ಯ ಸಂಸ್ಥೆಯಾದ ಬೆಂಗಳೂರು ಮೂಲದ ಫ್ಲಿಪ್‌ಕಾರ್ಟ್, ವಾಲ್‌ಮಾರ್ಟ್ ನೇತೃತ್ವದಲ್ಲಿನ ಹೂಡಿಕೆದಾರರಿಂದ ₹9,056 ಕೋಟಿ ಮೊತ್ತದ ಬಂಡವಾಳ ಸಂಗ್ರಹಿಸಿದೆ. ಪ್ರಸಕ್ತ ಹಣಕಾಸು ವರ್ಷದ ಈ ಹೂಡಿಕೆಯು ದೇಶದಲ್ಲಿ ಇ ಕಾಮರ್ಸ್ ಮಾರುಕಟ್ಟೆ ವಿಸ್ತರಿಸಲು ಈ ಬಂಡವಾಳ ಹೂಡಿಕೆಗೆ ಸಂಸ್ಥೆಗೆ ನೆರವಾಗಲಿದೆ.
*2018ರಲ್ಲಿ ವಾಲ್‌ಮಾರ್ಟ್, ₹1.07 ಲಕ್ಷ ಕೋಟಿ ಮೊತ್ತದ ಬಂಡವಾಳ ತೊಡಗಿಸಿ ಫ್ಲಿಪ್‌ಕಾರ್ಟ್ ಗ್ರೂಪ್‌ನ ಶೇ 77ರಷ್ಟು ಪಾಲು ಬಂಡವಾಳವನ್ನು ಖರೀದಿಸಿತ್ತು.
* 2007ರಲ್ಲಿ ಬೆಂಗಳೂರಿನಲ್ಲಿ ಆರಂಭಗೊಂಡಿದ್ದ ಫ್ಲಿಪ್‌ಕಾರ್ಟ್ ಎರಡು ವರ್ಷಗಳ ಹಿಂದೆ ಅಮೆರಿಕದ ದೈತ್ಯ ಸಂಸ್ಥೆ ವಾಲ್‌ಮಾರ್ಟ್‌ನ ಸ್ವಾಧೀನಕ್ಕೆ ಒಳಪಟ್ಟಿದೆ.
* ಫ್ಲಿಪ್‌ಕಾರ್ಟ್ ಗ್ರೂಪ್, ಡಿಜಿಟಲ್ ಪಾವತಿಯ ಫೋನ್‌ಪೇ, ಫ್ಯಾಷನ್ ಕ್ಷೇತ್ರದ ಮಿಂತ್ರಾ ಮತ್ತು ಇಕಾರ್ಟ್ ತಾಣಗಳನ್ನೂ ಒಳಗೊಂಡಿದೆ.

# Current affairs of July 2020 from KPSC Vaani

## 16 07 2020 ಇಸ್ರೇಲ್‌ನಿಂದ ಅತ್ಯಾಧುನಿಕ ಶಸ್ತ್ರಾಸ್ತ್ರ ಖರೀದಿಗೆ ಮುಂದಾದ ಭಾರತ



ನವದೆಹಲಿ : ಇತ್ತೀಚಿನ ದಿನಗಳಲ್ಲಿ ಭಾರತದೊಂದಿಗೆ ಚೀನಾ ಹಾಗೂ ಪಾಕಿಸ್ತಾನದ ಜತೆಗಿನ ಸಂಬಂಧ ಹದಗೆಡುತ್ತಿರುವ ಬೆನ್ನಲ್ಲೇ ಇಸ್ರೇಲ್‌ನಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಕೇಂದ್ರ ಸರ್ಕಾರವು ಇಸ್ರೇಲ್‌ನ ಅತ್ಯಾಧುನಿಕ ಹೆರಾನ್ ಡ್ರೋನ್, ಹಾಗೂ ಸ್ಪೈಕ್ ಆಂಟಿ ಟ್ಯಾಂಕ್ ಕ್ಷಿಪಣಿಗಳನ್ನು ತುರ್ತು ಖರೀದಿಸಲು ನಿರ್ಧರಿಸಿದ್ದು, ಲಡಾಖ್‌ನಲ್ಲಿ ಗಡಿ ಪ್ರದೇಶದಲ್ಲಿ ಚೀನಾದೊಂದಿಗೆ ಯುದ್ಧೋನ್ಮಾದ ಪರಿಸ್ಥಿತಿ ನಿರ್ಮಾಣವಾದ ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ತುರ್ತು ಹಣಕಾಸು ನಿಧಿಯಿಂದ ಹೆರೋನ್ ಮಾನವ ರಹಿತ ಡ್ರೋನ್ ಹಾಗೂ ಸ್ಪೈಕ್ ಆಂಟಿ ಟ್ಯಾಂಕ್ ಕ್ಷಿಪಣಿ ಖರೀದಿಸಲು ನಿರ್ಧರಿಸಿದೆ.

## 16 07 2020 ವಿಶ್ವದಲ್ಲೇ ಅತ್ಯಂತ 'ಕಡಿಮೆ ಬೆಲೆ'ಯ COVID 19 ಟೆಸ್ಟ್ ಕಿಟ್ ಅವಿಸ್ಕರಿಸಿದ ದೆಹಲಿಯ IIT




ನವದೆಹಲಿ : ಭಾರತೀಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT) ದೆಹಲಿ (ಐಐಟಿ) ದೆಹಲಿಯು ಜಗತ್ತಿನಲ್ಲಿಯೇ ಅತಿ ಕಡಿಮೆ ಬೆಲೆಯ ಕೋವಿಡ್ 19 ಪರೀಕ್ಷೆಯ ಕಿಟ್ ಅಭಿವೃದ್ಧಿಪಡಿಸಿದ್ದು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿಯ (HRD) ಕೇಂದ್ರ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್‌ಮತ್ತುರಾಜ್ಯಸಚಿವ(HRD) ಸಂಜಯ್‌ಧೋತ್ರೆಅವರುಈಕೋವಿಡ್ 19ಪರೀಕ್ಷಾ ಕಿಟ್‌ಗೆ ಚಾಲನೆ ನೀಡಿದರು.

* ವಿಶ್ವದ ಅತ್ಯಂತ ಕಡಿಮೆ ದರದಲ್ಲಿ ಕೋರೋಣ ಸೋಂಕು ಪರೀಕ್ಷಾ ಸೌಲಭ್ಯ ಪಡೆಯಬಹುದಾಗಿದೆ.
* ಇದು ಮೂರು ಗಂಟೆಗಳಲ್ಲಿ ಫಲಿತಾಂಶಗಳನ್ನು ನೀಡುತ್ತದೆ. ಇದು ಈಗ ಅಧಿಕೃತ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಬಳಸಲು ಲಭ್ಯವಾಗಲಿದೆ.

# Current affairs of July 2020 from KPSC Vaani

### 16 07 2020 ರಿಲಯನ್ಸ್‌ನ ಜಿಯೋ ಪ್ಲಾಟ್‌ಫಾರಂನಲ್ಲಿ ಗೂಗಲ್‌ನಿಂದ 33,838.15 ಕೋಟಿ ರೂ. ಹೂಡಿಕೆ




ನವದೆಹಲಿ : ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್‌ನ ಜಿಯೋ ಪ್ಲಾಟ್‌ಫಾರಂನಲ್ಲಿ ಗೂಗಲ್ ನ ಮಾತೃಸಂಸ್ಥೆ ಆಲ್ಫಬೆಟ್ 33,838.15 ಕೋಟಿ ರೂ. ಹೂಡಿಕೆ ಮಾಡಿದೆ. ಈ ಹೂಡಿಕೆಗಾಗಿ ಜಿಯೋ ಪ್ಲಾಟ್‌ಫಾರಂನ ಶೇ.7.7 ಷೇರುಗಳನ್ನು ಆಲ್ಫಬೆಟ್ ಖರೀದಿಸಿದೆ. ಗೂಗಲ್‌ನ ಈ ಹೂಡಿಕೆಯೊಂದಿಗೆ ಜಿಯೋ ಪ್ಲಾಟ್‌ಫಾರಂನಲ್ಲಿ ವಿವಿಧ ವಿದೇಶಿ ಹೂಡಿಕೆದಾರರಿಂದ ಒಟ್ಟು 1,52,046.10 ಕೋಟಿ ರೂ. ಹೂಡಿಕೆ ಜಿಯೋ ಪಾಲಾಗಿದೆ. ಇತ್ತೀಚಿಗೆ ನಡೆದ ರಿಲಯನ್ಸ್ ಇಂಡಸ್ಟ್ರೀಸ್‌ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖೇಶ್ ಅಂಬಾನಿ ಈ ವಿಷಯವನ್ನು ತಿಳಿಸಿದರು.

### 16 07 2020 ಹಿರಿಯ ರಂಗಭೂಮಿ ಕಲಾವಿದೆ ನಾಡೋಜ ಡಾ.ಸುಭದ್ರಮ್ಮ ಮನ್ಸೂರ್ ಇನ್ನಿಲ್ಲ



ಬಳ್ಳಾರಿ : ಹಿರಿಯ ರಂಗಭೂಮಿ ಕಲಾವಿದೆ, ನಾಡೋಜ ಡಾ.ಸುಭದ್ರಮ್ಮ ಮನ್ಸೂರ್ ಅವರು ತಮ್ಮ 81 ನೇ ವಯಸ್ಸಿನಲ್ಲಿ ಬಳ್ಳಾರಿಯ ನಗರದ ತನ್ನ ಮನೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಸತತ 50 ವರ್ಷಗಳ ಕಾಲ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿರುವ ಇವರು ತಮ್ಮ 27ನೇ ವಯಸ್ಸಿಗೆ ರಂಗಭೂಮಿ ಪ್ರವೇಶಿಸಿದ್ದರು. ಕುಂತಿ, ಗಾಂಧಾರಿ, ದ್ರೌಪದಿ, ಉತ್ತರೆ, ಸೀತೆ ಸೇರಿ ಹಲವು ಪಾತ್ರಗಳ ಮೂಲಕ ಜನಮನ ಸೆಳೆದಿದ್ದರು. ಬಳ್ಳಾರಿ ಸುಭದ್ರಮ್ಮ ಅವರು 2000ಕ್ಕೂ ಹೆಚ್ಚು ನಾಟಕ ಪ್ರದರ್ಶನಗಳಲ್ಲಿ ಬಣ್ಣ ಹಚ್ಚಿದ್ದಾರೆ. ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಬಳ್ಳಾರಿ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ನಾಟಕ ಅಕಾಡೆಮಿ, ಗುಬ್ಬಿ ವೀರಣ್ಣ ಪ್ರಶಸ್ತಿ, ಹಂಪಿ ವಿವಿ ಕೊಡಮಾಡುವ ನಾಡೋಜ ಗೌರವ ಸೇರಿ ಹಲವು ಗೌರವ ಪುರಸ್ಕಾರಗಳನ್ನು ಪಡೆದಿದ್ದಾರೆ.

# Current affairs of July 2020 from KPSC Vaani

**16 07 2020 18ವರ್ಷಗಳನಂತರಆಮದಿಗಿಂತರಫ್ತು ಮೌಲ್ಯಹೆಚ್ಚಳ**



ನವದೆಹಲಿ **:** ದೇಶದಲ್ಲಿ ಕಳೆದ 18 ವರ್ಷದಲ್ಲಿ ಇದೇ ಮೊದಲ ಬಾರಿಗೆ ಜೂನ್‌ನಲ್ಲಿ ಆಮದು ಮೌಲ್ಯಕ್ಕಿಂತ ರಫ್ತು ಮೌಲ್ಯವು ಹೆಚ್ಚಳ ಕಂಡಿದೆ. ರಫ್ತು ವಹಿವಾಟಿನ ಮೌಲ್ಯ 1,64,325 ಕೋಟಿ ರುಪಾಯಿ ಆದರೆ, ಆಮದು ವಹಿವಾಟಿನ ವೆಚ್ಚವು 1,58.325ಕೋಟಿ ರುಪಾಯಿ ಆಗಿದೆ. ಈ ಮೂಲಕ ರಫ್ತು ಮೌಲ್ಯ ಸುಮಾರು ಆರು ಸಾವಿರ ಕೋಟಿ ಹೆಚ್ಚಿದ್ದು, ಈ ಹಿಂದೆ 2002ರಲ್ಲಿ ರಫ್ತು ಮೌಲ್ಯವು ಆಮದು ವೆಚ್ಚಕ್ಕಿಂತಲೂ 75 ಕೋಟಿ ಹೆಚ್ಚಿಗೆ ಆಗಿತ್ತು.

**17 07 2020 ವಿದೇಶಿವಿದ್ಯಾರ್ಥಿಗಳವೀಸಾಅದೇಶರದ್ದುಆದೇಶಹಿಂಪಡೆದ ಅಮೆರಿಕ**




ವಾಷಿಂಗ್ಟನ್ : ಅಮೇರಿಕಾದಲ್ಲಿ ಕೊರೊನಾ ವೈರಸ್ ಭೀತಿ ಹೆಚ್ಚಾಗಿದ್ದು, ಈ ಮಧ್ಯೆ ಆನ್ ಲೈನ್ ಶಿಕ್ಷಣ ಕೈಗೊಂಡ ವಿದೇಶಿ ವಿದ್ಯಾರ್ಥಿಗಳ ವೀಸಾ ರದ್ದು ಮಾಡುವುದಾಗಿ ಟ್ರಂಪ್ ಘೋಷಿಸಿದ್ದರು, ಆದರೆ ಈ ಹೇಳಿಕೆಗೆ ತೀವ್ರ ವಿರೋಧ ಕೇಳಿ ಬಂದ ಹಿನ್ನಲೆ, ಅಮೆರಿಕಾ ಇದೀಗ ಟ್ರಂಪ್ ಸರ್ಕಾರ ಹೇಳಿಕೆ ಹಿಂಪಡೆದಿದೆ.
* ಹಾರ್ವರ್ಡ್ ಹಾಗೂ ಎಂಐಟಿ ಸಂಸ್ಥೆಯಲ್ಲಿ ಅನೇಕ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಈ ಎರಡು ಸಂಸ್ಥೆಗಳು ಟ್ರಂಪ್ ವಿರುದ್ದ ಮೊಕದ್ದಮೆ ಹೂಡಿತ್ತು. ಈ ಎಲ್ಲಾ ಬೆಳವಣಿಗೆಗಳ ಬಳಿಕ ಆದೇಶ ಹಿಂಪಡೆಯಲಾಗಿದೆ.

# Current affairs of July 2020 from KPSC Vaani

## 17 07 2020 80 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಅಂಚೆ ಮತಪತ್ರ ಅವಕಾಶ ಇಲ್ಲ



ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆ ಮತ್ತು ಉಪಚುನಾವಣೆಗಳಲ್ಲಿ ಅಂಚೆ ಮತಪತ್ರ ಆಯ್ಕೆಯ ವಯೋಮಿತಿ ಸಡಿಲಿಕೆ ಮಾಡದಿರಲು ಚುನಾವಣಾ ಆಯೋಗ ಗುರುವಾರ ನಿರ್ಧರಿಸಿದೆ. ದೇಶದಲ್ಲಿ ವ್ಯಾಪಿಸಿರುವ ಕೋವಿಡ್ ಹಿನ್ನಲೆಯಲ್ಲಿ ಹಿರಿಯ ನಾಗರಿಕರ ಸುರಕ್ಷತೆ ದೃಷ್ಟಿಯಿಂದ 65 ವರ್ಷ ಅಥವಾ ಅದಕ್ಕೂ ಹೆಚ್ಚಿನ ವಯಸ್ಸಿನವರಿಗೆ ಅಂಚೆ ಮತಪತ್ರ ಆಯ್ಕೆಗೆ ಅವಕಾಶ ಕಲ್ಪಿಸಿ ಕಾನೂನು ಸಚಿವಾಲಯ ಚುನಾವಣಾ ನಿಯಮಗಳಿಗೆ ಇತ್ತೀಚಿಗೆ ತಿದ್ದುಪಡಿ ತಂದಿತ್ತು. ಆದರೆ, ಚುನಾವಣಾ ಆಯೋಗ ಪ್ರಕಟಿಸಿರುವ ಪ್ರಕಟಣೆ ಪ್ರಕಾರ, 80 ಅಥವಾ 80 ಕ್ಕಿಂತ ಹೆಚ್ಚು ವಯಸ್ಸಿನ ಹಿರಿಯರು, ಅಂಗವಿಕಲರು, ಅಗತ್ಯ ಸೇವೆಗಳಲ್ಲಿ ನಿರತರಾಗಿರುವವರು ಮತ್ತು ಕೋವಿಡ್ 19 ಸೋಂಕಿತರು ಅಥವಾ ಕ್ವಾರಂಟೈನ್‌ನಲ್ಲಿರುವ ಮತದಾರರಿಗೆ ಮಾತ್ರ ಅಂಚೆ ಮತಪತ್ರದ ಮೂಲಕ ಮತದಾನ ನಡೆಸುವ ಅವಕಾಶವನ್ನು ವಿಸ್ತರಿಸಿರುವದಾಗಿ ಚುನಾವಣಾ ಆಯೋಗ ತಿಳಿಸಿದೆ.

## 17 07 2020 ಧೂಮಕೇತು NEOWISE ಪ್ರತ್ಯಕ್ಷ: ಮತ್ತೆ 6,800 ವರ್ಷಗಳ ನಂತರ ಕಾಣಸಿಗಲಿದೆ



ನವದೆಹಲಿ : ಬ್ರಹ್ಮಾಂಡದಿಂದ ನಮ್ಮ ಸೌರಮಂಡಲಕ್ಕೆ ಅತಿಥಿಯಾಗಿ ಆಗಮಿಸಿರುವ C/2020 F3 ಧೂಮಕೇತು ಜುಲೈ14ರಿಂದ20ದಿನಗಳವರೆಗೆಸೌರಮಂಡಲದಲ್ಲಿ ಇರುತ್ತದೆ.ನಾಸಾಪ್ರಕಾರ,ಉತ್ತರ ಗೋಳಾರ್ಧದಲ್ಲಿ ವೀಕ್ಷಕರಿಗೆ ಸೂರ್ಯಾಸ್ತದ ನಂತರ ಧೂಮಕೇತು NEOWISE ಅನ್ನು ಕಾಣಸಿಗಲಿದೆ. ಆದರೆ ದಕ್ಷಿಣ ಗೋಳಾರ್ಧದದಲ್ಲಿ ಇದು ಗೋಚರಿಸುವುದಿಲ್ಲ. ಮತ್ತೆ ಈ ಧೂಮಕೇತವು ಸರಿಸುಮಾರು 6800 ವರ್ಷಗಳ ಬಳಿಕ ನಮ್ಮ ಸೌರಮಂಡಲ ಪ್ರವೇಶಿಸಲಿದೆ ಎಂದು NASA ತಿಳಿಸಿದೆ

# Current affairs of July 2020 from KPSC Vaani

## 17 07 2020 ಸೈಬರ್ ಭದ್ರತೆಯ ಕುರಿತ ಒಪ್ಪಂದಗಳಿಗೆ ಸಹಿ ಹಾಕಿದ ಭಾರತ ಇಸ್ರೇಲ್




ನವದೆಹಲಿ : ಭಾರತ ಮತ್ತು ಇಸ್ರೇಲ್ ರಾಷ್ಟ್ರಗಳು ಸೈಬರ್ ಬೆದರಿಕೆಗಳನ್ನು ಎದುರಿಸುವಲ್ಲಿ ತಮ್ಮ ಸಹಯೋಗವನ್ನು ವಿಸ್ತರಿಸಲು ಜುಲೈ 15, 2020 ರಂದು ಒಪ್ಪಂದಗಳಿಗೆ ಸಹಿ ಹಾಕಿದವು. ಇಸ್ರೇಲ್‌ನ ರಾಷ್ಟ್ರೀಯ ಸೈಬರ್ ನಿರ್ದೇಶನಾಲಯದ (ಐಎನ್‌ಸಿಡಿ) ಮಹಾನಿರ್ದೇಶಕರು ಮತ್ತು ಇಸ್ರೇಲ್‌ನಲ್ಲಿ ಭಾರತದ ರಾಯಭಾರಿ ಸಂಜೀವ್ ಸಿಂಗ್ಲಾ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.
* ಈ ಒಪ್ಪಂದವು ಸೈಬರ್ ಬೆದರಿಕೆಗಳ ಕುರಿತು ದೇಶಗಳ ನಡುವೆ ಮಾಹಿತಿ ವಿನಿಮಯದ ವ್ಯಾಪ್ತಿಯನ್ನು ವಿಸ್ತರಿಸುತ್ತದೆ.
* 2017 ರಲ್ಲಿ ಪ್ರಧಾನಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದಾಗ ಸೈಬರ್ ಭದ್ರತೆಯನ್ನು ಭಾರತ ಮತ್ತು ಇಸ್ರೇಲ್ ನಾಯಕರು ಸಹಕಾರದ ಪ್ರಮುಖ ಕ್ಷೇತ್ರವೆಂದು ಗುರುತಿಸಿದ್ದರು.
* COVID 19 ಬಿಕ್ಕಟ್ಟು ಪ್ರಪಂಚದಾದ್ಯಂತ ಕೆಲಸದ ಸಂಸ್ಕೃತಿಯನ್ನು ಬದಲಾಯಿಸುತ್ತಿರುವ ಹಿನ್ನಲೆ, ಸೈಬರ್ ಭದ್ರತೆ ಈ ಒಪ್ಪಂದ ಪ್ರಮುಖವಾಗಿದೆ.
*ವಿಶ್ವವ್ಯಾಪಿ ಸೈಬರ್ ದಾಳಿಯಲ್ಲಿ ಭಾರತ 11ನೇ ಸ್ಥಾನದಲ್ಲಿದೆ.

## 17 07 2020 ಪಶುಸಂಗೋಪನೆ ಮೂಲಸೌಕರ್ಯ ಅಭಿವೃದ್ಧಿ ನಿಧಿ: ಅನುಷ್ಠಾನ ಮಾರ್ಗಸೂಚಿ ಪ್ರಾರಂಭ




ಜುಲೈ16,2020ರಂದುಕೇಂದ್ರಮೀನುಗಾರಿಕೆ,ಪಶುಮತ್ತುಹೈನುಗಾರಿಕೆಸಚಿವರುಪಶುಸಂಗೋಪನೆ ಮೂಲಸೌಕರ್ಯಅಭಿವೃದ್ಧಿನಿಧಿಗೆ(AHIDF)ಮಾರ್ಗಸೂಚಿಗಳನ್ನುಆರಂಭಿಸಿದರು.
*2024ರ ವೇಳೆಗೆ ಹಾಲಿನ ಉತ್ಪಾದನೆಯನ್ನು 330 ದಶಲಕ್ಷ ಟನ್‌ಗಳಿಗೆ ಹೆಚ್ಚಿಸಲು ಈ ನಿಧಿ ಸಹಾಯ ಮಾಡುತ್ತದೆ.
* ಹಾಲು ಸಂಸ್ಕರಣೆಯನ್ನು 40% ವರೆಗೆ ಹೆಚ್ಚಿಸಲು, ಡೈರಿ ಮತ್ತು ಮಾಂಸ ಸಂಸ್ಕರಣೆಗಾಗಿ ಮೂಲಸೌಕರ್ಯಗಳನ್ನು ಸ್ಥಾಪಿಸಲು ಹೂಡಿಕೆಗಳನ್ನು ಉತ್ತೇಜಿಸಲು ಎಎಚ್‌ಐಡಿಎಫ್ ಅನುಕೂಲ ಮಾಡುತ್ತದೆ.
* ಆತ್ಮ ನಿರ್ಭಾರ್ ಭಾರತ್ ಅಭಿಯಾನದ ಅಡಿಯಲ್ಲಿ 15 ಸಾವಿರ ಕೋಟಿ ರೂ.ಗಳನ್ನು ಕೇಂದ್ರಸಚಿವ ಸಂಪುಟ ಎಎಚ್‌ಐಡಿಎಫ್‌ಗೆ ಅನುಮೋದಿಸಿದೆ.

# Current affairs of July 2020 from KPSC Vaani



# Current affairs of July 2020 from KPSC Vaani

### 17 07 2020 ಫೆಡರಲ್ ಬ್ಯಾಂಕ್ ಎಂಡಿ ಮತ್ತು ಸಿಇಒ ಆಗಿ ಶ್ಯಾಮ್ ಶ್ರೀನಿವಾಸನ್ ಮರು ನೇಮಕ



ನವದೆಹಲಿ : ಶ್ಯಾಮ್ ಶ್ರೀನಿವಾಸನ್ ಅವರನ್ನು ಫೆಡರಲ್ ಬ್ಯಾಂಕಿನ ಎಂಡಿ ಮತ್ತು ಸಿಇಒ ಆಗಿ ಮರುನೇಮಕ ಮಾಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಅನುಮೋದನೆ ನೀಡಿದೆ.

### 18 07 2020 ದೆಹಲಿ ಸರ್ಕಾರದಿಂದ ಒಂದು ವರ್ಷದವರೆಗೆ ಪಾನ್ ಮಸಾಲ, ಗುಟ್ಕಾ ಸೇವನೆಗೆ ನಿಷೇಧ



ನವದೆಹಲಿ **:** ದೆಹಲಿಯಲ್ಲಿ ಕೊರೊನಾ ವೈರಸ್ ಸೋಂಕು ನಿಯಂತ್ರಣಕ್ಕೆ ಸಾಕಷ್ಟು ಕ್ರಮ ಕೈಗೊಂಡಿರುವ ಅರವಿಂದ್ ಕೇಜ್ರಿವಾಲ್ ನೇತೃತ್ವದ ಸರ್ಕಾರ ಇದೀಗ ಮತ್ತೊಂದು ಮಹತ್ವದ ತೀರ್ಮಾನ ಕೈಗೊಂಡಿದ್ದು, ಒಂದು ವರ್ಷದ ಅವಧಿಯವರೆಗೆ ಪಾನ್ ಮಸಾಲ, ಗುಟ್ಕಾ ಸೇವೆಗೆ ನಿಷೇಧ ಹೇರಿ ಆದೇಶ ಹೊರಡಿಸಿದೆ.
* ಕೊರೊನಾ ವೈರಸ್ ಸೋಂಕು ನಿಯಂತ್ರಿಸುವ ಸದುದ್ದೇಶದಿಂದ 2006 ರ ಆಹಾರ ಮತ್ತು ಸುರಕ್ಷತಾ ಗುಣಮಟ್ಟ ಕಾಯ್ದೆ ಸೆಕ್ಷನ್ 30 ರ ಅನ್ವಯ ಒಂದು ವರ್ಷದ ಅವಧಿಯವರೆಗೆ ಪಾನ್ ಮಸಾಲ, ಗುಟ್ಕಾ ಸೇವನೆ ನಿಷೇಧ ಹೇರಲಾಗಿದೆ.

# Current affairs of July 2020 from KPSC Vaani

## 18 07 2020 ಭಾರತ ಭೂತಾನ್‌ನಡುವೆಹೊಸವ್ಯಾಪಾರಒಪ್ಪಂದ



ದಿನಾಂಕ ಜುಲೈ 16, 2020 ರಂದು ಭಾರತ ಮತ್ತು ಭೂತಾನ್ ನಡುವೆ ನೂತನ ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದ ಪ್ರಕಾರ ಭಾರತದ ಪಶ್ಚಿಮ ಬಂಗಾಲದ ಜೈಗಾನ್ ಮತ್ತು ಭೂತಾನ್‌ನ ಪಸಖಾ ನಡುವೆ ಹೊಸ ರಸ್ತೆ ಮಾರ್ಗ ಆರಂಭಿಸಲಾಗುವದು.
* ಈ ನೂತನ ಮಾರ್ಗದಿಂದ ಪಸಖಾ ಕೈಗಾರಿಕಾ ಪ್ರದೇಶದಿಂದ ಕಚ್ಚಾ ವಸ್ತುಗಳು ಮತ್ತು ಸರಕುಗಳನ್ನು ಸಾಗಿಸಲು ಸಹಾಯ ಮಾಡುತ್ತದೆ. ಹಾಗೂ ವ್ಯಾಪಾರ ಮತ್ತು ವಾಣಿಜ್ಯವನ್ನು ಹೆಚ್ಚಿಸಲು ಸಹಾಯ ಮಾಡುವುದಲ್ಲದೆ, ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಸಹಕರಿಸಲಿದೆ.
* ಅರುಣಾಚಲ ಪ್ರದೇಶದ ತವಾಂಗ್ ಅನ್ನು ತ್ವರಿತವಾಗಿ ಪ್ರವೇಶಿಸಲು ಈ ರಸ್ತೆ ಸಹಾಯ ಮಾಡುವುದಲ್ಲದೆ. ಈ ರಸ್ತೆಯು ಗುವಾಹಟಿ ಮತ್ತು ತವಾಂಗ್ ನಡುವಿನ ಅಂತರವನ್ನು 150 ಕಿಲೋಮೀಟರ್ ಕಡಿಮೆ ಮಾಡುತ್ತದೆ.


## 18 07 2020 2022 ಫಿಫಾ ವಿಶ್ವಕಪ್ ಆತಿಥ್ಯ ವಹಿಸಲಿರುವ ಕತಾರ್




2020 ರ ವಿಶ್ವಕಪ್ ಅನ್ನು ಕತಾರ್‌ನಲ್ಲಿ ನಡೆಸಲಾಗುವುದು ಎಂದು ಜುಲೈ 15, 2020 ರಂದು ಫೆಡರೇಶನ್ ಇಂಟರ್ನ್ಯಾಷನಲ್ ಡಿ ಫುಟ್‌ಬಾಲ್ ಅಸೋಸಿಯೇಷನ್ ಘೋಷಿಸಿತು. ಇದೆ ವೇಳೆ ಆಡಳಿತ ಮಂಡಳಿಯು ಪಂದ್ಯಗಳ ವೇಳಾಪಟ್ಟಿಯನ್ನು ಸಹ ಬಿಡುಗಡೆ ಮಾಡಿತು. 2022 ರ ಫಿಫಾ ವಿಶ್ವಕಪ್ ವಿಶೇಷವೇನೆಂದರೆ ಅರಬ್ ಜಗತ್ತಿನಲ್ಲಿ ನಡೆಯುವ ಮೊದಲ ವಿಶ್ವಕಪ್ ಮತ್ತು ಮುಸ್ಲಿಂ ಬಹುಸಂಖ್ಯಾತ ದೇಶದಲ್ಲಿ ನಡೆದ ಮೊದಲ ವಿಶ್ವಕಪ್ ಎಂಬ ಹೆಗ್ಗಳಿಕೆಗೆ ಆಗಲಿದೆ. 2026 ರ ಪಂದ್ಯಾವಳಿಯಲ್ಲಿ ತಂಡಗಳನ್ನು 48 ಕ್ಕೆ ಹೆಚ್ಚಿಸಬೇಕಾಗಿರುವುದರಿಂದ, 2022 ರ ವಿಶ್ವಕಪ್ 32 ತಂಡಗಳನ್ನುಒಳಗೊಂಡಕೊನೆಯವಿಶ್ವಕಪ್ ಎನಿಸಲಿದೆ.
*ಈವಿಶ್ವಕಪ್‌ಪಂದ್ಯಾವಳಿಯು ನವೆಂಬರ್ ಡಿಸೆಂಬರ್‌ನಲ್ಲಿ ನಡೆಯಲಿದೆ. ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಡಿಸೆಂಬರ್ 18, 2020 ರಂದು ನಿಗದಿಪಡಿಸಲಾಗಿದ್ದು, ಆ ದಿನ ಕತಾರ್ ರಾಷ್ಟ್ರೀಯ ದಿನವೂ ಆಗಿದು ವಿಶೇಷವಾಗಿದೆ. ಭಾರತ ಫಿಫಾ ವಿಶ್ವಕಪ್‌ನಲ್ಲಿ ಭಾರತ ಇಲ್ಲಿಯವರೆಗೂ ಭಾಗವಹಿಸಲು ಸಾಧ್ಯವಾಗಿಲ್ಲ, 2019 ರಲ್ಲಿ ಬಿಡುಗಡೆಯಾದ ಇತ್ತೀಚಿನ ಫಿಫಾ ಶ್ರೇಯಾಂಕದಲ್ಲಿ ಭಾರತೀಯ ರಾಷ್ಟ್ರೀಯ ತಂಡ 108 ನೇ ಸ್ಥಾನದಲ್ಲಿದೆ.

# Current affairs of July 2020 from KPSC Vaani

### 18 07 2020 ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ನಬಾರ್ಡ್ 44 ಲಕ್ಷ ರೂ ಮೊತ್ತದ ಯೋಜನೆ ಜಾರಿ




ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ 44 ಲಕ್ಷ ರೂ ಮೊತ್ತದ ಯೋಜನೆಗಳನ್ನು ಜಾರಿಗೊಳಿಸಲಿದೆ.
* ಸ್ವಸಹಾಯ ಗುಂಪುಗಳನ್ನು ಅಭಿವೃದ್ಧಿಪಡಿಸಲು ಮತ್ತು ಪ್ರಾಂತ್ಯದಲ್ಲಿನ ಸ್ವ ಸಹಾಯ ಗುಂಪುಗಳ ಕೌಶಲ್ಯ ಅಭಿವೃದ್ಧಿಗೆಸಹಾಯಮಾಡಲು NABARD ಈ ಯೋಜನೆಗಳನ್ನು ಆರಂಭಿಸಿದೆ.
*ಸುಮಾರು 385 ಗ್ರಾಮ ಮಟ್ಟದ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಹೊಸದಾಗಿ ರೂಪುಗೊಂಡ ಸ್ವಸಹಾಯ ಸಂಘಗಳ ಮುಖಂಡರಿಗೆ ತರಬೇತಿ ನೀಡಲು 10 ಲಕ್ಷ ರೂ ಮೀಸಲಿರಿಸಲಾಗಿದೆ.
* ಯೋಜನೆಯಡಿ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಅಣಬೆ ಕೃಷಿ ಮತ್ತು ಬಿದಿರಿನ ಕರಕುಶಲ ಕಲೆಗಳಿಗೆ ತರಬೇತಿ ನೀಡಲಾಗುವುದು.

### 18 07 2020 ಮಹಾರಾಷ್ಟ್ರದ ಮೊದಲ ಮಹಿಳಾ ಚುನಾವಣಾ ಆಯುಕ್ತರಾಗಿದ್ದ ನೀಲಾ ಸತ್ಯನಾರಾಯಣ್ ನಿಧನ



ಮಾಜಿ ಐಎಎಸ್ ಅಧಿಕಾರಿ ಮತ್ತು ಮಹಾರಾಷ್ಟ್ರದ ಮೊದಲ ಮಹಿಳಾ ಚುನಾವಣಾ ಆಯುಕ್ತರಾಗಿ ನೇಮಕಗೊಂಡಿದ್ದ ಶ್ರೀಮತಿ ನೀಲಾ ಸತ್ಯನಾರಾಯಣ್ ಇತ್ತೀಚಿಗೆ ನಿಧನರಾದರು. 1972 ರ ಬ್ಯಾಚ್ ಅಧಿಕಾರಿಯಾಗಿದ್ದ ನೀಲಾ ಸತ್ಯನಾರಾಯಣ್ ಅವರು 2014 ರಲ್ಲಿ ನಿವೃತ್ತರಾದರು. ಅವರು 150 ಕ್ಕೂ ಹೆಚ್ಚು ಹಾಡುಗಳನ್ನು ಬರೆದಿದ್ದಾರೆ. ಅಲ್ಲದೆ, ಅವರು ಹಲವಾರು ಮರಾಠಿ ಚಲನಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದಾರೆ.
* ಇತರ ಎಲ್ಲ ಚುನಾವಣಾ ಆಯುಕ್ತರಂತೆಯೇ ಅಧಿಕಾರವದಿಯಲ್ಲಿ ಅವರ ವೃತ್ತಿಜೀವನದ ಹಲವಾರು ಸವಾಲುಗಳನ್ನು ಎದುರಿಸಿದ್ದಾರೆ.

# Current affairs of July 2020 from KPSC Vaani

### 19 07 2020 ಅಮೆರಿಕದ ಮಾನವ ಹಕ್ಕು ಹೋರಾಟಗಾರ ಜಾನ್ ಲೆವಿಸ್ ನಿಧನ



ವಾಶಿಂಗ್ಟನ್ : ಅಮೆರಿಕದ ನಾಗರಿಕ ಹಕ್ಕುಗಳ ಚಳವಳಿಯ ನಾಯಕ ಹಾಗೂ ಮಾಜಿ ಅಮೆರಿಕ ಕಾಂಗ್ರೆಸ್ ಸಂಸದ ಜಾನ್ ಲೆವಿಸ್ ತಮ್ಮ 80 ವರ್ಷ ವಯಸ್ಸಿನಲ್ಲಿ ನಿಧನರಾದರು.
* 1963ರಲ್ಲಿ ವರ್ಣಭೇದದ ವಿರುದ್ಧ ನಡೆದ ಐತಿಹಾಸಿಕ ಪಾದಯಾತ್ರೆ ಆಯೋಜನೆಯಲ್ಲಿ ಜನಾಂಗೀಯವಾದ ವಿರೋಧಿ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಅವರಿಗೆ ನೆರವಾಗಿದ್ದರು.
* 1963ರ ನಾಗರಿಕಹಕ್ಕು ಚಳವಳಿಯ ಸಮಯದಲ್ಲಿ ಸ್ಥಾಪನೆಯಾದ ಅಹಿಂಸಾತ್ಮಕ ವಿದ್ಯಾರ್ಥಿ ಸಮನ್ವಯ ಸಮಿತಿ (ಎಸ್‌ಎನಸಿಸಿ)ಯ ಸ್ಥಾಪಕ ಸದಸ್ಯರಲ್ಲಿ ಲೂಯಿಸ್ ಅವರೂ ಒಬ್ಬರಾಗಿದ್ದರು.

### 19 07 2020 ರಿಲಯನ್ಸ್ ಜಿಯೋ BP ಒಪ್ಪಂದ : ದೇಶದಲ್ಲಿ 4,100 ಪೆಟ್ರೋಲ್ ಪಂಪ್ ತೆರೆಯಲು ಯೋಜನೆ




ನವದೆಹಲಿ : ರಿಲಯನ್ಸ್ ಸಂಸ್ಥೆಯು BP (The British Petroleum Company plc) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದೊಡ್ಡ ಬದಲಾವಣೆ ತರಲು ರಿಲಯನ್ಸ್ 4,100 ಪೆಟ್ರೋಲ್ ಪಂಪ್‌ಗಳನ್ನು ತೆರೆಯುವದಾಗಿ ಘೋಷಿಸಿದೆ. ಈ ಬಗ್ಗೆ ಜಿಯೋ, ಬಿಪಿ ಪಿಎಲ್ ಸಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹೊಸ ಇಂಧನ ಮತ್ತು ಚಲನಶೀಲ ಜಂಟಿ ಉದ್ಯಮಕ್ಕೆ "ರಿಲಯನ್ಸ್ ಬಿಪಿ ಮೊಬಿಲಿಟಿ ಲಿಮಿಟೆಡ್" (ಆರ್‌ಬಿಎಂಎಲ್) ಎಂದು ಹೆಸರಿಸಲಾಗುವುದು. ಈ ನೂತನ ಒಪ್ಪಂದದಿಂದಾಗಿ ಸುಮಾರು 60 ಸಾವಿರ ಉದ್ಯೋಗಿಗಳ ಸಂಖ್ಯೆಯೂ ಹೆಚ್ಚಾಗುವ ನಿರೀಕ್ಷೆಯಿದೆ. ವರದಿಯ ಪ್ರಕಾರ, ಜುಲೈ ಆರಂಭದಲ್ಲಿ ಎರಡೂ ಕಂಪನಿಗಳು ಜಿಯೋ ಬಿಪಿ ಬ್ರಾಂಡ್ ಹೆಸರಿನಲ್ಲಿ ವ್ಯವಹಾರವನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದವು. ಪ್ರಸ್ತುತ, ರಿಲಯನ್ಸ್ ದೇಶದಲ್ಲಿ 1,400 ಪೆಟ್ರೋಲ್ ಪಂಪ್‌ಗಳನ್ನು ಹೊಂದಿದೆ. ಮುಂದಿನ ಐದು ವರ್ಷಗಳಲ್ಲಿ ಪೆಟ್ರೋಲ್ ಪಂಪ್‌ಗಳ ಸಂಖ್ಯೆಯನ್ನು 5,500 ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿದ್ದು, ಇದಕ್ಕಾಗಿ 4,100 ಹೊಸ ಪಂಪ್‌ಗಳನ್ನು ತೆರೆಯುವ ಯೋಜನೆ ಹೊಂದಿದೆ.

# Current affairs of July 2020 from KPSC Vaani

### 19 07 2020 ಗಣಿತತಜ್ಞ ಸಿಎಸ್ ಶೇಷಾದ್ರಿ ನಿಧನ: ಪ್ರಧಾನಿ ಮೋದಿಯಿಂದ ಸಂತಾಪ



ಚೆನ್ನೈ: ಸ್ವಾತಂತ್ರ್ಯೋತ್ತರ ಭಾರತದ ಗಣಿತ ತಜ್ಞರ ಪೈಕಿ ಅಗ್ರಮಾನ್ಯರಾಗಿರುವ ಹಾಗೂ ಪದ್ಮಭೂಷಣ ಪ್ರಶಸ್ತಿ ವಿಜೇತ ಗಣಿತ ತಜ್ಞ ಸಿಎಸ್ ಶೇಷಾದ್ರಿ ಅವರು ಇತ್ತೀಚಿಗೆನಿಧನರಾಗಿದ್ದು, ಪ್ರಧಾನಿ ನರೇಂದ್ರ ಮೋದಿಯವರು ಇವರ ಸಾವಿಗೆ ಸಂತಾಪ ಸೂಚಿಸಿದ್ದಾರೆ. ಶೇಷಾದ್ರಿಯವರು ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ನಲ್ಲಿ ಮೊದಲು ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ್ದರು. 2009 ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

### 19 07 2020 ಭಾರತದಲ್ಲಿ ದಾಖಲೆಯ ಪ್ರಮಾಣದಲ್ಲಿ ಬಡವರ ಸಂಖ್ಯೆಯಲ್ಲಿ ಇಳಿಕೆ: ವಿಶ್ವಸಂಸ್ಥೆ ವರದಿ



ನವದೆಹಲಿ : ಭಾರತದಲ್ಲಿ 2005 06 ರಿಂದ 2015 16ರ ಅವಧಿಯಲ್ಲಿ 273 ಮಿಲಿಯನ್ ಜನರು ಬಡತನದಿಂದ ಮುಕ್ತರಾಗಿದ್ದು, ಮತ್ತು ಈ ಅವಧಿಯಲ್ಲಿ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬಡವರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಮುಖವಾಗಿದೆ ಎಂದು ವಿಶ್ವಸಂಸ್ಥೆಯ ವರದಿ ಮಾಡಿದೆ. ಯುನೈಟೆಡ್ ನೇಷನ್ಸ್ ಡೆವಲಪ್ಮೆಂಟ್ ಪ್ರೋಗ್ರಾಂ (ಯುಎನ್‌ಡಿಎ) ಮತ್ತು ಆಕ್ಸ್‌ಫರ್ಡ್ ಪಾವರ್ಟಿ ಅಂಡ್ ಹ್ಯೂಮನ್ ಡೆವಲಪ್ಮೆಂಟ್ ಇನಿಶಿಯೇಟಿವ್ (ಒಪಿಹೆಚ್‌ಐ) ಬಿಡುಗಡೆ ಮಾಡಿದ ಮಾಹಿತಿಯ ಅನುಸಾರ 75 ದೇಶಗಳಲ್ಲಿ 65 ದೇಶಗಳು 2000 ಮತ್ತು 2019ರ ನಡುವೆ ತಮ್ಮ ಬಹು ಆಯಾಮದ ಬಡತನದ ಮಟ್ಟವನ್ನು ಗಮನಾರ್ಹವಾಗಿ ಕಡಿಮೆ ಮಾಡಿವೆ ಎಂದು ತಿಳಿಸಿದೆ.

# Current affairs of July 2020 from KPSC Vaani

### 19 07 2020 ಪಂಚಾಯತಿ ಅಭಿವೃದ್ಧಿ ಅಧಿಕಾರಿ(PDO)ಗಳಿಗೆ ಜನನ ಮರಣ ಪ್ರಮಾಣ ಪತ್ರ ನೀಡುವ ಅಧಿಕಾರ ನೀಡಿದ ರಾಜ್ಯ ಸರ್ಕಾರ




ಬೆಂಗಳೂರು : ಕರ್ನಾಟಕ ರಾಜ್ಯದಲ್ಲಿ ಈವರೆಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಧಿಕಾರ ಇರುತ್ತಿರಲಿಲ್ಲ, ಆದರೆ ಸರ್ಕಾರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಜನನ ಮತ್ತು ಮರಣಪ್ರಮಾಣಪತ್ರ ನೀಡುವಅಧಿಕಾರವನ್ನು ನೀಡಿಆದೇಶಹೊರಡಿಸಿದೆ.ರಾಷ್ಟ್ರೀಯಜನನಮತ್ತು ಮರಣ ಕಾಯ್ದೆ 1969ರ ಅನ್ವಯ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ( ಪಿಡಿಒ) ಇ ಜನ್ಮ ತಂತ್ರಾಂಶದಲ್ಲಿ ತಮ್ಮ ಡಿಜಿಟಲ್ ಸಹಿಯ ಮುಖಾಂತರ ವ್ಯಕ್ತಿಗಳ ಜನನ ಮತ್ತು ಮರಣ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

### 20 07 2020 UAE ಯ ಮೊದಲ ಮಂಗಳ ಮಿಶನ್ 'ಹೋಪ್' ಯಶಸ್ವಿ ಉಡಾವಣೆ



ಟೋಕಿಯೊ : ಇದೇ ಪ್ರಪ್ರಥಮ ಬಾರಿ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಯು ಮಂಗಳ ಗ್ರಹದ ಶೋಧ ಕಾರ್ಯಾಚರಣೆಗಾಗಿ ಬಾಹ್ಯಾಕಾಶ ಯಾನ ಆರಂಭಿಸಿದ್ದು, ಜಪಾನ್‌ನ ರಾಕೆಟ್ ಮೂಲಕ 'ಹೋಪ್' ಶೋಧಕ ಗಗನ ನೌಕೆಯನ್ನು ಯಶಸ್ವಿ ಉಡಾವಣೆಗೊಳಿಸಲಾಯಿತು. ಈ ಗಗನ ನೌಕೆಯನ್ನು 'ಹೋಪ್' ಎಂದು ಕರೆಯಲಾಗುತ್ತಿದ್ದು, ಈ ನೌಕೆಯು ಮಾನವರಹಿತ ಗಗನ ಶೋಧಕವಾಗಿದ್ದು, ದಕ್ಷಿಣ ಜಪಾನ್‌ನ ತನೆಗಾಶಿಮಾ ಬಾಹ್ಯಾಕಾಶ ಕೇಂದ್ರದಿಂದ ದಿನಾಂಕ 20 07 2020 ರ ಬೆಳಗ್ಗೆ 6:58ಕ್ಕೆ(ಸ್ಥಳೀಯ ಕಾಲಮಾನ) ಉಡಾವಣೆಗೊಂಡಿತು. ಇದೆ ವೇಳೆ 'ಹೋಪ್ ಮಿಶನ್' ಸಂಭ್ರಮ ಆಚರಿಸಲು ದುಬೈನಲ್ಲಿ ಜಗತ್ತಿನ ಅತ್ಯಂತ ಎತ್ತರದ ಕಟ್ಟಡ ಬುರ್ಜ್ ಖಲೀಫಾದ ಮೇಲೆ 10 ಸೆಕೆಂಡ್‌ಗಳ ಕೌಂಟ್‌ಡೌನ್‌ನ ಬೆಳಕಿನ ಚಿತ್ತಾರ ಮೂಡಿಸಿ ಸಂಭ್ರಮಿಸಲಾಯಿತು.

# Current affairs of July 2020 from KPSC Vaani

### 20 07 2020 ಮಿಜೋರಾಂನಲ್ಲಿ ಮೊದಲ ಮೆಗಾ ಫುಡ್ ಪಾರ್ಕ್ ಉದ್ಘಾಟನೆ




ಆಹಾರ ಸಂಸ್ಕರಣಾ ಉದ್ಯಮ ಸಚಿವರಾದ ಹರ್ಸಿಮ್ರತ್ ಕೌರ್ ಬಾದಲ್ ಮಿಜೋರಾಂನ ಮೊದಲ ಮೆಗಾ ಫುಡ್ ಪಾರ್ಕ್ ಅನ್ನು ಉದ್ಘಾಟಿಸಿದರು. ಮಿಜೋರಾಂನಲ್ಲಿ ಉದ್ಘಾಟಿಸಲಾದ ಮಿಝೋರಾಂ ಫುಡ್ ಪಾರ್ಕ್ (ಸರ್ಕಾರೇತರ) ಆರಂಭದಿಂದಾಗಿ 5,000 ಜನರಿಗೆ ಉದ್ಯೋಗ ದೊರೆಯುವುದಲ್ಲದೆ, ಪ್ರಾಥಮಿಕ ಸಂಸ್ಕರಣಾ ಕೇಂದ್ರ ಮತ್ತು ಕೋರ್ ಸಂಸ್ಕರಣಾ ಕೇಂದ್ರದಿಂದಾಗಿ ಸುಮಾರು 25 ಸಾವಿರ ರೈತರಿಗೆ ಅನುಕೂಲವಾಗಲಿದೆ.
* ಮಿಝೋರಾಂ ಫುಡ್ ಪಾರ್ಕ್ ಅನ್ನು ಭಾರತ ಸರ್ಕಾರದ ಮೆಗಾ ಫುಡ್ ಪಾರ್ಕ್ ಯೋಜನೆಯಡಿ ಸ್ಥಾಪಿಸಲಾಗಿದೆ.

### 20 07 2020 2023ರ ವೇಳೆ ದೇಶದಲ್ಲಿ ಮೊದಲ ಖಾಸಗಿ ರೈಲು ಸಂಚಾರ ಮತ್ತು 2027ಕ್ಕೆ ಪೂರ್ಣ ಯೋಜನೆ ಜಾರಿ: ರೈಲ್ವೆ ಇಲಾಖೆ



ನವದೆಹಲಿ : ಭಾರತದಲ್ಲಿ ಮೊದಲ ಖಾಸಗಿ ರೈಲು 2023ಕ್ಕೆ ತನ್ನ ಸಂಚಾರ ಆರಂಭಿಸಲಿದ್ದು, ಮೊದಲ ಹಂತದಲ್ಲಿ 12 ಖಾಸಗಿ ರೈಲುಗಳನ್ನು 2023ರ ವೇಳೆಗೆ ಪರಿಚಯಿಸಲಾಗುವುದೆಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಮುಂದಿನ ಹಣಕಾಸು ವರ್ಷದಲ್ಲಿ ಇನ್ನೂ 45 ಮಾರ್ಗಗಳಲ್ಲಿ ಟೈಮ್‌ಲೈನ್ ಅನುಸಾರ ಈ ರೈಲುಗಳ ಸಂಚಾರ ಆರಂಬಿಸಲಾಗುವದು. ಅಲ್ಲದೆ 2027 ರ ವೇಳೆಗೆ ಯೋಜನೆಯ ಎಲ್ಲಾ 151 ಖಾಸಗಿ ರೈಲುಗಳು ಹಳಿ ಮೇಲೆ ಸಂಚರಿಸಲಿದೆ ಎಂದು ತಿಳಿದುಬಂದಿದೆ. ಖಾಸಗಿ ರೈಲುಗಳ ಯೋಜನೆಯ ಭಾಗವಾಗಿ ಸಂಚರಿಸಲು ಉದ್ದೇಶಿಸಿರುವ ವಿವರ: 2022 23ರಲ್ಲಿ 12,2023 2024ರಲ್ಲಿ 45,
2025 26ರಲ್ಲಿ 50ಮತ್ತು ಅಂತಿಮವಾಗಿ 2026 2027ರಲ್ಲಿ 151ರೈಲುಗಳು ಹಳಿ ಮೇಲೆ ಸಂಚಾರ ನಡೆಸಲಿದೆ.

# Current affairs of July 2020 from KPSC Vaani

## 20 07 2020 ಇಂದಿನಿಂದ ಗ್ರಾಹಕ ಸಂರಕ್ಷಣಾ ಕಾಯ್ದೆ 2019 ಜಾರಿ




ನವದೆಹಲಿ : ದಿನಾಂಕ 20 07 2020 ರಂದು ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ 'ಗ್ರಾಹಕ ಸಂರಕ್ಷಣಾ ಕಾಯ್ದೆ 2019' ಅನ್ನು ಅಧಿಕೃತವಾಗಿ ಜಾರಿಗೊಳಿಸಿದೆ. ಈ ಮೊದಲು ಜಾರಿಯಲ್ಲಿದ್ದ ಗ್ರಾಹಕ ಸಂರಕ್ಷಣಾ ಕಾಯ್ದೆ,1986 ಅನ್ನು ಬದಲಿಸಿ ಗ್ರಾಹಕ ಸಂರಕ್ಷಣಾ ಕಾಯ್ದೆ, 2019ಗೆ ರಾಷ್ಟ್ರಪತಿ ಕೋವಿಂದ್ 2019 ಆಗಸ್ಟ್ 9ರಂದು ಅಂಕಿತ ಹಾಕಿದ್ದರು. ಈ ಕಾಯ್ದೆಯು ಇಂದಿನಿಂದ(20 07 2020) ದೇಶವ್ಯಾಪಿ ಜಾರಿಗೊಳ್ಳುತ್ತಿದೆ. ಈ ನೂತನ ಕಾಯ್ದೆಯು ಇ ಕಾಮರ್ಸ್ ಅನ್ನು ಸಹ ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ. ಹೊಸ ಮಾರ್ಗಸೂಚಿಗಳ ಮೂಲಕ ಗ್ರಾಹಕರ ಹಕ್ಕುಗಳನ್ನು ರಕ್ಷಿಸುತ್ತವೆ.

## 20 07 2020 ಭಾರತೀಯ ಮಸಾಲೆ ಪದಾರ್ಥಗಳ ರಫ್ತು ಶೇಕಡಾ 23% ಹೆಚ್ಚಳ



ದಿನಾಂಕ ಜುಲೈ 19, 2020 ರಂದು ವಾಣಿಜ್ಯ ಸಚಿವಾಲಯವು ರಫ್ತುಗಳ ದಾಂತ್ತಾಂಶವನ್ನು ಬಿಡುಗಡೆ ಮಾಡಿದ್ದು, ಈ ಮಾಹಿತಿಯ ಪ್ರಕಾರ, ಮಸಾಲೆ ಪದಾರ್ಥಗಳ ರಫ್ತು ಶೇಕಡಾ 23 ರಷ್ಟು ಹೆಚ್ಚಾಗಿದೆ.
* ಜೂನ್ 2019ರ ಭಾರತೀಯ ಮಸಾಲೆ ರಫ್ತು ಪ್ರಮಾಣವನ್ನು 2020ರ ಜೂನ್ ತಿಂಗಳಿಗೆ ಹೋಲಿಸಿದರೆ 23%ಹೆಚ್ಚಳ ಕಂಡುಬಂದಿದೆ.
*ಜಾಗತಿಕವಾಗಿ ವ್ಯಾಪಿಸಿರುವ COVID 19ಸೋಂಕು ತಡೆಯಲು ಪ್ರಪಂಚದಾದ್ಯಂತ ಜನರು ತಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ನೈಸರ್ಗಿಕ ವಿಧಾನ ಅನುಸರಿಸುತ್ತಿದ್ದು, ಇದು ಭಾರತದ ಮಸಾಲೆಗಳ ರಫ್ತು ಹೆಚ್ಚಾಗಲು ಇದು ಮುಖ್ಯ ಕಾರಣವಾಗಿದೆ.

# Current affairs of July 2020 from KPSC Vaani

## 20 07 2020 ಅಸ್ಸಾಂ ಪ್ರವಾಹ : ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿ 108 ಪ್ರಾಣಿಗಳು ಮರಣ



ದಿನಾಂಕ 2020ರ ಜುಲೈ 19 ರಂದು ಅಸ್ಸಾಂ ರಾಜ್ಯ ಸರ್ಕಾರವು ಕಾಜಿರಂಗಾ ರಾಷ್ಟ್ರೀಯ ಉದ್ಯಾನದ 108 ಪ್ರಾಣಿಗಳು ಇತ್ತೀಚಿನ ಪ್ರವಾಹದಲ್ಲಿ ಸಾವನ್ನಪ್ಪಿರುವದಾಗಿ ಸರ್ಕಾರ ಘೋಷಿಸಿದೆ. ಕಾಜಿರಂಗಾ ಪಾರ್ಕ್ ಅಧಿಕಾರಿಗಳ ಪ್ರಕಾರ, ಸುಮಾರು 9 ಖಡ್ಗಮೃಗಗಳು ಸಾವನ್ನಪ್ಪಿದ್ದು, ಪ್ರವಾಹದಲ್ಲಿ 82 ಹಾಗ್ ಜಿಂಕೆಗಳು, ಎರಡು ಜೌಗು ಜಿಂಕೆಗಳು ಮತ್ತು ನಾಲ್ಕು ಕಾಡು ಎಮ್ಮೆಗಳು ಮತ್ತು ಏಳು ಕಾಡುಹಂದಿಗಳು ಸಾವನ್ನಪ್ಪಿರುವದಾಗಿ ತಿಳಿದು ಬಂದಿದೆ.

## 20 07 2020 “ಮೆಡಿಕಾಬ್”: ಐಐಟಿ ಮದ್ರಾಸ್ ನಿಂದ ಸಂಚಾರಿ ಆಸ್ಪತ್ರೆ ಅಭಿವೃದ್ಧಿ



IIT ಮದ್ರಾಸ್ ಸಹಭಾಗಿತ್ವದ ಸ್ಟಾರ್ಟ್ ಅಪ್ ಸಂಸ್ಥೆಯಾದ "ಮಾಡ್ಯುಲಸ್ ಹೌಸಿಂಗ್" ಸಂಸ್ಥೆಯು ಸಂಚಾರಿ ಆಸ್ಪತ್ರೆ ಘಟಕವನ್ನು ಅಭಿವೃದ್ಧಿಪಡಿಸಿದೆ. ಘಟಕವನ್ನು ಎಲ್ಲಿಯಾದರೂ ಸಾಗಿಸಬಹುದು ಮತ್ತು ಕೇವಲ 2 ಗಂಟೆಗಳಲ್ಲಿ ಸ್ಥಾಪಿಸಬಹುದು.

* ಈ ಸಂಚಾರಿ ಆಸ್ಪತ್ರೆಗೆ ಸಂಚಾರಿ ಆಸ್ಪತ್ರೆಗೆ “ಮೆಡಿಕಾಬ್” ಎಂದು ಹೆಸರಿಸಲಾಗಿದೆ.
* ಕೇರಳದ ವಯನಾಡ್ ಜಿಲ್ಲೆಯಲ್ಲಿ ಸಂಚಾರಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದ್ದು, ಅಲ್ಲಿ COVID 19 ರೋಗಿಗಳಿಗೆ ಚಿಕಿತ್ಸೆ ನೀಡಲು ಘಟಕಗಳನ್ನು ನಿಯೋಜಿಸಲಾಗುತ್ತಿದೆ.
* ಭಾರತದಲ್ಲಿ 1000 ವ್ಯಕ್ತಿಗಳಿಗೆ O.7 ಹಾಸಿಗೆಗಳ ಲಭ್ಯವಿದ್ದು, ಮೆಡಿಕಾಬ್‌ನಂತಹ ಆವಿಷ್ಕಾರಗಳು ಭಾರತದಲ್ಲಿ ಆರೋಗ್ಯ ಮೂಲಸೌಕರ್ಯಗಳನ್ನು ಹೆಚ್ಚಿಸಲು ಸಹಾಯವಾಗಲಿವೆ.

# Current affairs of July 2020 from KPSC Vaani

## 21 07 2020 ಪೂರ್ವ ಹಿಂದೂ ಮಹಾಸಾಗರದಲ್ಲಿ ಜೈಂಟ್ ಸಮುದ್ರ ಜಿರಳೆಗಳನ್ನು ಪತ್ತೆಮಾಡಿದ ವಿಜ್ಞಾನಿಗಳು



ದಿನಾಂಕ ಜುಲೈ 19, 2020 ರಂದು, ಪೂರ್ವ ಹಿಂದೂ ಮಹಾಸಾಗರದಲ್ಲಿ ವಿಜ್ಞಾನಿಗಳು ಮೊದಲ "ಸೂಪರ್ ಜೈಂಟ್ ಐಸೊಪಾಡ್" ಜಾತಿಗಳ ಸಮುದ್ರ ಜಿರಲೆಯನ್ನು ಪತ್ತೆ ಹಚ್ಚಿದ್ದಾರೆ.
* ಸಿಂಗಪುರದ ಸಂಶೋಧಕರ ತಂಡ ಹಿಂದೂ ಮಹಾಸಾಗರದಲ್ಲಿ ಹೊಸ ಜಾತಿಯ ಜಿರಳೆಯನ್ನು ಪತ್ತೆಹಚ್ಚಿದೆ.
* ಹೊಸದಾಗಿ ಕಂಡುಬಂದಿರುವ ಈ ಜಿರಳೆ ಪ್ರಭೇದಗಳಿಗೆ "ಬಾಥಿನೋಮಸ್ ರಾಕ್ಸಾಸಾ" ಎಂದು ಹೆಸರಿಸಲಾಗಿದೆ.

## 21 07 2020 ಭಾರತದ ಮೊದಲ ಚಾರ್ಜಿಂಗ್ ಪ್ಲಾಜಾ ದೆಹಲಿಯಲ್ಲಿ ಉದ್ಘಾಟನೆ



ಭಾರತ ಸರ್ಕಾರದ ವಿದ್ಯುತ್, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಶ್ರೀ ಆರ್ ಕೆ ಸಿಂಗ್ ಅವರು ನವದೆಹಲಿಯ ಚೆಲ್ಮ್ಸ್‌ಫೋರ್ಡ್ ಕ್ಲಬ್ನಲ್ಲಿ ದೇಶದ ಮೊದಲ ಸಾರ್ವಜನಿಕ ವಿದ್ಯುತ್ ವಾಹನ ಚಾರ್ಜಿಂಗ್ ಪ್ಲಾಜಾವನ್ನು ಉದ್ಘಾಟಿಸಿದರು.
* ಈ ಚಾರ್ಜಿಂಗ್ ಪ್ಲಾಜಾ ಜೊತೆಗೆ ಸಚಿವರು RAISE (Retrofit of Air conditioning to improve Indoor Air Quality for Safety and Efficiency) ಅನ್ನು ಉದ್ಘಾಟಿಸಿದರು. ಇದು EESL(ಎನರ್ಜಿ ಎಫಿಷಿಯೆನ್ಸಿ ಸರ್ವೀಸಸ್ ಲಿಮಿಟೆಡ್) ಮತ್ತು USIID (ಯುಎಸ್ ಏಜೆನ್ಸಿ ಫಾರ್ ಇಂಟರ್ನ್ಯಾಷನಲ್ ಡೆವಲಪ್ಮೆಂಟ್) ಜಂಟಿ ಉಪಕ್ರಮವಾಗಿದೆ.

# Current affairs of July 2020 from KPSC Vaani

**21 07 2020 ಜುಲೈ 20 : ಬಾಹ್ಯಾಕಾಶ ಪರಿಶೋಧನಾ ದಿನ (Space Exploration Day)**




ಪ್ರತಿವರ್ಷಜುಲೈ20ರಂದು,ಚಂದ್ರನಮೇಲೆಮನುಷ್ಯಮೊದಲುಕಾಲಿಟ್ಟದಿನದಐತಿಹಾಸಿಕ ಗಳಿಗೆಯ ವಾರ್ಷಿಕೋತ್ಸವದ ಸವಿನೆನಪಿಗೆ ಬಾಹ್ಯಾಕಾಶ ಪರಿಶೋಧನಾ ದಿನವನ್ನು ಆಚರಿಸಲಾಗುತ್ತದೆ.
*ಜುಲೈ20,1969ರಂದು,ಅಮೆರಿಕಾದನೀಲ್ಆರ್ಮ್‌ಸ್ಟ್ರಾಂಗ್ಮತ್ತು ಎಡ್ವಿನ್ ಬಜ್ ಚಂದ್ರನ ಮೇಲ್ಮೈಗೆ ಇಳಿದ ಮೊದಲ ಮಾನವರಾದರು. ಆರ್ಮ್‌ಸ್ಟ್ರಾಂಗ್ ಎಡ್ವಿನ್ ಜೋಡಿಚಂದ್ರನಮೇಲ್ಮೈಯಲ್ಲಿ21.5 ಗಂಟೆಗಳಕಾಲಕಳೆದರು.ಅಲ್ಲದೆ,ಅವರುತಮ್ಮ ಕ್ಯಾಪ್ಸುಲ್ಗಳ ಹೊರಗೆ 2.5 ಗಂಟೆಗಳ ಕಾಲ ಕಳೆದರು. ಈ ದಿನವನ್ನು ಮುಖ್ಯವಾಗಿ ಯುನೈಟೆಡ್ ಸ್ಟೇಟ್ಸ್ನಲ್ಲಿ ಆಚರಿಸಲಾಗುತ್ತದೆ.

**22 07 2020 ಅಂತರ್ಜಾಲಬಳಕೆಯಲ್ಲಿ ವಿಶ್ವದಲ್ಲೇ ಭಾರತಮುಂದು**



ಅಂತರ್ಜಾಲ ಈಗ ಜಗತ್ತಿನ ಅವಿಭಾಜ್ಯ ಅಂಗ. ಜಾಗತಿಕ ಅನುಪಾತಕ್ಕೆ ಹೋಲಿಸಿದರೆ 2019ರ ಅಂತ್ಯದ ವೇಳೆಗೆ ಭಾರತೀಯ ಬಳಕೆದಾರರ ಸಂಖ್ಯೆ ಜಾಸ್ತಿಯಾಗಿದೆ. ಇದೆ ಕಾರಣದಿಂದಾಗಿ ಅಂತರ್ಜಾಲ ಬಳಸುತ್ತಿರುವ ಭಾರತೀಯರ ಪ್ರಮಾಣ ಈಗ ಶೇ.54.3ಕ್ಕೇರಿದೆ.
*ಜಾಗತಿಕವಾಗಿ 401ಕೋಟಿ ಜನ 2019ರ ಅಂತ್ಯದ ಹೊತ್ತಿಗೆ ಅಂತರ್ಜಾಲ ಬಳಸಿದ್ದಾರೆಂದು ಅಂತಾ ರಾಷ್ಟ್ರೀಯ ದೂರಸಂಪರ್ಕ ಒಕ್ಕೂಟ ತಿಳಿಸಿದೆ.
* ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಭಾರತವೇ ಅತಿ ಹೆಚ್ಚು ಅಂತಜಾಲ ಬಳಕೆದಾರರ ಪ್ರಮಾಣ ಹೊಂದಿದೆ. 2019ರ ಅಂತ್ಯದ ಹೊತ್ತಿಗೆ ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಪ್ರತೀ 100 ಜನಸಂಖ್ಯೆಗೆ 47 ಮಂದಿ ಅಂತರ್ಜಾಲ ಬಳಕೆ ಮಾಡುತ್ತಿದ್ದರೆ, ಭಾರತದ ಮಟ್ಟಿಗೆ ಬಂದರೆ 2019ರ ಜೂನ್‌ನಲ್ಲೇ, ಪ್ರತೀ 100 ಜನಸಂಖ್ಯೆಯಲ್ಲಿ 50.5ರಷ್ಟು ಮಂದಿ ಅಂತರ್ಜಾಲ ಬಳಕೆ ಮಾಡುತ್ತಿರುವದಾಗಿ ವರದಿಯಾಗಿದೆ.

# Current affairs of July 2020 from KPSC Vaani

## 22 07 2020 ಐಸಿಸಿ ಟ್ವೆಂಟಿ 20 ವಿಶ್ವಕಪ್ ಮುಂದಿನ ವರ್ಷಕ್ಕೆ ಮುಂದೂಡಿಕೆ




ಮುಂಬೈ **:** ಜಾಗತಿಕವಾಗಿ ವ್ಯಾಪಿಸಿರುವ ಕೋವಿಡ್ 19 ಸೋಂಕಿನ ಭೀತಿಯಿಂದ ಈ ವರ್ಷದ ಅಕ್ಟೋಬರ್ ನವೆಂಬರ್‌ನಲ್ಲಿ ಆಸ್ಟ್ರೇಲಿಯದಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಟ್ವೆಂಟಿ 20 ಕ್ರಿಕೆಟ್ ವಿಶ್ವಕಪ್‌ನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

* ಪುರುಷರ ಐಸಿಸಿ ಕ್ರಿಕೆಟ್ ವಿಶ್ವಕಪ್ : ಭಾರತದಲ್ಲಿ 2023 ಅಕ್ಟೋಬರ್ ನವಂಬರ್‌ನಲ್ಲಿ ನಡೆಯಲಿದೆ.

## 22 07 2020 ಈ ವರ್ಷದ ಬ್ಯಾಲನ್ ಡಿ' ಓರ್ ಪ್ರಶಸ್ತಿ ರದ್ದು




ಪ್ಯಾರಿಸ್ : ಕೊರೋನ ವೈರಸ್ ಸಾಂಕ್ರಾಮಿಕ ರೋಗದ ಕಾರಣದಿಂದ ಜಾಗತಿಕವಾಗಿ ಉಂಟಾಗಿರುವ ಬಿಕ್ಕಟ್ಟಿನ ಹಿನ್ನೆಲೆ ಈ ವರ್ಷ ಯಾವುದೇ ಆಟಗಾರನಿಗೆ ಬ್ಯಾಲನ್ ಡಿ'ಓರ್ ಟ್ರೋಫಿ ನೀಡದಿರಲು ಫ್ರಾನ್ಸ್ ಫುಟ್ಬಾಲ್ ನಿಯತಕಾಲಿಕೆಯು ನಿರ್ಧರಿಸಿದೆ. ಈ ಮೂಲಕ 1956ರ ನಂತರ ಇದೇ ಮೊದಲ ಬಾರಿಗೆ ಬ್ಯಾಲನ್ ಡಿ' ಓರ್ ಪ್ರಶಸ್ತಿ ರದ್ದಾಗಿದೆ.
* ಈ ಪ್ರಶಸ್ತಿಯನ್ನು ಮೊದಲ ಬಾರಿಗೆ 1956ರಲ್ಲಿ ಸ್ಟಾನ್ಲಿ ಮ್ಯಾಥ್ಯೂಸ್ ಅವರು ಪಡೆದಿದ್ದರು.
* ಅರ್ಜೆಂಟೀನದ ಸ್ಟಾರ್ ಲಿಯೊನೆಲ್ ಮೆಸ್ಸಿ ಆರು ಬಾರಿ ಬ್ಯಾಲನ್ ಡಿ' ಓರ್ ಪ್ರಶಸ್ತಿ ಜಯಿಸಿದ್ದಾರೆ.
* ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ 5 ಬಾರಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದಿದ್ದಾರೆ.

# Current affairs of July 2020 from KPSC Vaani

22 07 2020 ಮೊದಲ ಹಂತದಲ್ಲಿ 5 ರಫೆಲ್ ಜೆಟ್‌ಗಳು ಜುಲೈ ಅಂತ್ಯಕ್ಕೆ ಭಾರತೀಯ ಸೇನೆಗೆ ಸೇರ್ಪಡೆ ಸಾಧ್ಯತೆ



ನವದೆಹಲಿ: ಇದೆ ಜುಲೈ 29ಕ್ಕೆ ಐದು ರಫೆಲ್ ಯುದ್ಧ ವಿಮಾನಗಳ ಮೊದಲ ಬ್ಯಾಚ್ ಭಾರತಕ್ಕೆ ತಲುಪುವ ನಿರೀಕ್ಷೆ ಇದ್ದು, ಇವುಗಳ ಆಗಮದ ಕರಣ ಸೇನೆ ಸೇರ್ಪಡೆ ಕಾರ್ಯಕ್ರಮವನ್ನು ಅಂಬಾಲದ ವಾಯುನೆಲೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ.

**22 07 2020 ಮಧ್ಯಪ್ರದೇಶ ರಾಜ್ಯಪಾಲ ಲಾಲ್ಜಿ ಟಂಡನ್ ವಯೋ ಸಹಜ ಕಾಯಿಲೆಯಿಂದ ನಿಧನ**



ನವದೆಹಲಿ : ಮಧ್ಯಪ್ರದೇಶದ ರಾಜ್ಯಪಾಲ ಲಾಲ್ಜಿ ಟಂಡನ್ ಅವರು ವಯೋ ಸಹಜ ಖಾಯಿಲೆಯಿಂದ ಕೆಲವು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು.
* ಟಂಡನ್ ಅವರ ಅನಾರೋಗ್ಯದ ನಂತರ ಉತ್ತರ ಪ್ರದೇಶದ ರಾಜ್ಯಪಾಲ ಆನಂದಿಬೆನ್ ಪಟೇಲ್ ಅವರು ಮಧ್ಯಪ್ರದೇಶದ ಹೆಚ್ಚುವರಿ ಉಸ್ತುವಾರಿ ವಹಿಸಿದ್ದಾರೆ.
* ಉತ್ತರ ಪ್ರದೇಶದಲ್ಲಿ ಕಲ್ಯಾಣ ಸಿಂಗ್ ನೇತೃತ್ವದ ಸರ್ಕಾರವಿದ್ದಾಗ ಇವರು ಸಚಿವರಾಗಿದ್ದರು. ನಂತರ ಬಿಜೆಪಿ ಬಿಎಸ್‌ಪಿ ಮೈತ್ರಿ ಸರ್ಕಾರ ಇದ್ದಾಗ ಮಾಯಾವತಿ ಆಳ್ವಿಕೆಯಲ್ಲೂ ನಗರಾಭಿವೃದ್ಧಿ ಸಚಿವರಾಗಿ ಇವರು ಕೆಲಸ ಮಾಡಿದ್ದರು.

# Current affairs of July 2020 from KPSC Vaani

## 22 07 2020 ಒಡಿಶಾದಲ್ಲಿಪತ್ತೆಯಾಯಿತುಅಪರೂಪದಹಳದಿಬಣ್ಣದಆಮೆ



ಬಾಲಾಸೋರ್ : ಒಡಿಶಾದ ಬಾಲಾಸೋರ್‌ನ ಸುಜಾನ್‌ಪುರ ಗ್ರಾಮದ ನಿವಾಸಿಗಳು ಅತ್ಯಂತ ಅಪರೂಪದ ಹಳದಿ ಬಣ್ಣದ ಆಮೆಯೊಂದನ್ನು ಪತ್ತೆ ಮಾಡಿದ್ದಾರೆ. ಗ್ರಾಮಸ್ಥರು ಈ ಆಮೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದಾರೆ. ಅಧಿಕಾರಿಗಳ ಪ್ರಕಾರ ಈ ಆಮೆಯು ಚರ್ಮ ಬಿಳಿಚುವಿಕೆ (Albino)ರೋಗದಿಂದ ಬಳಲುತ್ತಿರಬಹುದು. ಇದರ ಕಣ್ಣು ಕೂಡ ನಸುಗೆಂಪು ಬಣ್ಣದಿಂದ ಕೂಡಿದೆ. ಇದು ಕೂಡ ಚರ್ಮದ ಬಿಳಿಚುವಿಕೆಯ ರೋಗದ ಲಕ್ಷಣವಾಗಿದೆ ಎಂದು ವಿವರಿಸಿದ್ದಾರೆ.

## 23 07 2020 ಬೆನ್‌ಸ್ಟೋಕ್ಸ್‌ಪ್ರಸ್ತುತವಿಶ್ವದನಂಬರ್‌ಒನ್‌ಆಲ್‌ರೌಂಡರ್



ದುಬೈ : ಇತ್ತೀಚಿಗೆ ವೆಸ್ಟ್ ಇಂಡೀಸ್ ತಂಡದ ವಿರುದ್ಧದ 2ನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಬೆನ್ ಸ್ಟೋಕ್ಸ್ ಅವರು ಪ್ರಸ್ತುತ ವಿಶ್ವದ ನಂ. 1 ಆಲ್‌ರೌಂಡರ್ ಎನಿಸಿದ್ದಾರೆ. ICC ಟೆಸ್ಟ್ ಆಲ್‌ರೌಂಡರ್ ರ್ಯಾಂಕಿಂಗ್ ನಲ್ಲಿ ವೆಸ್ಟ್ ಇಂಡೀಸ್ ನಾಯಕ ಜೇಸನ್ ಹೋಲ್ಡರ್ ಇಲ್ಲಿಯವರೆಗೂ ಮೊದಲ ಸ್ಥಾನದಲ್ಲಿದ್ದರು. ಅವರನ್ನು ಹಿಂದಿಕ್ಕಿ ಸ್ಟೋಕ್ಸ್ ಇದೇ ಮೊದಲ ಬಾರಿಗೆ ನಂ. 1 ಪಟ್ಟಕ್ಕೇರಿದ್ದಾರೆ. ಅಲ್ಲದೆ ಬ್ಯಾಟಿಂಗ್ ನಲ್ಲೂ ಕೂಡ ಜೀವನಶ್ರೇಷ್ಠ 3ನೇ ಸ್ಥಾನಕ್ಕೇರಿದ್ದಾರೆ.

* ಪ್ರಸ್ತುತ ಭಾರತದ ರವೀಂದ್ರ ಜಡೇಜಾ 3ನೇ ಸ್ಥಾನದಲ್ಲಿದ್ದಾರೆ. ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ 4 ಮತ್ತು ಭಾರತದ ಆರ್. ಅಶ್ವಿನ್ 5ನೇ ಸ್ಥಾನದಲ್ಲಿದ್ದಾರೆ.

# Current affairs of July 2020 from KPSC Vaani




# Current affairs of July 2020 from KPSC Vaani

## 23 07 2020 'ಮುಖ್ಯಮಂತ್ರಿ ಘರ್ ಘರ್ ರೇಷನ್ ಯೋಜನೆ'ಗೆ ದೆಹಲಿ ಸಂಪುಟ ಅನುಮೋದನೆ



ನವದೆಹಲಿ : ದೆಹಲಿಯಲ್ಲಿ ಅರ್ಹ ಫಲಾನುಭವಿಗಳ ಪಡಿತರ ಪೂರೈಸುವ ನೂತನ ಯೋಜನೆಯಾದ "ಮುಖ್ಯಮಂತ್ರಿ ಘರ್ ಘರ್ ರೇಷನ್ ಯೋಜನೆ" ಗೆ ದೆಹಲಿ ಸರ್ಕಾರದ ಸಚಿವ ಸಂಪುಟ ಅನುಮತಿ ನೀಡಿರುವದಾಗಿ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಕೇಜ್ರಿವಾಲ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಈ ನೂತನ ಯೋಜನೆಯನ್ನು ಘೋಷಿಸಿದರು, ಕೋವಿಡ್ ಸಂದರ್ಭದಲ್ಲಿ ಬಡಜನರು ಪಡಿತರ ಪಡೆಯಲು ಹಲವು ಸಮಸ್ಯೆ ಎದುರಿಸುತ್ತಿದ್ದು, ಪರಿಹಾರಕ್ಕೆ ದೆಹಲಿಯ ಎಎಪಿ ಸರ್ಕಾರ ಜನ ಮನೆ ಬಾಗಿಲಿಗೆ ಪಡಿತರ ವಿತರಿಸಲು ಮುಂದಾಗಿದೆ.


## 23 07 2020 ಕೊರೋನಾ ವೈರಸ್ ನಿರ್ವಹಣೆ : ಬಿಬಿಎಂಪಿ ರಾಯಭಾರಿಯಾಗಿ ನಟ ರಮೇಶ್ ಅರವಿಂದ್ ನೇಮಕ



ಬೆಂಗಳೂರು : ರಾಜ್ಯ ರಾಜಧಾನಿಯಲ್ಲಿ ದಿನೇ ದಿನೇ ಕೋರೋಣ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸದ್ದುದ್ದೇಶದಿಂದ ಬಿಬಿಎಂಪಿ ಕೋವಿಡ್ ನಿಯಂತ್ರಣ ರಾಯಭಾರಿಯನ್ನಾಗಿ ಹಿರಿಯ ನಟ ರಮೇಶ್ ಅರವಿಂದ್ ಅವರನ್ನು ನೇಮಕ ಮಾಡಿದೆ. ಸೋಂಕಿನಿಂದ ಮುಕ್ತವಾಗಿರುವುದು ಹೇಗೆ ಎಂಬುದು ಸೇರಿದಂತೆ ಸೋಂಕಿನ ಕುರಿತು ಅರಿವು ಮೂಡಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಎಂದು ಬಿಬಿಎಂಪಿ ಆಯುಕ್ತ ಎನ್ ಮಂಜುನಾಥ್ ಪ್ರಸಾದ್ ಹೇಳಿದ್ದಾರೆ.

# Current affairs of July 2020 from KPSC Vaani

## 23 07 2020 ಬಜಾಜ್ ಫೈನಾನ್ಸ್ ಅಧ್ಯಕ್ಷ ಸ್ಥಾನಕ್ಕೆ ರಾಹುಲ್ ಬಜಾಜ್ ರಾಜೀನಾಮೆ



ಜೂಲೈ ತಿಂಗಳ ಕೊನೆಯಲ್ಲಿ ಬಜಾಜ್ ಫೈನಾನ್ಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕೇತರ ಅಧ್ಯಕ್ಷ ಸ್ಥಾನವನ್ನು ರಾಹುಲ್ ಬಜಾಜ್ ತ್ಯಜಿಸಲಿದ್ದಾರೆ ಎಂದು ಕಂಪನಿಯು ತಿಳಿಸಿದೆ. ಅವರ ನಂತರ ಹಾಲಿ ಉಪಾಧ್ಯಕ್ಷರಾದ ಸಂಜೀವ್ ಬಜಾಜ್ ಅಧಿಕಾರ ಸ್ವೀಕರಿಸುವ ಸಾಧ್ಯತೆಯಿದೆ ಎಂದು ಬಜಾಜ್ ಫೈನಾನ್ಸ್ ತಿಳಿಸಿದೆ. ರಾಹುಲ್ ಬಜಾಜ್ ಅವರು 1987 ರಲ್ಲಿ ಕಂಪನಿಯ ಪ್ರಾರಂಭದಿಂದಲೂ ಮತ್ತು ಐದು ದಶಕಗಳಿಂದಲೂ ಕಂಪನಿಯ ನಡೆಸಿದ್ದರು. ಅಲ್ಲದೆ ಕಂಪನಿಗೆ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ಕೂಡ ತಮ್ಮ ಸೇವೆ ಸಲ್ಲಿಸಲಿದ್ದಾರೆ.

## 23 07 2020 ಚೀನಾಗಡಿಯಲ್ಲಿ ನಿಖರ ಕಣ್ಗಾವಲಿಗಾಗಿ DRDO ದಿಂದ ಸೇನೆಗಾಗಿ 'ಭಾರತ್' ಡ್ರೋನ್ ಅಭಿವೃದ್ಧಿ



ನವದೆಹಲಿ : ಇತ್ತೀಚಿಗೆ ಪೂರ್ವ ಲಡಾಖ್‌ನ ಪ್ರದೇಶದಲ್ಲಿ ಚೀನಾ ತಕರಾರು ತೆಗೆದ ಹಿನ್ನಲೆ ವಾಸ್ತವಿಕ ನಿಯಂತ್ರಣ ರೇಖೆ ಬಳಿ ಇರುವ ಅತ್ಯಂತ ಎತ್ತರದ ಹಾಗೂ ಪರ್ವತ ಪ್ರದೇಶಗಳಲ್ಲಿ ಚೀನಾ ಸೇನೆಯ ಚಲನವಲನದ ಮೇಲೆ ಗಮನವಹಿಸಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಭಾರತೀಯ ಸೇನೆಗೆ 'ಭಾರತ್' ಹೆಸರಿನ ಡ್ರೋನ್‌ಗಳನ್ನು ಅಭಿವೃದ್ಧಿ ಪಡಿಸಿ ಹಸ್ತಾಂತರಿಸಿದೆ. ಇದರಿಂದಾಗಿ ಭಾರತೀಯ ಸೇನೆಗೆ ಗಡಿಯಲ್ಲಿ ನಿಖರವಾದ ಕಣ್ಗಾವಲು ನಡೆಸಲು 'ಭಾರತ್' ಡ್ರೋನ್‌ಗಳು ಸಹಕಾರಿಯಾಗಲಿವೆ ಎಂದು ರಕ್ಷಣಾ ಇಲಾಖೆ ಮೂಲಗಳು ತಿಳಿಸಿವೆ.

# Current affairs of July 2020 from KPSC Vaani

## 23 07 2020 ನೌಕಾಪಡೆ ಸೇರಲಿರುವ ಕಣ್ಗಾವಲು ವಿಮಾನ ಪೋಸಿಡಾನ್ 8ಐ



ನವದೆಹಲಿ : ಭಾರತೀಯ ನೌಕಾಪಡೆಯ ಕಣ್ಗಾವಲು ವಿಮಾನ ಪೋಸಿಡಾನ್ 8 ಐ ಬರುವ ವರ್ಷದಲ್ಲಿ ಅಮೆರಿಕಾದಿಂದ ಭಾರತಕ್ಕೆ ಬರಲಿದೆ. ಈ ವಿಮಾನಗಳನ್ನು ಅಮೆರಿಕಾದ ಬೋಯಿಂಗ್ ಸಂಸ್ಥೆಯು ತಯಾರಿಸಿದ್ದು, ಹಿಂದೂ ಮಹಾಸಾಗರದ ಮೇಲೆ ಕಣ್ಣಿಡಲು ಭಾರತದ ನೌಕಾಪಡೆಗೆ ಸೇರ್ಪಡೆಗೊಳ್ಳಲಿದೆ.
ಹಿಂದೂ ಮಹಾಸಾಗರದಲ್ಲಿ ಚೀನಾವು ಅಧಿಪತ್ಯ ಸಾಧಿಸಲು ತೀವ್ರ ಪೈಪೋಟಿ ನಡೆಸಿರುವ ಹಿನ್ನಲೆ ಭಾರತ ಈ ವಿಮಾನಗಳ ಖರೀದಿಗೆ ಮುಂದಾಗಿದೆ. ನಾಲ್ಕು ಕಣ್ಗಾವಲು ವಿಮಾನಗಳುಳ್ಳ ಮೊದಲ ಬ್ಯಾಚ್ ಮುಂದಿನ ವರ್ಷ ಅಮೆರಿಕಾದಿಂದ ಭಾರತಕ್ಕೆ ಬರಲಿದೆ. ಪೋಸಿಡಾನ್ 8I(ಪಿ 8ಐ) ವಿಮಾನ
* ಇದು ಒಂದು ಸಮಯದಲ್ಲಿ 129 ಸೋನಾರ್ ವ್ಯವಸ್ಥೆಗಳನ್ನು ಸಾಗಿಸಬಲ್ಲದು
* ಇದು ಸಮುದ್ರದ ಆಳವಾದ ನೀರಿನಲ್ಲಿ ಜಲಾಂತರ್ಗಾಮಿ ನೌಕೆಗಳನ್ನು ಪತ್ತೆಹಚ್ಚುವ ಸಾಮರ್ಥ್ಯ ಹೊಂದಿದೆ.
* ಹಡಗು ವಿರೋಧಿ ಕ್ಷಿಪಣಿಯಿಂದ ಶತ್ರುಗಳ ಮೇಲೆ ದಾಳಿ ಮಾಡುವ ಸಾಮರ್ಥ್ಯ ಕೂಡ ಹೊಂದಿದೆ

## 24 07 2020 ಧ್ರುವಾಸ್ತ್ರ ಪ್ರಯೋಗ ಯಶಸ್ವಿ: ಭಾರತೀಯ ಸೇನೆಗೆ ಮತ್ತೊಂದು ಮಹಾ ಆಯುಧ



ಬಾಲಸೋರ್ (ಒಡಿಶಾ) : ಚಂಡೀಪುರದ ಸಮಗ್ರ ಪರೀಕ್ಷಾ ವಲಯದಿಂದ ಎರಡು ಬಾರಿ ಟ್ಯಾಂಕರ್ ಧ್ವಂಶಕ ಅತ್ಯಾಧುನಿಕ ಮಹಾ ಆಯುಧ ಧ್ರುವಾಸ್ತ್ರ ಕ್ಷಿಪಣಿಗಳನ್ನು ಎರಡು ಬಾರಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ ಎಂದು ಹಿರಿಯ ಸೇನಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ವೈರಿಗಳ ಟ್ಯಾಂಕರ್‌ಗಳು, ಬಂಕರ್‌ಗಳು ಮತ್ತು ಸಶಸ್ತ್ರ ವಾಹನಗಳನ್ನು ಧ್ವಂಸಗೊಳಿಬಲ್ಲ ಅತ್ಯಾಧುನಿಕ ಧ್ರುವಾಸ್ತ್ರ ಕ್ಷಿಪಣಿಗಳನ್ನು ಒಡಿಶಾದ ಬಾಲಸೋರ್‌ನಲ್ಲಿ ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ.
* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಯು ಈ ಆಯುಧವನ್ನು ಅಭಿವೃದ್ಧಿ ಪಡಿಸಿದೆ.
* ಹೆಲಿಕಾಪ್ಟರ್ ಮೂಲಕ ಶತ್ರುಗಳ ಬಂಕರ್‌ಗಳು (ರಹಸ್ಯ ಅಡಗುದಾಣಗಳು), ಟ್ಯಾಂಕರ್‌ಗಳು, ಮತ್ತು ಸಶಸ್ತ್ರ ವಾಹನಗಳನ್ನು ನಿಖರವಾಗಿ ಧ್ವಂಸಗೊಳಿಸಬಲ್ಲ ಅಗಾಧ ಸಾಮಥ್ರ್ಯವನ್ನು ಧುವಾಸ್ತ್ರ ಮಿಸ್ಸೈಲ್ ಒಳಗೊಂಡಿದೆ.

# Current affairs of July 2020 from KPSC Vaani

## 24 07 2020 ಐಡಿಯಾಸ್ ಶೃಂಗಸಭೆಯಲ್ಲಿ ಮೋದಿ ಭಾಷಣ




ನವದೆಹಲಿ: ಅಮೆರಿಕ ಭಾರತ ವ್ಯವಹಾರ ಸಮಿತಿ ವತಿಯಿಂದ ಜು.22ರಂದು ನಡೆದ ಇಂಡಿಯಾ ಐಡಿಯಾಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಮಾಡಿದರು. ಸಮಿತಿಯ 45ನೇ ವರ್ಷಾಚರಣೆಯ ಪ್ರಯುಕ್ತ ಈ ಕಾರ್ಯಕ್ರಮವನ್ನು ವರ್ಚುಯಲ್(ವಿಡಿಯೋ ಕಾನ್ಫರೆನ್ಸ್) ಮೂಲಕ ಹಮ್ಮಿಕೊಳ್ಳಲಾಗಿತ್ತು, ಈ ಶೃಂಗಸಭೆಯು "ಉತ್ತಮ ಭವಿಷ್ಯದ ನಿರ್ಮಾಣ" ಎನ್ನುವ ಘೋಷ ವಾಕ್ಯ ದೊಂದಿಗೆ ನಡೆದಿದ್ದು, ಈ ಕುರಿತು ಸಾಕಷ್ಟು ಚರ್ಚೆ ನಡೆದವು.

## 24 07 2020 ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಶಾಶ್ವತ ಆಯೋಗ



ನವದೆಹಲಿ : ಭಾರತೀಯ ಸೇನೆಯಲ್ಲಿರುವ ಮಹಿಳಾ ಅಧಿಕಾರಿಗಳಿಗೆ ಶಾಶ್ವತ ಆಯೋಗ ಸ್ಥಾಪಿಸುವಂತೆ ಕೇಂದ್ರ ಸರ್ಕಾರ ಆದೇಶಿಸಿರುವದಾಗಿ ಭಾರತೀಯ ಸೇನೆ ಮಾಹಿತಿ ನೀಡಿದೆ. ಕೆಲ ದಿನಗಳ ಹಿಂದೆ ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳಿಗೂ ಕಮಾಂಡರ್ ಸ್ಥಾನ ಕೊಡಬೇಕು, ಹಾಗೂ ಅವರಿಗೆ ಶಾಶ್ವತ ಆಯೋಗ ಸ್ಥಾಪಿಸುವ ಮೂಲಕ ಲಿಂಗ ತಾರತಮ್ಯ ಹೋಗಲಾಡಿಸಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನಲೆ ಕೇಂದ್ರ ಸರ್ಕಾರ ಈಗ ಆಯೋಗ ಸ್ಥಾಪನೆಗೆ ಆದೇಶ ಹೊರಡಸಿದೆ.

# Current affairs of July 2020 from KPSC Vaani

## 24 07 2020 ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ 75ನೇ ಅಧಿವೇಶನ




ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಕಳೆದ 75 ವರ್ಷಗಳ ಇತಿಹಾಸದಲ್ಲಿಯೇ ಇದೇ ಪ್ರಪ್ರಥಮ ಬಾರಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಾಮಾನ್ಯ ಸಭೆಯನ್ನು ನಡೆಸಲು ಉದ್ದೇಶಿಸಲಾಗಿದ್ದು, ಈ ಸಭೆಯಲ್ಲಿ 193 ಸದಸ್ಯ ರಾಷ್ಟ್ರಗಳು ಭಾಗವಹಿಸಲಿವೆ.
* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 75ನೇ ಅಧಿವೇಶನವು ಇದೆ ಸೆಪ್ಟೆಂಬರ್ 15 ರಂದು ಆರಂಭವಾಗಲಿದ್ದು, ಜಾಗತಿಕವಾಗಿ ವ್ಯಾಪಿಸಿರುವ ಕೋರೋಣ ಸೋಂಕಿನ ಭೀತಿಯಿಂದ ಈ ಬಾರಿಯ ಅಧಿವೇಶನವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲು ನಿರ್ಣಯ ಕೈಗೊಳ್ಳಲಾಗಿದೆ. ಈ ಮೂಲಕ ಪ್ರಮುಖ ದೇಶಗಳ ನಾಯಕರುಗಳು ತಮ್ಮ ಭಾಷಣದ ವಿಡಿಯೊ ಸಂದೇಶಗಳನ್ನು ಸಾಮಾನ್ಯ ಸಭೆಗೆ ಕಳುಹಿಸಲಿದ್ದಾರೆ.


## 24 07 2020 ಚೀನಾದಸ್ವತಂತ್ರಮಾನವರಹಿತಮಂಗಳಮಿಷನ್ಉಡಾವಣೆ



ತೈವಾನ್ : ಚೀನಾ ರಾಷ್ಟ್ರವು ದಿನಾಂಕ 23 ಜುಲೈ 2020 ರಂದು ಮಾನವರಹಿತ ಉಪಗ್ರಹವನ್ನು ಮಂಗಳ ಗ್ರಹಕ್ಕೆ ಯಶಸ್ವಿಯಾಗಿ ಉಡಾವಣೆ ಮಾಡುವ ಮೂಲಕ ತನ್ನ ಮೊದಲ ಸ್ವತಂತ್ರ ಕಾರ್ಯಾಚರಣೆಯಲ್ಲಿ ಯಶಸ್ವಿಯಾಯಿತು. ದಕ್ಷಿಣ ದ್ವೀಪದ ಹೈನಾನ್‌ನ ವೆನ್‌ಚಾಂಗ್ ಬಾಹ್ಯಾಕಾಶ ಉಡಾವಣಾ ಕೇಂದ್ರದಿಂದ ಚೀನಾದ ಅತಿದೊಡ್ಡ ವಾಹಕ ರಾಕೆಟ್ ಲಾಂಗ್ ಮಾರ್ಚ್ 5ವೈ 4ಮೂಲಕ ಮಧ್ಯಾಹ್ನ 12:41ಕ್ಕೆ ನಭಕ್ಕೆ ಉಡಾವಣೆ ಮಾಡಲಾಯಿತು.
* ಇದು ಮಂಗಳ ಗ್ರಹದಲ್ಲಿ 90 ದಿನಗಳವರೆಗೆ ಗ್ರಹವನ್ನು ಅನ್ವೇಷಿಸಲು ರೋವರ್ ಅನ್ನು ನಿಯೋಜಿಸಲು ಪ್ರಯತ್ನಿಸುತ್ತದೆ.
* ಈ ಕಾರ್ಯಾಚರಣೆ ಸಫಲವಾದರೆ, ಮಂಗಳ ಗ್ರಹಕ್ಕೆ ರೋವರ್ ಅನ್ನು ಕಕ್ಷೆಗೆ ಇಳಿಸುವ, ಮತ್ತು ನಿಯೋಜಿಸುವ ಮೊದಲ ದೇಶವಾಗಿ ಚೀನಾ ಹೊರ ಹೊಮ್ಮಲಿದೆ.

# Current affairs of July 2020 from KPSC Vaani

### 25 07 2020 ಮುಕೇಶ್ ಅಂಬಾನಿ ಜಗತ್ತಿನ 5ನೇ ಅತಿ ದೊಡ್ಡ ಶ್ರೀಮಂತ




ನವದೆಹಲಿ : ಮುಕೇಶ್ ಅಂಬಾನಿ ಜಗತ್ತಿನ 5ನೇ ಅತಿ ಸಿರಿವಂತ ವ್ಯಕ್ತಿಯೆಂದು 'ಫೋರ್ಬ್ಸ್' ಪತ್ರಿಕೆ ಇತ್ತೀಚಿಗೆ ವರದಿ ಮಾಡಿದೆ. ರಿಲಾಯನ್ಸ್ ಇಂಡಸ್ಟ್ರೀಸ್ ಸಮೂಹದ ಮುಖ್ಯಸ್ಥರಾದ ಮುಕೇಶ್ ಅಂಬಾನಿಯವರ ಜಿಯೋ ಸಂಸ್ಥೆಯಲ್ಲಿ ಹಲವಾರು ಸಂಸ್ಥೆಗಳು ಹೂಡಿಕೆ ಮಾಡಿದ ಹಿನ್ನಲೆ ಮುಕೇಶ್ ಅಂಬಾನಿಯವರ ಸಂಪತ್ತು ಹೆಚ್ಚಳಗೊಂಡಿದ್ದು, ಪ್ರಸ್ತುತ ಅಮೆರಿಕದ ಹೂಡಿಕೆದಾರ, ಉದ್ಯಮಿ ವಾರೆನ್ ಬಫೆಟ್ ಅವರನ್ನು ಹಿಂದಿಕ್ಕಿ ಐದನೇ ಸ್ಥಾನಕ್ಕೇರಿದ್ದಾರೆಂದು ಫೋರ್ಬ್ಸ್ ತಿಳಿಸಿದೆ.
* ಮುಕೇಶ್ ಅಂಬಾನಿಯ ಸಂಪತ್ತಿನ ಮೌಲ್ಯ 75ಶತಕೋಟಿ ಡಾಲರ್ (5.61ಲಕ್ಷ ಕೋಟಿ ರೂ.) ಆಗಿರುವುದಾಗಿ ಫೋರ್ಬ್ಸ್ ವರದಿ ಮಾಡಿದೆ.

### 25 07 2020 ಸಿದ್ದಿ ಜನಾಂಗದ ಶಾಂತರಾಮ ಸಿದ್ದಿಗೆ ವಿಧಾನ ಪರಿಷತ್ ಸದಸ್ಯ ಪಟ್ಟ




ಬೆಂಗಳೂರು : ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಉತ್ತರ ಕನ್ನಡ ಜಿಲ್ಲಾ ಅರಣ್ಯ ವ್ಯಾಪ್ತಿಯಲ್ಲಿ ನೆಲೆಸಿರುವ ಸಿದ್ದಿ ಜನಾಂಗದ ವ್ಯಕ್ತಿಯಾದ ಶಾಂತರಾಮ ಬುದ್ನ ಸಿದ್ದಿಯವರು ಸದನದ ಮೇಲ್ಮನೆಯಾದ ವಿಧಾನ ಪರಿಷತ್ತನ್ನು ಪ್ರವೇಶಿಸುತ್ತಿದ್ದಾರೆ. ಶಾಂತರಾಮ ಬುದ್ನ ಸಿದ್ದಿಯವರ ಹೆಸರನ್ನು ಬಿಜೆಪಿಯಿಂದ ನಾಮ ನಿರ್ದೇಶನಗೊಳಿಸಿದ್ದು, ರಾಜ್ಯಪಾಲ ವಜುಭಾಯಿ ವಾಲಾ ಅಂಕಿತ ಹಾಕಿದ್ದಾರೆ.ಈ ಮೂಲಕ ಸಿದ್ದಿ ಜನಾಂಗದ ಪ್ರತಿನಿಧಿಯೊಬ್ಬರು ವಿಧಾನ ಪರಿಷತ್ತಿಗೆ ಆಯ್ಕೆಯಾದಂತಾಗಿದೆ.
* ಪೂರ್ವ ಆಫ್ರಿಕಾದಿಂದ ಬಂದು ಭಾರತದಲ್ಲಿ ನೆಲೆಸಿರುವ ಸಿದ್ದಿ ಜನಾಂಗದವರು ರಾಜ್ಯದಲ್ಲಿ ಪರಿಶಿಷ್ಟ ಪಂಗಡ ಗುಂಪಿಗೆ ಸೇರುತ್ತಾರೆ.

# Current affairs of July 2020 from KPSC Vaani

### 25 07 2020 ಚೀನಾದ ಮತ್ತಷ್ಟು ಆಯಪ್‌ಗಳಿಗೆ ಭಾರತದಲ್ಲಿ ನಿಷೇಧ




ನವದೆಹಲಿ : ಕಳೆದ ತಿಂಗಳಷ್ಟೇ ಚೀನಾದ 59 ಆಯಪ್‌ಗಳನ್ನು ದೇಶದ ಸಾರ್ವಭೌಮತೆ, ಸಮಗ್ರತೆ ಮತ್ತು ಭದ್ರತೆ ವಿಚಾರವಾಗಿ ದಕ್ಕೆತರುವ ಕಾರಣದಿಂದ ನಿಷೇಧಿಸಿದ್ದ ಕೇಂದ್ರ ಸರ್ಕಾರ ಈಗ ಮತ್ತಷ್ಟು ಚೀನಾ ರಾಷ್ಟ್ರದ ಮೊಬೈಲ್ ಅಪ್ಲಿಕೇಶನ್‌ಗಳನ್ನು ನಿಷೇಧಿಸಿದೆ. 'ಹೆಲೋ ಲೈಟ್', 'ಶೇರ್‌ಇಟ್ ಲೈಟ್', 'ಬಿಗೊ ಲೈಟ್' ಮತ್ತು 'ವಿಎಫ್‌ವೈ ಲೈಟ್'ನಂತಹ ಹಲವು ಅಪ್ಲಿಕೇಶನ್‌ಗಳನ್ನು ನಿಷೇದಿಸಲಾಗಿದೆ. ನಿಷೇಧಕ್ಕೆ ಗುರಿಯಾದ ಆಯಪ್‌ಗಳು ಬೇರೆಯ ಆವೃತ್ತಿಯ ಮೂಲಕ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿರುವ ಕಾರಣ ಇವುಗಳನ್ನು ನಿಷೇದಿಸಿರುವದಾಗಿ ಐಟಿ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


### 25 07 2020 ಸರಳವಾಗಿ ಸ್ವಾತಂತ್ರ್ಯೋತ್ಸವ ಅಚರಣೆಗೆ ಕೇಂದ್ರದಿಂದ ಮಾರ್ಗಸೂಚಿ ಬಿಡುಗಡೆ




ನವದೆಹಲಿ : ದೇಶದಾದ್ಯಂತ ಕೊರೊನಾ ವೈರಸ್ ಹಾವಳಿ ತೀವ್ರವಾಗಿದ್ದು, ಇದು ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ದಿನಾಚರಣೆ ಸಡಗರ ಸಂಭ್ರಮಕ್ಕೆ ಅಡ್ಡಿಯುಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಈ ಬಾರಿಯ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಸರಳವಾಗಿ ಮತ್ತು ಜಾಗೃತೆಯಿಂದ ಆಚರಿಸುವಂತೆ ಎಲ್ಲ ರಾಜ್ಯಗಳಿಗೂ ಸುತ್ತೋಲೆಗಳನ್ನು ಹೊರಡಿಸಿದೆ.
* ಅಲ್ಲದೆ, ಕೇಂದ್ರ ಗೃಹ ಸಚಿವಾಲಯ ಸ್ವಾತಂತ್ರ ದಿನಾಚರಣೆಯಂದು ಅನುಸರಿಸಬೇಕಾದ ಕ್ರಮಗಳ ಕುರಿತು ವಿಶೇಷ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಅತಿ ಹೆಚ್ಚು ಜನರು ಸೇರಬಾರದು.ಅತ್ಯಂತ ಸರಳವಾಗಿ ಮತ್ತು ಮುಂಜಾಗ್ರತಾ ಕ್ರಮಗಳೊಂದಿಗೆ ರಾಷ್ಟ್ರೀಯ ಹಬ್ಬ ಆಚರಿಸಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆ, ಸ್ಯಾನಿಟೈಸರ್ ಬಳಕೆ, ಮತ್ತು ಮಾಸ್ಕ್ ಧರಿಸುವುದು ಕಡ್ಡಾಯ ಎಂದು ಕೇಂದ್ರ ಸರ್ಕಾರ ಮಾರ್ಗಸೂಚಿಯಲ್ಲಿ ತಿಳಿಸಿದೆ.

# Current affairs of July 2020 from KPSC Vaani

## 25 07 2020 ತನ್ನ ಮೊದಲ ಉಪಗ್ರಹ ಉಡಾವಣೆಗೆ ಮ್ಯಾನ್ಮಾರ್ ಸಿದ್ಧತೆ



ಮೀಕ್‌ಟಿಲಾ: ಮ್ಯಾನ್ಮಾರ್ ರಾಷ್ಟ್ರವು ತನ್ನ ಪ್ರಥಮ ಉಪಗ್ರಹವನ್ನು 2021ರ ಆರಂಭದಲ್ಲಿ ಉಡಾವಣೆ ಮಾಡುವ ನಿರೀಕ್ಷೆಯೊಂದಿಗೆ ಸಿದ್ಧತೆ ನಡೆಸಿದೆ. ಮ್ಯಾನ್ಮಾರ್ ಉಡಾವಣೆಗೊಳಿಸಲಿರುವ ಈ ಉಪಗ್ರಹವು ಪ್ರಾಕೃತಿಕ ವಿಕೋಪಗಳ ಕುರಿತು ಮುನ್ನೆಚ್ಚರಿಕೆ ನೀಡುವ ಕಾರ್ಯ ನಿರ್ವಹಿಸಲಿದೆ.

* ಈ ಮೂಲಕ ಉಪಗ್ರಹಗಳನ್ನು ಉಡಾವಣೆಗೊಳಿಸಿರುವ ಕೆಲವೇ ರಾಷ್ಟ್ರಗಳ ಪಟ್ಟಿಗೆ ಮ್ಯಾನ್ಮಾರ್ ಸೇರಲಿದೆ.

## 25 07 2020 ಚೀನಾ ವಿರೋಧಿ ಒಕ್ಕೂಟವನ್ನು ಸೇರುವುದಿಲ್ಲ ಎಂದು ಸ್ಪಷ್ಟಪಡಿಸಿದ ರಷ್ಯಾ




ಮಾಸ್ಕೋ : ಅಮೆರಿಕ, ಭಾರತ, ಜಪಾನ್ ಸೇರಿ ಕೆಲ ದೇಶಗಳೊಂದಿಗಿನ ಚೀನಾ ಸಂಬಂಧ ಅಷ್ಟು ಚನ್ನಾಗಿ ಇಲ್ಲದ ಬೆನ್ನಲ್ಲೇ ಚೀನಾದ ವಿರುದ್ಧ ಎಲ್ಲರೂ ಒಗ್ಗೂಡಬೇಕಿದೆ ಎಂದು ಅಮೆರಿಕ ಕರೆ ನೀಡಿತ್ತು. ಆದರೆ ಚೀನಾ ವಿರುದ್ಧದ ಯಾವುದೇ ಒಕ್ಕೂಟವನ್ನು ತಾನು ಸೇರುವದಿಲ್ಲ ಎಂದು ರಷ್ಯಾ ಸರ್ಕಾರ ಸ್ಪಷ್ಟಪಡಿಸಿದೆ. ರಷ್ಯಾ ಚೀನಾದೊಂದಿಗೆ ಉತ್ತಮ ಸಂಬಂಧ ಹೊಂದಿದ್ದು, ಅಲ್ಲದೆ ಉತ್ತಮ ದ್ವಿಪಕ್ಷೀಯ ಸಂಬಂಧ ಹೊಂದಿದೆ. ಹೀಗಾಗಿ ಯಾವುದೇ ಕಾರಣಕ್ಕೂ ಚೀನಾ ವಿರೋಧಿ ಒಕ್ಕೂಟವನ್ನು ಸೇರಿ ಚೀನಾ ವಿರುದ್ಧ ಯಾವುದೇ ರೀತಿಯ ಹೋರಾಟ ನಡೆಸುವುದಿಲ್ಲ ಎಂದು ರಷ್ಯಾ ಸರ್ಕಾರದ ಸ್ಪಷ್ಟಪಡಿಸಿದೆ. ಈ ಮೂಲಕ ಚೀನಾ ವಿರುದ್ಧ ಎಲ್ಲಾ ಆರ್ಥಿಕ ಹಾಗೂ ಬೇರೆ ಸ್ವರೂಪದ ಹೋರಾಟಕ್ಕೆ ರಷ್ಯಾ ಬೆಂಬಲ ನಿರೀಕ್ಷಿಸಿದ್ದ ಅಮೆರಿಕ, ಭಾರತ ಹಾಗೂ ಜಪಾನ್‌ಗೆ ಹಿನ್ನಡೆಯಾದಂತಾಗಿದೆ.

# Current affairs of July 2020 from KPSC Vaani

## 25 07 2020 ಭಾರತದ ಚೆನ್ನೈನಲ್ಲಿ ಆಪಲ್ ಐಫೋನ್ ತಯಾರಿಕಾ ಘಟಕ ಆರಂಭ



ನವದೆಹಲಿ : ಪ್ರತಿಷ್ಠಿತ ಮೊಬೈಲ್ ಮತ್ತು ಇತರ ಎಲೆಕ್ಟ್ರಿಕ್ ಉಪಕರಣಗಳ ಸಂಸ್ಥೆಯಾದ ಆಪಲ್ ಸಂಸ್ಥೆಯು ಭಾರತದ ಚೆನ್ನೈನ ಫಾಕ್ಸ್‌ಕಾನ್ ಸ್ಥಾವರದಲ್ಲಿ ತನ್ನ ಪ್ರಮುಖ ಸಾಧನಗಳಲ್ಲಿ ಒಂದಾದ ಐಫೋನ್ 11 ತಯಾರಿಕಾ ಘಟಕವನ್ನು ಆರಂಭಿಸಿದೆ ಎಂದು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರ ತಮ್ಮ ಟ್ವಿಟರ್ ಖಾತೆ ಮೂಲಕ ಮಾಹಿತಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಆತ್ಮ ನಿರ್ಭರ ಭಾರತದ ಉಪಕ್ರಮದ ಪ್ರಮುಖ ಗೆಲುವಿನಲ್ಲಿ ಆಪಲ್ ಸಂಸ್ಥೆ ತನ್ನ ತಯಾರಿಕಾ ಪ್ರಾರಂಭಿಸಿದೆ. ಭಾರತದಲ್ಲಿ ಆಪಲ್ ಟಾಪ್ ಆಫ್ ಲೈನ್ ಮಾದರಿಯನ್ನು ತಯಾರಿಸುತ್ತಿರುವುದು ಇದೇ ಮೊದಲು.

## 26 07 2020 ಪರಿಸರ ಸೂಕ್ಷ್ಮ ವಲಯಕ್ಕೆ ಸೇರ್ಪಡೆಗೊಂಡ ಕುದುರೆಮುಖ



ಬೆಂಗಳೂರು: ಹಲವು ವರ್ಷಗಳ ನಂತರ ಇದೀಗ ಕೇಂದ್ರ ಸರ್ಕಾರವು ರಾಜ್ಯದ ಕುದುರೆಮುಖ ರಾಷ್ಟ್ರೀಯ ಉದ್ಯಾನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ (Eco Sensitive Zone) ಎಂದು ಘೋಷಿಸಿದೆ. ಒಟ್ಟು 316.67 ಚದರ ಕಿ.ಮೀ ವಿಸ್ತೀರ್ಣದ, ಸಂರಕ್ಷಿತ ಪ್ರದೇಶವಾದ ಕುದುರೆಮುಖವು ಇನ್ನುಮುಂದೆ ESZ(Eco Sensitive Zone) ವ್ಯಾಪ್ತಿಗೆ ಒಳಪಡಲಿದೆ. ಇದರಿಂದಾಗಿ ESZ ಗೆ ಸೇರ್ಪಡೆಗೊಂಡ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ 58 ಗ್ರಾಮಗಳು ಮತ್ತು 108 ರೆವಿನ್ಯೂ ಆವರಣಗಳಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ನಿಷೇಧಿಸಲಾಗುವದು.

* ಸಮುದ್ರ ಮಟ್ಟದಿಂದ 135 ಮೀಟರ್ ಎತ್ತರ
* ಭಾರತ ಮತ್ತು ವಿಶ್ವದ ಸಿಂಹಗಳ ಮೂತಿಯ ಹೋಲುವ ಮಕಾಕ್ಸ ಗಳ ಏಕೈಕ ತಾಣ
* ವಿಶ್ವದ ಅತಿ ಉದ್ದದ ವಿಷಪೂರಿತ ಹಾವು, ಕಾಳಿಂಗ ಸರ್ಪ (ಕಿಂಗ್ ಕೋಬ್ರಾ)ತ್ತು ಮಲಬಾರ್ ಸ್ಲೆಂಡರ್ ಲೋರಿಸ್ಟ್ ಗಳ ನೆಲೆಯೂ ಆಗಿದೆ.

# Current affairs of July 2020 from KPSC Vaani

### 26 07 2020 ಬ್ಯಾಂಕ್ಆಫ್ಬರೋಡಾದ113ನೇಸ್ಥಾಪನಾದಿನಾಚರಣೆ




ಮಂಗಳೂರು : ಇತ್ತೀಚಿಗೆ ಬ್ಯಾಂಕ್ ಆಫ್ ಬರೋಡಾದ 113ನೇ ವರ್ಷಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು.
* ಬ್ಯಾಂಕ್ ಆಫ್ ಬರೋಡಾ ಭಾರತದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್ ಆಗಿದ್ದು, ಸ್ವ ಸೇವಾ ಚಾನೆಲ್‌ಗಳಿಂದ ಬೆಂಬಲಿತವಾಗಿದೆ.
* ಬ್ಯಾಂಕಿನ ವಿತರಣಾ ಜಾಲವು 9,500ಕ್ಕೂ ಶಾಖೆಗಳು, 13,400ಕ್ಕೂ ಎಟಿಎಂಗಳು, 1,200ಕ್ಕೂ ಸ್ವ ಸೇವಾ ಇ ಲಾಬಿಗಳು ಮತ್ತು 18,000ವ್ಯವಹಾರ ಕರೆಸ್ಪಾಂಡೆಟ್‌ಗಳನ್ನು ಒಳಗೊಂಡಿದೆ.
*21ದೇಶಗಳಲ್ಲಿ 100 ಶಾಖೆಗಳು / ಅಂಗಸಂಸ್ಥೆಗಳ ಕಚೇರಿಗಳ ನೆಟ್‌ವರ್ಕ್‌ನೊಂದಿಗೆ ತನ್ನ ಕಾರ್ಯ ವ್ಯಾಪ್ತಿ ಹೊಂದಿದೆ.

### 26 07 2020 ಕಾಶ್ಮೀರದಕೇಸರಿಗೆಭೌಗೋಳಿಕಮಾನ್ಯತೆ



ಜಮ್ಮು: ಕಾಶ್ಮೀರ ಕಣಿವೆಯಲ್ಲಿ ಬೆಳೆದ ಕೇಸರಿಗೆ ಭೌಗೋಳಿಕ ಮಾನ್ಯತೆಯ ಪ್ರಮಾಣೀಕರಣವನ್ನು ಕೇಂದ್ರ ಸರ್ಕಾರ ನೀಡಿದೆ. ಲೆಫ್ಟಿನೆಂಟ್ ಗೌರ್ನರ್ ಗಿರೀಶ್ ಚಂದ್ರ ಮುರ್ಮು ಅವರು ಕಾಶ್ಮೀರದ ಕೇಸರಿಗೆ ಜಿಐ ಸರ್ಟಿಫಿಕೇಷನ್ ಸಿಗುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.
* ಪ್ಯಾಂಪೋರ್ ಕಾಶ್ಮೀರದಲ್ಲಿನ ಕೇಸರಿ ಉತ್ಪಾದನೆಯ ಹಬ್ ಆಗಿದೆ.
* 3,715 ಹೆಕ್ಟೇರ್ ನಷ್ಟು ಪ್ರದೇಶವನ್ನು ಪುನರುಜ್ಜೀವನಗೊಳಿಸಿ ಕೇಸರಿ ಬೆಳೆ ಬೆಳೆಯುವುದಕ್ಕೆ 411 ಕೋಟಿ ರೂಪಾಯಿಗಳ ಅನುದಾನವನ್ನು ಕೇಂದ್ರ ಸರ್ಕಾರ ನೀಡಿತ್ತು.
* ಜಿಐ ಸರ್ಟಿಫಿಕೇಷನ್ ನಿಂದ ಕಾಶ್ಮೀರ ಕೇಸರಿಯ ಕಲಬೆರಕೆಯಾಗುವುದನ್ನು ನಿಲ್ಲಿಸಬಹುದಾಗಿದೆ. ಅಷ್ಟೇ ಅಲ್ಲದೇ ಕಾಶ್ಮೀರದ ಕೇಸರಿಗೆ ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಸಿಗಲಿದೆ.

# Current affairs of July 2020 from KPSC Vaani

## 26 07 2020 'ಕರ್ನಾಟಕ ಅಂಚೆ' ಇಲಾಖೆಯಿಂದ ಆನ್ ಲೈನ್ 'ರಾಖಿ ಪೋಸ್ಟ್' ಸೇವೆ ಆರಂಭ




ಬೆಂಗಳೂರು : ರಾಜ್ಯದಲ್ಲಿ ಕೊರೊನಾ ಸೋಂಕು ವ್ಯಾಪಿಸಿರುವ ಹಿನ್ನಲೆ ಕರ್ನಾಟಕ ಅಂಚೆ ಇಲಾಖೆಯು, ಮಹಿಳೆಯರಿಗಾಗಿ ಆನ್ ಲೈನ್ ರಾಕಿ ಪೋಸ್ಟ್ ಸೇವೆ ಆರಂಭಿಸಿದೆ. ಇದೆ ಆಗಸ್ಟ್ 3ರಂದು ರಕ್ಷಾ ಬಂಧನ ಆಚರಿಸಲು ಅಂಚೆ ಇಲಾಖೆ ಆನ್ ಲೈನ್ ಮೂಲಕ ರಾಖಿ ಖರೀದಿ ಮತ್ತು ರವಾನೆ ಸೇವೆಯನ್ನು ಆರಂಭಿಸಿದೆ. ಕೊರೋನಾ ವೈರಸ್ ಸೋಂಕಿನ ಭೀತಿಯಿಂದ ಜನರು ಸುರಕ್ಷಿತವಾಗಿ ರಾಖಿ ಖರೀದಿಸಲು ಮತ್ತು ಅದನ್ನು ಅವರಿಗೆ ತಲುಪಿಸಲು ತೊಂದರೆಯಾಗುವದ ಮನಗಂಡು ಅಂಚೆಇಲಾಖೆಯು ಆನ್ ಲೈನ್ ಮೂಲಕ ರಾಖಿ ಪೋಸ್ಟ್ ಮಾಡುವ ಸೇವೆಯನ್ನು ಆರಂಭಿಸಿದೆ.

## 26 07 2020 ಕಾರ್ಗಿಲ್ ವಿಜಯ್ ದಿವಸ್ : 21ನೇ ವರ್ಷಾಚರಣೆ ಸಂಭ್ರಮ ಆಚರಣೆ



ನವದೆಹಲಿ : ಕಾರ್ಗಿಲ್ ವಿಜಯದಿವಸಕ್ಕೆ ಇಂದು 21ನೇ ವರ್ಷಾಚರಣೆಸಂಭ್ರಮ.ಪಾಕಿಸ್ತಾನಸೇನೆ 1999ರಲ್ಲಿ ಕಾರ್ಗಿಲ್ ಡ್ರಾಸ್ ವಲಯದಲ್ಲಿ ಅಕ್ರಮವಾಗಿ ಪ್ರವೇಶಿಸಿ ಭಾರತದ ಪ್ರಾಂತ್ಯಗಳನ್ನು ವಶಪಡಿಸಿಕೊಂಡ ಕಾರಣ ಕೇಂದ್ರ ಸರ್ಕಾರ ಆಪರೇಷನ್ ವಿಜಯವನ್ನು ಘೋಷಿಸಿತು. ನಂತರದಲ್ಲಿ ಭಾರತೀಯ ಸೇನೆಯು ಎರಡೂವರೆ ತಿಂಗಳ ಕಾಲ ಕಾರ್ಗಿಲ್ ನಲ್ಲಿ ಯುದ್ದ ಸೆಣೆಸಿ, ಕೊನೆಗೆ ಭಾರತೀಯ ಸೇನೆ ಪಾಕಿಸ್ತಾನ ಸೇನೆಯನ್ನು ಹಿಮ್ಮೆಟ್ಟುವಲ್ಲಿ ಜುಲೈ 29, 1999ರಂದು ಯಶಸ್ವಿಯಾಯಿತು. ಈಮೂಲಕಕಾರ್ಗಿಲ್ ಪ್ರದೇಶವನ್ನು ಭಾರತೀಯ ಸೇನೆಯುತನ್ನ ವಶಕ್ಕೆ ಪಡೆಯಿತು.ಈದಿನದವಿಜಯ ಮತ್ತು ಭಾರತೀಯ ಸೈನಿಕರ ತ್ಯಾಗ, ಬಲಿದಾನಗಳನ್ನು ನೆನೆಯಲು ಪ್ರತಿವರ್ಷ ಜುಲೈ 26ನ್ನು "ಕಾರ್ಗಿಲ್ ವಿಜಯ್ ದಿವಸ" ಎಂದು ಆಚರಿಸಲಾಗುತ್ತದೆ.
* ಕಾರ್ಗಿಲ್ ಯುದ್ದದ ಸಮಯದಲ್ಲಿ ಭಾರತದ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯಾಗಿದ್ದರು, ಮತ್ತು ಪಾಕಿಸ್ತಾನ ಪ್ರಧಾನಿ ನವಾಜ್ ಷರೀಫ್ ಆಗಿದ್ದರು.

# Current affairs of July 2020 from KPSC Vaani

## 27 07 2020 ಕೋವಿಡ್ 19 ಪ್ರಕರಣಗಳ ರಿಪೋರ್ಟಿಂಗ್‌ನಲ್ಲಿ ಕರ್ನಾಟಕ ಪ್ರಥಮ, ಉತ್ತರ ಪ್ರದೇಶ ಮತ್ತು ಬಿಹಾರಗೆ ಕೊನೆ ಸ್ಥಾನ



ನವದೆಹಲಿ : ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ ಕೋರೋಣ ವರದಿಯಲ್ಲಿ ವ್ಯತ್ಯಾಸಗಳಿರುವದಾಗಿ ಸ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಸಂಶೋಧಕರ ಅಧ್ಯಯನ ತಿಳಿಸಿದ್ದು, ಸಂಶೋಧಕರು ರಚಿಸಿದ ಕೋವಿಡ್ 19 ದತ್ತಾಂಶ ವರದಿ ಸೂಚ್ಯಂಕದ ಅನುಸಾರ, ಅತ್ಯುತ್ತಮ ಕೋವಿಡ್ 19 ವರದಿಯನ್ನು ಕರ್ನಾಟಕದಿಂದ ಪಡೆದಿದೆ. ಹಾಗೂ ಕಳಪೆ ವರದಿಯನ್ನು ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ನೀಡಲಾಗಿದೆ ಎಂದು ವರದಿಯಾಗಿದೆ.

## 27 07 2020 ಆಗಸ್ಟ್ 1ರಿಂದ 5ನೇ ಹಂತದ ವಂದೇ ಭಾರತ್ ಮಿಷನ್ ಆರಂಭ



ನವದೆಹಲಿ : ವಿದೇಶಗಳಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರುವ ಉದ್ದೇಶದಿಂದ ಕೇಂದ್ರ ಸರ್ಕಾರವು ವಂದೇ ಭಾರತ್ ಮಿಷನ್ ಆರಂಭಿಸಿದ್ದು, ಈ ಯೋಜನೆಯಡಿಯಲ್ಲಿ ಅಡಿ ವಿಶೇಷ ವಿಮಾನಗಳನ್ನು ವಿದೇಶಗಳಿಗೆ ಕಳುಹಿಸಲಾಗುತ್ತಿದೆ ಹಾಗೂ ಅಲ್ಲಿ ನೆಲೆಸಿರುವ ಭಾರತೀಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲಾಗುತ್ತಿದೆ.

* ಇದೀಗ ವಂದೇ ಭಾರತ್ ಮಿಷನ್‌ನ 5ನೇ ಹಂತದ ಸಿದ್ಧತೆ ನಡೆಸಿದ್ದು, ಇದೆ ಆಗಸ್ಟ್ 1ರಿಂದ 5 ನೇ ಹಂತ ಆರಂಭವಾಗಲಿದೆ.
* ಆಗಸ್ಟ್ 1ರಿಂದ ಆರಂಭವಾಗುವ ಐದನೇ ಹಂತದಲ್ಲಿ ಅಮೆರಿಕಾ, ಕೆನಡಾ, ಕತಾರ್, ಒಮಾನ್, ಯುಎಇ, ಆಸ್ಟ್ರೇಲಿಯಾ, ಜರ್ಮನಿ, ಥೈಲ್ಯಾಂಡ್, ಸಿಂಗಾಪುರ್, ಇಂಗ್ಲೆಂಡ್, ಜರ್ಮನಿ, ಸೌದಿ ಅರೆಬಿಯಾ, ಬಹ್ರೇನ್, ನ್ಯೂಜಿಲೆಂಡ್, ಫಿಲಿಪೈನ್ಸ್ ಸೇರಿ ಅನೇಕ ರಾಷ್ಟ್ರಗಳಿಗೆ ವಿಮಾನಗಳನ್ನು ಕಳುಹಿಸಿ, ಭಾರತೀಯರನ್ನು ಕರೆತರಲು ಉದ್ದೇಶಿಸಲಾಗಿದೆ.
* ಜುಲೈ 22ರವರೆಗೂ ಕೊರೋನಾ ವೈರಸ್ ಕಾರಣದಿಂದ ವಿದೇಶದಲ್ಲಿ ಸಿಲುಕಿದ್ದ ಸುಮಾರು 7.88 ಲಕ್ಷ ಭಾರತೀಯರನ್ನು ವಂದೇ ಭಾರತ್ ಮಿಷನ್‌ನಡಿ ಭಾರತಕ್ಕೆ ವಾಪಾಸ್ ಕರೆತರಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವರದಿಮಾಡಿದೆ.

# Current affairs of July 2020 from KPSC Vaani



# Current affairs of July 2020 from KPSC Vaani

### 27 07 2020 ಕರ್ನಾಟಕ, ಕೇರಳದಲ್ಲಿ ಸಾಕಷ್ಟು ಐಸಿಸ್ ಭಯೋತ್ಪಾದಕರಿದ್ದಾರೆ: ವಿಶ್ವಸಂಸ್ಥೆ



ಕೇರಳ ಮತ್ತು ಕರ್ನಾಟಕದಲ್ಲಿ ಅಪಾರ ಸಂಖ್ಯೆಯ ಐಸಿಸ್ ಭಯೋತ್ಪಾದಕರು ಅಡಗಿದ್ದಾರೆ ಎಂದು ವಿಶ್ವಸಂಸ್ಥೆಯು ವರದಿ ಮಾಡಿದೆ. ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್ ರಾಷ್ಟ್ರಗಳಿಗೆ ಸೇರಿದಸುಮಾರು150ರಿಂದ200ಐಸಿಸ್ ಭಯೋತ್ಪಾದಕರುಕರ್ನಾಟಕಹಾಗೂಕೇರಳರಾಜ್ಯಗಳ ವ್ಯಾಪ್ತಿಯಲ್ಲಿ ತಲೆಮರೆಸಿಕೊಂಡಿರುವದಾಗಿ ವಿಶ್ವಸಂಸ್ಥೆ ತಿಳಿಸಿದೆ.

### 27 07 2020 ಕೋವಿಡ್‌ನಿಂದ ಮೃತಪಟ್ಟ ಸರ್ಕಾರಿ ನೌಕರರ ಕುಟುಂಬಕ್ಕೆ 'ವಿಶೇಷ ಪಿಂಚಣಿ' ಘೋಷಿಸಿದ ಬಿಹಾರ ಸರ್ಕಾರ




ಪಟ್ನಾ: ಕೋರೋಣ ಸೋಂಕಿನಿಂದ ಸರ್ಕಾರಿ ನೌಕರರು ನಿಧನರಾದ ಪಕ್ಷದಲ್ಲಿ ಅವರನ್ನು ಅವಲಂಬಿಸಿರುವವರಿಗೆ ' ವಿಶೇಷ ಕುಟುಂಬ ಪಿಂಚಣಿ' ನೀಡವ ನೂತನ ಅಭಿಯಾನಕ್ಕೆ ಬಿಹಾರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಸರ್ಕಾರೀ ನೌಕರರು ಕರ್ತವ್ಯದಲ್ಲಿರುವಾಗ ಕೋವಿಡ್‌ನಿಂದಾಗಿ ಸರ್ಕಾರಿ ನೌಕರರು ಮೃತಪಟ್ಟರೆ, ಅವರನ್ನು ಅವಲಂಬಿಸಿರುವವರಿಗೆ ಅನುಕಂಪದ ಆಧಾರದಲ್ಲಿ ಇತರ ಪ್ರಯೋಜನಗಳೊಂದಿಗೆ ಸರ್ಕಾರಿ ಉದ್ಯೋಗ ಕಲ್ಪಿಸಲಾಗುವುದು ಇಲ್ಲದ ಪಕ್ಷದಲ್ಲಿ ಆ ಸರ್ಕಾರಿ ನೌಕರರ ನಿವೃತ್ತಿ ದಿನದವರೆಗಿನ ವೇತನವನ್ನು 'ವಿಶೇಷ ಕುಟುಂಬ ಪಿಂಚಣಿ' ಹೆಸರಿನಲ್ಲಿ ಕುಟುಂಬಸ್ಥರಿಗೆ ನೀಡಲು ಬಿಹಾರ ಸರ್ಕಾರ ತೀರ್ಮಾನಿಸಿದೆ.

# Current affairs of July 2020 from KPSC Vaani

## 27 07 2020 ರಫ್ತು ಉತ್ತೇಜಿಸಲು ಭಾರತದಿಂದ ವಿಯೆಟ್ನಾಂನಲ್ಲಿ ತನ್ನದೇ ಆದ ಹತ್ತಿ ಉಗ್ರಾಣ ಸ್ಥಾಪನೆ



ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ(CCI)ವು ಹತ್ತಿಯ ಹೆಚ್ಚುವರಿ ದಾಸ್ತಾನುಗಳನ್ನು ಹೊಂದಿದ್ದು, ಮುಂದಿನ ಸುಗ್ಗಿಯ ಕಾಲ ಸಮೀಪಿಸುತ್ತಿರುವುದರಿಂದ ರಫ್ತು ಹೆಚ್ಚಿಸಲು ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ(CCI) ಪ್ರಯತ್ನಿಸುತ್ತಿದೆ. ಈ ಹಿನ್ನಲೆ ಹತ್ತಿಯಾ ರಫ್ತು ಹೆಚ್ಚಿಸಲು CCI ಯು ವಿಯೆಟ್ನಾಂನಲ್ಲಿ ತನ್ನದೇ ಆದ ಗೋದಾಮು ಸ್ಥಾಪಿಸಲು ಮುಂದಾಗಿದೆ. ಅಲ್ಲದೆ ಭಾರತವು 1.5 ರಿಂದ 2 ಮಿಲಿಯನ್ ಬೇಲ್ ಹತ್ತಿಯನ್ನು ರಫ್ತು ಮಾಡಲು ಬಾಂಗ್ಲಾದೇಶದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಇದು ಭಾರತ ಸರ್ಕಾರದ ಏಜೆನ್ಸಿ ಸಂಸ್ಥೆಯಾಗಿದ್ದು, ಹತ್ತಿಯ ರಫ್ತು, ವ್ಯಾಪಾರ ಮತ್ತು ಖರೀದಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾವನ್ನು ಜವಳಿ ಸಚಿವಾಲಯದಿಂದ 1985 ರಿಂದ ನಿಯಂತ್ರಿಸಲಾಗುತ್ತಿದೆ.

## 28 07 2020 ಜುಲೈ 28: ವಿಶ್ವ ಹೆಪಟೈಟಿಸ್ ದಿನ




ಪ್ರತಿ ವರ್ಷ ಜುಲೈ 28 ನೇ ತಾರೀಕಿನಂದು, ವಿಶ್ವ ಹೆಪಟೈಟಿಸ್ ದಿನವನ್ನು ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿವಿಧ ಸಂಸ್ಥೆಗಳು ಆಚರಿಸುತ್ತವೆ. ಈ ಆಚರಣೆಯ ಮುಖ್ಯ ಉದ್ದೇಶ ಹೆಪಟೈಟಿಸ್ ಅನ್ನು ನಿಯಂತ್ರನ, ಸಾರ್ವಜನಿಕರನ್ನು ಪ್ರೋತ್ಸಾಹಿಸುವದಾಗಿದೆ.
ಈ ವರ್ಷದ ಘೋಷವಾಕ್ಯ : ಹೆಪಟೈಟಿಸ್ ಮುಕ್ತ ಭವಿಷ್ಯ (Hepatitis FreeFuture)
*ಹೆಪಟೈಟಿಸ್ ಬಿ ವೈರಸ್ ಅನ್ನು ಕಂಡುಹಿಡಿದ ನೊಬೆಲ್ ಪ್ರಶಸ್ತಿ ಪುರಸ್ಕೃತ ಡಾ.ಬರೂಚ್ ಬ್ಲಂಬರ್ಗ್ ಅವರ ಜನ್ಮದಿನಾಚರಣೆಯ ಪ್ರಯುಕ್ತ ಜುಲೈ 28 ರ ದಿನವನ್ನು ಆಯ್ಕೆ ಮಾಡಲಾಯಿತು.

# Current affairs of July 2020 from KPSC Vaani

### 28 07 2020 ವಿಶ್ವಸಂಸ್ಥೆಯ ವಿಶ್ವ ವನ್ಯಜೀವಿ ಅಪರಾಧ ವರದಿ : ಹುಲಿ ದೇಹದ ಭಾಗಗಳ ಅತಿದೊಡ್ಡ ಪೂರೈಕೆದಾರರಲ್ಲಿ ಭಾರತ




ವಿಶ್ವ ಸಂಸ್ಥೆಯ ಡ್ರಗ್ಸ್ ಅಂಡ್ ಕ್ರೈಮ್ ಆಫೀಸ್ ಇತ್ತೀಚೆಗೆ ವಿಶ್ವ ವನ್ಯಜೀವಿ ಅಪರಾಧ ವರದಿಯನ್ನು ಬಿಡುಗಡೆ ಮಾಡಿತು. ಈ ವರದಿಯು ಸಂರಕ್ಷಿತ ಜೀವಿಗಳ ಕಳ್ಳಸಾಗಣೆಯ ವಿವರಗಳನ್ನು ಒಳಗೊಂಡಿದೆ. ಹಾಗೂ ಈ ವರದಿಯ ಪ್ರಕಾರ ಹುಲಿ ಭಾಗಗಳ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ವಶಪಡಿಸಿಕೊಂಡ ಸಾಗಣೆಗೆ ಥೈಲ್ಯಾಂಡ್ ಮತ್ತು ಭಾರತ ಮುಖ್ಯ ಮೂಲ ದೇಶಗಳಾಗಿವೆ ಎಂಬುದು ತಿಳಿದುಬಂದಿದೆ. ಹುಲಿ ದೇಹದ ಭಾಗಗಳು ಉತ್ತಮ ಔಷಧೀಯ ಮೌಲ್ಯಗಳನ್ನು ಹೊಂದಿವೆ. ಹುಲಿಯ ಮೂಳೆಗಳಿಂದ ಮಾಡಿದ ಔಷಧಿಗಳನ್ನು ಅಸ್ಥಿರಜ್ಜು ಗಾಯಗಳು, ಕೀಲು ಮತ್ತು ಮೂಳೆ ಮುರಿತಗಳನ್ನು ಗುಣಪಡಿಸಲು ಬಳಸಲಾಗುತ್ತದೆ.

### 28 07 2020 ಮೊದಲ ಬ್ಯಾಚ್ ನ ರಫೆಲ್ ಯುದ್ಧ ವಿಮಾನಗಳು ಭಾರತಕ್ಕೆ ಆಗಮನ



ಇದೆ ಜುಲೈ 27, 2020 ರಂದು, ಮೊದಲ ಬ್ಯಾಚ್ ರಫೆಲ್ ಜೆಟ್ಸ್ ಯುದ್ಧ ವಿಮಾನಗಳ ಮೊದಲ ಬ್ಯಾಚ್ ಭಾರತಕ್ಕೆಫ್ರಾನ್ಸ್ನಿಂದಹಾರಿವೆ.2020ರಜುಲೈ29ರಂದುಈವಿಮಾನಗಳುಭಾರತವನ್ನು ತಲುಪಲಿವೆ.
*2016ರಲ್ಲಿಭಾರತಸರ್ಕಾರವು36ರಫೆಲ್ಜೆಟ್‌ಗಳಖರೀದಿಸಲುಫ್ರಾನ್ಸ್‌ರಾಷ್ಟ್ರದ ಫ್ರೆಂಚ್ ಡಸಾಲ್ಟ್ ಏವಿಯೇಷನ್‌ನೊಂದಿಗೆ 59,000 ಕೋಟಿ ರೂ. ಮೊತ್ತದ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಭಾಗವಾಗಿ ಮೊದಲ ಬ್ಯಾಚ್ ನ ಐದು ರಫೆಲ್ ಜೆಟ್ ಗಳು ಭಾರತಕ್ಕೆ ಆಗಮಿಸಲಿವೆ, ಉಳಿದ 31 ಜೆಟ್‌ಗಳನ್ನು 2021 ರೊಳಗೆ ತಲುಪಿಸಲಾಗುವುದು.
* ಜೆಟ್‌ಗಳು ಗಂಟೆಗೆ ಗರಿಷ್ಠ2,222.6ಕಿ.ಮೀವೇಗದಲ್ಲಿಸಾಗಬಲ್ಲವು.ಹಾಗೂಇದು50,000ಅಡಿಗಳವರೆಗೆ ಮೇಲೆ ಹಾರಾಟನಡೆಸಬಹುದು.
*ಈರಫೆಲ್‌ಗಳಿಗೆಗಾಳಿಯಮಧ್ಯೆಯೇಇಂಧನತುಂಬಿಸಬಹುದು
*ರಫೆಲ್ 9,500 ಕೆಜಿ ತೂಕವನ್ನು ಸಾಗಿಸಬಲ್ಲದು.
* ಈರಫೆಲ್ ಗೆ ಜೋಡಿಸಲಾದ ಫಿರಂಗಿಗಳು ಒಂದು ನಿಮಿಷದಲ್ಲಿ 2,500ಸುತ್ತುಗಳಗುಂಡು ಹರಿಸಬಲ್ಲವು.

# Current affairs of July 2020 from KPSC Vaani

### 28 07 2020 ಜಗತ್ತಿನ ಶೇ. 70ರಷ್ಟು ಹುಲಿಗಳು ಭಾರತದಲ್ಲಿವೆ : ಸಚಿವ ಜಾವಡೇಕರ್




* ವಿಶ್ವದ ಒಟ್ಟು ಹುಲಿಗಳ ಪೈಕಿ 70% ಹುಲಿಗಳು ಭಾರತದಲ್ಲಿ ಕಂಡುಬರುತ್ತವೆ ಎಂದು ಇತ್ತೀಚಿಗೆ ಕೇಂದ್ರ ಸಚಿವ ಜಾವಡೇಕರ್‌ಮಾಹಿತಿನೀಡಿದ್ದಾರೆ.
*30,000ಆನೆಗಳು,3000ಏಕಕೊಂಬಿನಖಡ್ಗಮೃಗಗಳು ಮತ್ತು500ಕ್ಕೂಹೆಚ್ಚುಸಿಂಹಗಳಿವೆ.*1973ರಲ್ಲಿ ಕೇವಲ9ಇದ್ದಹುಲಿಸಂರಕ್ಷಿತಪ್ರದೇಶಗಳ ಸಂಖ್ಯೆ ಈಗ 50ಕ್ಕೆ ಏರಿಕೆಯಾಗಿದೆ.
* ಜಗತ್ತಿನಲ್ಲಿ 13 ದೇಶಗಳಲ್ಲಿ ಹುಲಿ ವ್ಯಾಪ್ತಿ ಇದೆ. ಭಾರತ, ಬಾಂಗ್ಲಾದೇಶ, ಭೂತಾನ್, ಕಾಂಬೋಡಿಯಾ, ಚೀನಾ, ಇಂಡೊನೇಷ್ಯಾ, ಲಾವೊ, ಮಲೇಷ್ಯಾ, ಮ್ಯಾನ್ಮಾರ್, ನೇಪಾಳ, ರಷ್ಯಾ, ಥಾಯ್ಲೆಂಡ್, ವಿಯಟ್ನಾಂ ದೇಶಗಳಲ್ಲಿ ಹುಲಿ ಸಂತತಿ ಇದೆ.
* ಅಂತರರಾಷ್ಟ್ರೀಯ 'ಹುಲಿ ದಿನ' (ಜುಲೈ29)
* ವಿಶ್ವ ಜೀವವೈವಿಧ್ಯತೆಯಲ್ಲಿಜಾಗತಿಕವಾಗಿಶೇ8ರಷ್ಟುಪಾಲುಭಾರತಹೊಂದಿರುವದುವಿಶೇಷ.*2019ರ ದತ್ತಾಂಶಗಳಪ್ರಕಾರ,ದೇಶದಲ್ಲಿ2,967ಹುಲಿಗಳಿವೆ.2006ರಲ್ಲಿ1,411ಹುಲಿಗಳಿದ್ದವು.

### 29 07 2020 ರಿಲಯನ್ಸ್‌ಜಗತ್ತಿನ2ನೇಅತಿದೊಡ್ಡಇಂಧನಕಂಪನಿ

Reliance
Industries Limited

ಮುಂಬೈ : ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್, ಜಗತ್ತಿನ ಎರಡನೇ ಅತಿ ದೊಡ್ಡ ಇಂಧನ ಕಂಪನಿಯಾಗಿ ಹೊರಹೊಮ್ಮಿದೆ. ಜಗತ್ತಿನಾದ್ಯಂತದ ಪ್ರಮುಖ ಹೂಡಿಕೆದಾರ ಸಂಸ್ಥೆಗಳು ರಿಲಯನ್ಸ್‌ನಲ್ಲಿ ಬಂಡವಾಳ ಹೂಡುತ್ತಿರುವುದರಿಂದ ಮುಕೇಶ್ ಉದ್ಯಮ ಸಾಮ್ರಾಜ್ಯ ವಿಸ್ತರಣೆಯಾಗುತ್ತಿರುವ ಹಿನ್ನಲೆ ರಿಲಯನ್ಸ್ ಜಗತ್ತಿನ 2ನೇ ಅತಿ ದೊಡ್ಡ ಇಂಧನ ಕಂಪನಿಯಾಗಿ ಹೊರಹೊಮ್ಮಿದೆ.
* ಎಕ್ಸಾನ್‌ವೊಬಿಲ್ ಕಾರ್ಪೆರೇಷನ್ ಕಂಪನಿಯನ್ನು ಎರಡನೇ ಸ್ಥಾನದಿಂದ ಕೆಳಗಿಳಿದಿದ್ದು, ಆ ಸ್ಥಾನವನ್ನು ರಿಲಯನ್ಸ್ ಅಲಂಕರಿಸಿದೆ.
*ಇನ್ನು ಸೌದಿ ಅರೇಬಿಯಾದ ಇಂಧನ ದೈತ್ಯ ಆರಾಮ್ಕೊ ಜಗತ್ತಿನ ಅತಿ ದೊಡ್ಡ ಇಂಧನ ಕಂಪನಿಯಾಗಿದೆ.

# Current affairs of July 2020 from KPSC Vaani

### 29 07 2020 ಮತ್ತೆ 47 ಚೀನೀ ಮೊಬೈಲ್ ಆಯಪ್‌ಗಳ ನಿಷೇಧಿಸಿದ ಭಾರತ




ನವದೆಹಲಿ **:** ಭಾರತ ಚೀನಾ ಗಡಿಯಲ್ಲಿ ತೀವ್ರ ಉದ್ವಿಗ್ನತೆಯ ನಡುವೆಯೂ ರಾಷ್ಟ್ರೀಯ ಭದ್ರತೆ, ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಅಪಾಯವನ್ನುಂಟುಮಾಡುತ್ತದೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಇತ್ತೀಚಿಗೆ 59 ಚೀನಿ ಆಯಾಪ್'ಗಳನ್ನು ನಿಶೇದಿಸಿತ್ತು, ಈಗ ಮತ್ತೆ 47 ಚೀನೀ ಮೊಬೈಲ್ ಆಯಪ್‌ಗಳನ್ನು ನಿಷೇಧಿಸಿರುವುದಾಗಿ ತಿಳಿದುಬಂದಿದೆ.
* ಇದರೊಂದಿಗೆ ಇಲ್ಲಿಯವರೆಗೆ ನಿಷೇಧಿಸಲಾದ ಮೊಬೈಲ್ ಚೀನಿ ಅಪ್ಲಿಕೇಶನ್‌ಗಳ ಸಂಖ್ಯೆ 106ಆಗಿದೆ.

### 29 07 2020 ಹವಾಮಾನ ಮುನ್ಸೂಚನೆ ತಿಳಿಯಲು ಕೇಂದ್ರ ಸರ್ಕಾರದಿಂದ `ಮೌಸಮ್' ಆಯಪ್ ಬಿಡುಗಡೆ




ನವದೆಹಲಿ : ಕೇಂದ್ರ ಭೂ ವಿಜ್ಞಾನ ಇಲಾಖೆಯಿಂದ ಹವಾಮಾನ ಮುನ್ಸೂಚನೆ ಹಾಗೂ ವೈಪರೀತ್ಯಗಳ ಕುರಿತ ಮುನ್ನೆಚ್ಚರಿಕೆ ಸಲುವಾಗಿ ನೂತನ ಮೊಬೈಲ್ ಆಯಪ್ ಅಭಿವೃದ್ಧಿ ಪಡಿಸಿದ್ದು, ಈ ಆಯಪ್ ಮೂಲಕ ಹವಾಮಾನ ಮುನ್ಸೂಚನೆ ಹಾಗೂ ನಗರದ ಇತರ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದಾಗಿದೆ.
* ಈ ಆಯಪ್ ಅನ್ನು ಭೂವಿಜ್ಞಾನ ಸಚಿವ ಡಾ. ಹರ್ಷವರ್ಧನ್ ಅವರು ಇತ್ತೀಚಿಗೆ ಬಿಡುಗಡೆ ಮಾಡಿದರು.
* ಮೌಸಮ್ ಹೆಸರಿನ ಮೊಬೈಲ್ ಆಯಪ್ ಮೂಲಕ ದೇಶದ 200 ನಗರಗಳ ಪ್ರಸಕ್ತ ತಾಪಾಮಾನ, ತೇವಾಂಶ, ಆರ್ದ್ರತೆ, ಗಾಳಿಯ ವೇಗ ಹಾಗೂ ದಿಕ್ಕಗಳ ವಿವರಗಳನ್ನು ಪಡೆಯಬಹುದಾಗಿದೆ.
* ಮೌಸಮ್ ಹೆಸರಿನ ಈ ಮೊಬೈಲ್ ಅಯಪ್ ಅನ್ನು "ಇಂಟರ್ನ್ಯಾಷನಲ್ ಕಾರ್ಪ್ಸ್ ಇನ್ಸ್ಟಿಟ್ಯೂಟ್ ಫಾರ್ ಸೆಮಿ ಆರಿಟ್ ಟ್ರಾಫಿಕ್ಸ್, ಇಂಡಿಯನ್ ಇನ್ಸ್ಟಿಟ್ಯೂಟ್ ಟ್ರಾಪಿಕಲ್ ಮೆಟಿಯಾಲಜಿ, ಪುಣೆ ಮತ್ತು ಭಾರತದ ಹವಾಮಾನ ಇಲಾಖೆ ಜಂಟಿಯಾಗಿ ಅಭಿವೃದ್ಧಿಪಡಿಸಿದೆ.

# Current affairs of July 2020 from KPSC Vaani

### 29 07 2020 ICC ರ್‍ಯಾಂಕಿಂಗ್ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ನಂ.1




ಮುಂಬೈ : ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ICC) ಇತ್ತೀಚಿಗೆ ನೂತನ ಏಕದಿನ ಕ್ರಿಕೆಟ್ ಬ್ಯಾಟ್ಸ್ ಮನ್ ಗಳ ಕ್ರಮಾಂಕ ಪಟ್ಟಿ ಬಿಡುಗಡೆ ಮಾಡಿದ್ದು, ಟೀಂ ಇಂಡಿಯಾ ನಾಯಕ ವಿರಾಟ್ ಕೊಹ್ಲಿ ನಂ.1ಸ್ಥಾನ ಪಡೆದಿದ್ದಾರೆ.

*ಟೀಂ ಇಂಡಿಯಾದ ಉಪನಾಯಕ ರೋಹಿತ್ ಶರ್ಮಾ 2ನೇ ಸ್ಥಾನ ಪಡೆದಿದ್ದಾರೆ.

* ಬೌಲರ್ ಗಳ ಪಟ್ಟಿಯಲ್ಲಿ ಭಾರತದ ಜಸ್ಪ್ರಿತ್ ಬುಮ್ರಾ 2 ನೇ ಸ್ಥಾನ ಪಡೆದುಕೊಂಡರೆ, ನ್ಯೂಜಿಲೆಂಡ್ ಟ್ರೆಂಟ್ ಬೌಲ್ಟ್ ಮೊದಲ ಸ್ಥಾನದಲ್ಲಿದ್ದರೆ.

### 29 07 2020 ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇನ್ನುಮುಂದೆ 'ಶಿಕ್ಷಣ ಸಚಿವಾಲಯ'




ನವದೆಹಲಿ : ಕೇಂದ್ರ ಸಚಿವ ಸಂಪುಟ ಬುಧವಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂಗೀಕರಿಸಿದ್ದು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಶಿಕ್ಷಣ ಸಚಿವಾಲಯವೆಂದು ಮರುನಾಮಕರಣ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು 1986ರಲ್ಲಿ ರೂಪಿಸಲಾಗಿತ್ತು, ಹಾಗೂ 1992ರಲ್ಲಿ ಇದಕ್ಕೆ ಮಾರ್ಪಾಡು ಮಾಡಲಾಯಿತು. ಅದು ಜಾರಿಗೆ ಬಂದ ಸುಮಾರು ಮೂರು ದಶಕಗಳ ನಂತರ ಹೊಸ ಶಿಕ್ಷಣ ನೀತಿಗೆ ಅನುಮೋದನೆ ನೀಡಲಾಗಿದೆ ಎಂದು ಮಾನವ ಸಂಪನ್ಮೂಲ ಸಚಿವಾಲಯ ತಿಳಿಸಿದೆ.

# Current affairs of July 2020 from KPSC Vaani

**29 07 2020 ಹುಲಿಗಣತಿವರದಿಪ್ರಕಟ : ದೇಶದಲ್ಲೇನಾಗರಹೊಳೆ ಅಭಯಾರಣ್ಯಕ್ಕೆ 2ನೇ ಸ್ಥಾನ**



ನವದೆಹಲಿ : ಜುಲೈ 29 ರ ವಿಶ್ವ ಹುಲಿ ದಿನಾಚರಣೆ ಪ್ರಯುಕ್ತ ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಅವರು4ನೇ 'ಅಖಿಲಭಾರತಹುಲಿಅಂದಾಜು 2018'ಹೆಸರಿನ600ಪುಟಗಳಹುಲಿಗಣತಿವರದಿಬಿಡುಗಡೆ ಮಾಡಿದ್ದು, ಈ ವರದಿ ಅನುಸಾರ ಮಧ್ಯ ಪ್ರದೇಶ ರಾಜ್ಯದಲ್ಲಿ 526 ಹುಲಿಗಳನ್ನು ಹೊಂದಿದೆ, ಈ ಮೂಲಕ ದೇಶದಲ್ಲೇ ಅತಿ ಹೆಚ್ಚು ಹುಲಿ ಹೊಂದಿರುವ ರಾಜ್ಯ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಇನ್ನು 2 ಮತ್ತು 3ನೇ ಸ್ಥಾನದಲ್ಲಿ ಕರ್ನಾಟಕ ಅಭಯಾರಣ್ಯಗಳು ಸ್ಥಾನಪಡಿದಿವೆ.

* ರಾಜ್ಯದಲ್ಲಿ 524ಹುಲಿಗಳನ್ನಹೊಂದಿರುವನಾಗರಹೊಳೆಅಭಯಾರಣ್ಯಕ್ಕೆ2ನೇಸ್ಥಾನಪಡೆದಿದೆ.
*ಬಂಡೀಪುರ ಅಭಯಾರಣ್ಯ 126 ಹುಲಿಗಳನ್ನ ಹೊಂದುವ ಮೂಲಕ 3ನೇ ಸ್ಥಾನದಲ್ಲಿದೆ.
* ಅಸ್ಸಾಂನ ಕಾಜಿರಂಗಾ ಹಾಗೂಮಧ್ಯಪ್ರದೇಶದಬಾಂಧವಗಢಅರಣ್ಯದಲ್ಲಿತಲಾ104ಹುಲಿಗಳಿವೆ.

**30 07 2020 ರಾಜ್ಯದಲ್ಲಿ ಲೈಫ್ ಸೈನ್ಸ್ ಪಾರ್ಕ್ ಆರಂಭಕ್ಕೆ ಚಾಲನೆ ನೀಡಿದ ಸಿಎಂ ಯಡಿಯೂರಪ್ಪ**




ಬೆಂಗಳೂರು : 150ಕ್ಕೂ ಹೆಚ್ಚು ಜೈವಿಕ ತಂತ್ರಜ್ಞಾನ ಸ್ಥಾಪನೆಗೆ ಅವಕಾಶ ಮಾಡಿಕೊಡಲಿರುವ "ಲೈಫ್ ಸೈನ್ಸ್ ಕಂಪನಿ ಪಾರ್ಕ್" ಸ್ಥಾಪನೆಗಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಚಾಲನೆ ನೀಡಿದರು. ಬೆಂಗಳೂರು ನಗರದ ಸಮೀಪವಿರುವ ಎಲೆಕ್ಟ್ರಾನಿಕ್ ಸಿಟಿಯಾ ಲ್ಯಾಬ್ ಝೋನ್ ಎಲೆಕ್ಟ್ರಾನಿಕ್ ಸಿಟಿ ಪ್ರೈ.ಲಿ ಈ ಪಾರ್ಕನ್ನು ಅಭಿವೃದ್ಧಿಪಡಿಸಲಿದೆ.

* ಬೆಂಗಳೂರು ಲೈಫ್ ಸೈನ್ಸ್ ಪಾರ್ಕ್ ಸ್ಥಾಪನೆಯಿಂದ 150ಕ್ಕೂ ಹೆಚ್ಚು ಕಂಪನಿಗಳು ಇಲ್ಲಿ ನೆಲೆಗೊಳ್ಳಲಿವೆ. ಸುಮಾರು 50 ಸಾವಿರಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಯಾಗುವ ನಿರೀಕ್ಷೆಯಿರುವದಾಗಿ ಮುಖ್ಯಮಂತ್ರಿ ತಿಳಿಸಿದರು.

# Current affairs of July 2020 from KPSC Vaani

## 30 07 2020 ಕೊರೊನಾ ವೈರಸ್ : ಇಸ್ರೇಲ್‌ನಿಂದ ಭಾರತಕ್ಕೆ ವೈದ್ಯಕೀಯ ಸಲಕರಣೆಗಳ ಪೂರೈಕೆ



ಜೆರುಸಲೆಂ : ಕೊರೊನಾ ವೈರಸ್ ಅನ್ನು ನಿಯಂತ್ರಿಸಲು ನಾವು ಭಾರತಕ್ಕೆ ಹೊಸ ತಂತ್ರಜ್ಞಾನದ ಸುಧಾರಿತ ವೈದ್ಯಕೀಯ ಉಪಕರಣಗಳನ್ನು ಪೂರೈಸಿದ್ದೇವೆ ಹಾಗೂ ಈ ಮೂಲಕ ಭಾರತದೊಂದಿಗಿನ ನಮ್ಮ ಸಂಬಂಧವನ್ನು ಮತ್ತಷ್ಟು ಉತ್ತಮಪಡಿಸಿಕೊಂಡಿರುವದಾಗಿ ಇಸ್ರೇಲ್ ತಿಳಿಸಿದೆ. ಇಸ್ರೇಲ್ ರಾಷ್ಟ್ರದಿಂದ ಸಂಶೋಧಕರು, ರಕ್ಷಣಾ ತಜ್ಞರು ಮತ್ತು ಆಧುನಿಕ ವೈದ್ಯಕೀಯ ಸಲಕರಣೆಗಳನ್ನು ಹೊತ್ತು ವಿಶೇಷ ವಿಮಾನವು ಜುಲೈ 27 ರಂದು ಭಾರತಕ್ಕೆ ಬಂದಿಳಿದಿದೆ. ಈ ಮೂಲಕ ಭಾರತ ಮತ್ತು ಇಸ್ರೇಲ್‌ನ ಸಂಶೋಧಕರ ತಂಡಗಳು ಜೊತೆಗೂಡಿ ಕೋವಿಡ್ ಸೋಂಕಿನ ಪರೀಕ್ಷೆಗಾಗಿ ರ‌್ಯಾಪಿಡ್ ಪರೀಕ್ಷಾ ಕಿಟ್ ಅಭಿವೃದ್ಧಿಪಡಿಸಲಿದ್ದಾರೆ.

* ಏಪ್ರಿಲ್ 7 ರಂದು ಭಾರತವು ಹೈಡ್ರಾಕ್ಸಿಕ್ಲೋರೋಕ್ವಿನ್ ಮಾತ್ರೆಗಳು ಮತ್ತು ವೈದ್ಯಕೀಯ ಸಲಕರಣೆಗಳು ಸೇರಿದಂತೆ ಒಟ್ಟು 5 ಟನ್ ಔಷಧಿಗಳನ್ನು ಇಸ್ರೇಲ್ ರಾಷ್ಟ್ರಕ್ಕೆ ರಫ್ತು ಮಾಡಿತ್ತು.

## 31 07 2020 COVID 19 ರೋಗಿಗಳ ರಾಷ್ಟ್ರೀಯ ಕ್ಲಿನಿಕಲ್ ನೋಂದಾವಣೆ



ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ICMR) ಹಾಗೂ ಏಮ್ಸ್(AIIMS) ಜಂಟಿಯಾಗಿ, ಆಸ್ಪತ್ರೆಗಳಲ್ಲಿ ಕೋರೋಣ ಸೋಂಕಿತರ ಚಿಕಿತ್ಸೆಯನ್ನು ಸುಧಾರಿಸುವ ಸದುದ್ದೇಶದಿಂದ ದೇಶಾದ್ಯಂತ ದಾಖಲಾದ COVID 19 ರೋಗಿಗಳ ಹೊಸ ಡೇಟಾಬೇಸ್ ಅನ್ನು ಸಂಗ್ರಹಿಸುತ್ತಿವೆ. ಈ ದತ್ತಾಂಶ ಸಂಗ್ರಹಕ್ಕೆ "COVID 19 ರೋಗಿಗಳಿಗೆ ರಾಷ್ಟ್ರೀಯ ಕ್ಲಿನಿಕಲ್ ನೋಂದಣಿ" ಎಂದು ಹೆಸರಿಸಲಾಗಿದೆ. ಈ ದತ್ತಾಂಶವು ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲು ಮತ್ತು ಮಾರಕ ವೈರಸ್ ವಿರುದ್ಧ ಅದರ ಪ್ರತಿಕ್ರಿಯೆಯನ್ನು ಅಧ್ಯಯನ ಮಾಡಲು ಒಂದು ಉತ್ತಮ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ. ನೋಂದಾವಣೆಯನ್ನು ರಚಿಸುವ ಮುಖ್ಯ ಉದ್ದೇಶ:

* ರೋಗದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು
* ವಿಭಿನ್ನ ಜನರ ಮೇಲೆ ವಿಭಿನ್ನ ರೀತಿಯಲ್ಲಿ ಹೇಗೆ ಪರಿಣಾಮ ಬೀರುತ್ತಿದೆ ಎಂಬುದರ ಅಧ್ಯಯನ
* ಪ್ರತಿಯೊಬ್ಬರಿಗೂ ಒಂದೇ ರೀತಿಯ ಚಿಕಿತ್ಸೆ ಏಕೆ ಪರಿಣಾಮ ಬಿರುತ್ತಿಲ್ಲ ಎಂಬುದನ್ನು ಆರೋಗ್ಯ ಅಧಿಕಾರಿಗಳಿಗೆ ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ.

# Current affairs of July 2020 from KPSC Vaani

### 31 07 2020 COVID 19ವಿರುದ್ಧ ಹೋರಾಡಲು ಭಾರತಕ್ಕೆ ಏಶಿಯನ್ ಡೆವಲಪ್ಮೆಂಟ್ ಬ್ಯಾಂಕ್ ನಿಂದ 3 ಮಿಲಿಯನ್ USD ಅನುಮೋದನೆ.

ಜಾಗತಿಕವಾಗಿ ಬಹುತೇಕ ಎಲ್ಲ ರಾಷ್ಟ್ರಗಳು COVID 19 ಸೋಂಕಿನಿಂದ ತತ್ತರಿಸಿರುವ ಹಿನ್ನಲೆ ಕೋರೋಣ ವಿರುದ್ಧದ ಹೋರಾಡಲು ಭಾರತಕ್ಕೆ ಏಷ್ಯಾ ಪೆಸಿಫಿಕ್ ವಿಪತ್ತು ಪ್ರತಿಕ್ರಿಯೆ ನಿಧಿಯಿಂದ 3ಮಿಲಿಯನ್USD(22 ಕೋಟಿರೂ.ಗೆಸಮಾನ)ಅನುದಾನವನ್ನು ನೀಡಲು ಏಷ್ಯನ್‌ಡೆವಲಪ್ಮೆಂಟ್ ಬ್ಯಾಂಕ್ ನಿರ್ಧರಿಸಿದೆ.
* ಈ ಅನುದಾನಕ್ಕೆ ಹಣಕಾಸನ್ನು ಜಪಾನಿನ ಸರ್ಕಾರವು ಒದಗಿಸಲಿದೆ.
* ಥರ್ಮಲ್ ಸ್ಕ್ಯಾನರ್‌ಗಳು, ರೋಗದ ಪತ್ತೆ, ಸಂಪರ್ಕ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಯನ್ನು ನೀಡಲು ಇದನ್ನು ಬಳಸಲಾಗುವದು.

ಏಷ್ಯನ್ ಅಭಿವೃದ್ಧಿ ಬ್ಯಾಂಕ್ : ಏಶಿಯನ್ ಡೆವಲಪ್ಮೆಂಟ್ ಬ್ಯಾಂಕ್ (ABD) 1966 ರಲ್ಲಿ ಸ್ಥಾಪಿಸಲಾದ ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್ ಆಗಿದೆ. ಇದರ ಪ್ರಧಾನ ಕಚೇರಿಯು ಫಿಲಿಪ್ಪೈನ್ಸ್‌ನ ಮನಿಲಾದಲ್ಲಿದೆ. ಭಾರತವು ಈ ಬ್ಯಾಂಕ್ ಸ್ಥಾಪನೆಯಾದಾಗಿನಿಂದಲೂ ಸದಸ್ಯರಾಷ್ಟ್ರವಾಗಿದೆ.

### 31 07 2020 ದೆಹಲಿಯಲ್ಲಿ ನೈಟ್ರೋಜನ್ ಡೈಆಕ್ಸೈಡ್ ಮಟ್ಟ 70% ರಷ್ಟು ಕುಸಿತ = ವಿಶ್ವಸಂಸ್ಥೆ



ಕೋರೋಣ ಸೋಂಕಿನ ಭೀತಿಯಿಂದ ದೇಶಾದ್ಯಂತ ವಿಧಿಸಿದ್ದ ಲಾಕ್ ಡೌನ್ ಸಮಯದಲ್ಲಿ ನವದೆಹಲಿಯಲ್ಲಿ ನೈಟ್ರೋಜನ್ ಡೈಆಕ್ಸೈಡ್ ಮಟ್ಟವು ಶೇಕಡಾ 70% ಕ್ಕಿಂತಲೂ ಕಡಿಮೆಯಾಗಿದೆ ಎಂದು ಜುಲೈ 28, 2020 ರಂದು ವಿಶ್ವಸಂಸ್ಥೆಯು ವರದಿ ಮಾಡಿದೆ. ಆದರೂ, ಇದು ತಾತ್ಕಾಲಿಕವಾಗಿದ್ದು, ಅನ್ಲಾಕ್ ನಂತರ ಇದು ಬದಲಾಗಬುದೆಂದು ಅಂತರರಾಷ್ಟ್ರೀಯ ಸಂಘಟನೆಯ ಅಭಿಪ್ರಾಯಾಗಿದೆ.
* ಇತರ ದೇಶಗಳಲ್ಲೂ ನೈಟ್ರೋಜನ್ ಡೈಆಕ್ಸೈಡ್ ಮಟ್ಟ ಕುಸಿದಿದ್ದು, ಚೀನಾದಲ್ಲಿ 40%, ಬೆಲ್ಜಿಯಂನಲ್ಲಿ 20% ರಷ್ಟು ಮತ್ತು ಯುಎಸ್‌ಎದಲ್ಲಿ 19 40% ರಷ್ಟು ಕುಸಿದಿರುವದಾಗಿ ವರದಿಯಾಗಿದೆ.

# Current affairs of July 2020 from KPSC Vaani

### 31 07 2020 ಕೇಂದ್ರ ಸರ್ಕಾರದಿಂದ TV ಆಮದಿಗೆ ನಿರ್ಬಂಧ




ನವದೆಹಲಿ: ದೇಶದಲ್ಲಿನ TV ತಯಾರಕರನ್ನು ಪ್ರೋತ್ಸಾಹಿಸುವ ಮತ್ತು TV ಯಂತಹ ತೀರಾ ಅಗತ್ಯವಲ್ಲದ ವಸ್ತುಗಳನ್ನು ನೆರೆಯ ಚೀನಾದಂತಹ ರಾಷ್ಟ್ರಗಳಿಂದ ಆಮದು ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು TV ಆಮದು ಮಾಡಿಕೊಳ್ಳುವದನ್ನು ನಿಷೇಧಿಸಿ ಕ್ರಮ ಕೈಗೊಂಡಿದೆ.
* ಕಲರ್ ಟಿ.ವಿ.ಗೆ ಸಂಬಂಧಿಸಿದ ಆಮದು ನೀತಿಯಲ್ಲಿ ತಿದ್ದುಪಡಿ ತರಲಾಗಿದ್ದು, ಅದನ್ನು ಮುಕ್ತ ವರ್ಗದಿಂದ, ನಿರ್ಬಂಧಿತ ವರ್ಗಕ್ಕೆ ತರಲಾಗಿದೆ' ಎಂದು ವಿದೇಶ ವಹಿವಾಟುಗಳ ಮಹಾನಿರ್ದೇಶನಾಲಯ ಹೇಳಿದೆ.
* 'ನಿರ್ಬಂಧಿತ' ವರ್ಗದ ಪಟ್ಟಿಯಲ್ಲಿರುವ ವಸ್ತುಗಳನ್ನು ಆಮದಿಗೆ ಪರವಾನಗಿ ಅಗತ್ಯವಾಗಿರುತ್ತದೆ. ಭಾರತಕ್ಕೆ ಅತಿಹೆಚ್ಚಿನ ಸಂಖ್ಯೆಯಲ್ಲಿ ಟಿ.ವಿ.ಗಳನ್ನು ರಫ್ತು ಮಾಡುವಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದು, ನಂತರದ ಸ್ಥಾನಗಳಲ್ಲಿ ವಿಯೆಟ್ನಾಂ, ಮಲೇಷ್ಯಾ, ಹಾಂಗ್‌ಕಾಂಗ್, ಕೊರಿಯಾ, ಇಂಡೊನೇಷ್ಯಾ, ಥಾಯ್ಲೆಂಡ್ ಮತ್ತು ಜರ್ಮನಿ ಗಳು ಸ್ಥಾನ ಪಡೆದಿವೆ.

### 31 07 2020 ಪ್ರಧಾನಿ ಮೋದಿಯಿಂದ ಭಾರತದ ನೆರವಿನೊಂದಿಗೆ ನಿರ್ಮಿಸಿದ ಮಾರಿಷಸ್ ಸುಪ್ರೀಂಕೋರ್ಟ್ ಕಟ್ಟಡ ಉದ್ಘಾಟನೆ



ನವದೆಹಲಿ: ಭಾರತವು ಮಾರಿಷಸ್ ರಾಷ್ಟ್ರಕ್ಕೆ ಸುಪ್ರೀಂ ಕೋರ್ಟ್ ನಿರ್ಮಿಸಲು ಆರ್ಥಿಕ ನೆರವನ್ನು ನೀಡಿತ್ತು, ಸದರಿ ಮಾರಿಷಸ್ ನ ಸುಪ್ರೀಂ ಕೋರ್ಟ್ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಆ ರಾಷ್ಟ್ರದ ಪ್ರಧಾನಿ ಪ್ರವಿಂದ ಕುಮಾರ ಜಗನ್ನಾಥ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಜಂಟಿಯಾಗಿ ನೂತನ ಕಟ್ಟವನ್ನು ಉದ್ಘಾಟಿಸಿದರು.
* ಭಾರತವು ತನ್ನ ವಿದೇಶ ನೀತಿಯ ಭಾಗವಾಗಿ ಹಿಂದು ಮಹಾಸಾಗರ ವಲಯದ ದೇಶಗಳ ಸಹಕಾರ, ಸಹಭಾಗಿತ್ವದ ಅಂಗವಾಗಿ ಭಾರತ ಮಾರಿಷಸ್‌ಗೆ ನೆರವು ನೀಡಿದೆ.
* 'ಸತ್ಯಮೇವ ಜಯತೆ' ಸಿದ್ಧಾಂತದಲ್ಲಿ ತಮ್ಮ ದೇಶಕ್ಕೆ ನಂಬಿಕೆಯಿದೆ ಎಂದ ಮಾರಿಷಸ್ ಪ್ರಧಾನಿ ತಮ್ಮ ಭಾಷಣದಲ್ಲಿ ತಿಳಿಸಿದರು.
* ಸುಪ್ರೀಂಕೋರ್ಟ್ ನೂತನ ಕಟ್ಟಡ ರಾಜಧಾನಿ ಪೋರ್ಟ್ ಲೂಯಿಸ್‌ನಲ್ಲಿದೆ.
*2016ರಲ್ಲಿ ಭಾರತ 2,643 ಕೋಟಿ ರೂಪಾಯಿ ಮೊತ್ತದ ಐದು ಯೋಜನೆಗಳ ವಿಶೇಷ ಆರ್ಥಿಕ ಪ್ಯಾಕೇಜ್‌ನ ಭಾಗವಾಗಿ ಕಟ್ಟಡ ನಿರ್ಮಾಣಕ್ಕೆ ನೆರವು ನೀಡಿತ್ತು.

# Current affairs of July 2020 from KPSC Vaani

